# CPIML

LIBERATION

ಭಾರತ ಕಮ್ಯೂನಿಸ್ಟ್ ಪಕ್ಷ
(ಮಾರ್ಕ್ಸ್‌ವಾದಿ – ಲೆನಿನ್‌ವಾದಿ)
(ಲಿಬರೇಷನ್)

# ಪ್ರಥಮ ರಾಜ್ಯ ಸಮ್ಮೇಳನದ ದಾಖಲಾತಿಗಳು

## ಕರ್ನಾಟಕ

ಮೊದಲನೇ ರಾಜ್ಯ ಸಮ್ಮೇಳನದಲ್ಲಿ
ಅಳವಡಿಸಿಕೊಳ್ಳಲಾಗಿರುವುದು

ಜೆ. ಶಂಕರನ್ ಸಭಾಂಗಣ, ಬೆಂಗಳೂರು
2 ಮತ್ತು 3ನೇ ಡಿಸೆಂಬರ್ 2017

**ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ – ಲೆನಿನ್‌ವಾದಿ) (ಲಿಬರೇಷನ್)**
**ಪ್ರಥಮ ರಾಜ್ಯ ಸಮ್ಮೇಳನದ ದಾಖಲಾತಿಗಳು ಕರ್ನಾಟಕ**

**ಮೊದಲನೇ ರಾಜ್ಯ ಸಮ್ಮೇಳನದಲ್ಲಿ ಅಳವಡಿಸಿಕೊಳ್ಳಲಾಗಿರುವುದು**
ಜೆ. ಶಂಕರನ್ ಸಭಾಂಗಣ, ಬೆಂಗಳೂರು
2 ಮತ್ತು 3ನೇ ಡಿಸೆಂಬರ್ 2017

ಪ್ರಕಟಿಸಿದವರು:
ಭಾರತೀಯ ಕಮ್ಯುನಿಸ್ಟ್ ಪಕ್ಷ
(ಮಾರ್ಕ್ಸ್‌ವಾದಿ – ಲೆನಿನ್‌ವಾದಿ) (ಲಿಬರೇಶನ್) ಪರವಾಗಿ,
ರಾಜ್ಯ ಕಾರ್ಯದರ್ಶಿ,
16/3, ಮುನಿಕದಿರಪ್ಪಾ ಲೇಔಟ್, ಗ್ರಫೈಟ್ ರಸ್ತೆ,
ಹೂಡಿ, ಬೆಂಗಳೂರು  560048
ಮೊಬೈಲ್ ಸಂಖ್ಯೆ: 9483191035
ಇ–ಮೇಲ್: cpiml.karnataka@gmail.com

ಸೂಚಿಸಲಾದ ಕೊಡುಗೆ: ರು. 20

ಮುದ್ರಣಾ : ಕನ್ನಡ ಲಿಬರೇಶನ್ ಪ್ರಿಂಟರ್ಸ್
16/3, ಮುನಿಕದಿರಪ್ಪಾ ಲೇಔಟ್, ಗ್ರಾಫೈಟ್ ರಸ್ತೆ,
ಹೂಡಿ, ಬೆಂಗಳೂರು  560048

# ಭಾರತೀಯ ಕಮ್ಯುನಿಸ್ಟ್ ಪಕ್ಷ
# (ಮಾರ್ಕ್ಸ್‌ವಾದಿ – ಲೆನಿನ್‌ವಾದಿ) (ಲಿಬರೇಶನ್)

# ಕರ್ನಾಟಕ ರಾಜ್ಯ ಸಮಾವೇಶದ ದಾಖಲಾತಿಗಳು

ಕರ್ನಾಟಕ ರಾಜ್ಯ ಸಮಾವೇಶದ ದಾಖಲಾತಿಗಳು
ಮೊದಲನೇ ಪ್ರಕಟಣೆ ನವೆಂಬರ್ 2018

ಪ್ರಕಟಿಸಿದವರು:
ಭಾರತೀಯ ಕಮ್ಯುನಿಸ್ಟ್ ಪಕ್ಷ
(ಮಾರ್ಕ್ಸ್‌ವಾದಿ – ಲೆನಿನ್‌ವಾದಿ) (ಲಿಬರೇಶನ್) ಪರವಾಗಿ,
ರಾಜ್ಯ ಕಾರ್ಯದರ್ಶಿ,
ಕರ್ನಾಟಕ
16/3, ಮುನಿಕದಿರಪ್ಪಾ ಲೇಔಟ್, ಗ್ರಫೈಟ್ ರಸ್ತೆ,
ಹೂಡಿ, ಬೆಂಗಳೂರು – 560048
ಮೊಬೈಲ್ ಸಂಖ್ಯೆ: 9483191035
ಇ–ಮೇಲ್: cpiml.karnataka@gmail.com

ಸೂಚಿಸಲಾದ ಕೊಡುಗೆ: ರು. 20

ಮುದ್ರಣಾ : ಕನ್ನಡ ಲಿಬರೇಶನ್ ಪ್ರಿಂಟರ್ಸ್
16/3, ಮುನಿಕದಿರಪ್ಪಾ ಲೇಔಟ್, ಗ್ರಾಫೈಟ್ ರಸ್ತೆ,
ಹೂಡಿ, ಬೆಂಗಳೂರು – 560048

# I

# ಕರ್ನಾಟಕ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿ ಹಾಗೂ ನಮ್ಮ ಜವಾಬ್ದಾರಿ

ಮೊದಲಿಗೆ ನಮ್ಮ ಪಕ್ಷದ ರಾಜ್ಯ ಮಂಚೂಣಿ ತಂಡವು ನಕ್ಸಲ್‌ಬಾರಿಯ ಹೋರಾಟಕ್ಕೆ, ಕ್ರಾಂತಿಕಾರಿ ಹೋರಾಟಗಳಲ್ಲಿ ಮಡಿದ ಹುತಾತ್ಮರಿಗೆ ಹಾಗೂ ಪಕ್ಷದ ಹಿಂದಿನ ಕಾರ್ಯದರ್ಶಿಗಳಾದ ಕಾ॥ ಜೆ.ಶಂಕರನ್ ಮತ್ತು ಗೋವಿಂದರಾಜನ್ ರವರಿಗೆ ನಮನ ಸಲ್ಲಿಸಿಸುತ್ತದೆ.

ಕರ್ನಾಟಕದಲ್ಲಿ ಪಕ್ಷದ ಪ್ರಪ್ರಥಮ ಸಮಾವೇಶಕ್ಕೆ ಬಂದಿರುವ ಪ್ರತಿನಿಧಿಗಳು, ವೀಕ್ಷಕರು ಮತ್ತು ಅತಿಥಿಗಳಿಗೆ ಪಕ್ಷದ ರಾಜ್ಯ ಮುಂಚೂಣಿ ತಂಡದಿಂದ ಲಾಲ್ ಸಲಾಮ್.

ಹತ್ತು ವರ್ಷದಿಂದ ಕಷ್ಟಪಟ್ಟು ಸಮೂಹ ಸಂಘಟನೆಗಳನ್ನು ಕಟ್ಟಿ ಬೆಳೆಸಿ ಕರ್ನಾಟಕದಲ್ಲಿ ನೆಲೆಗೊಂಡ ನಂತರ ಈ ಸಮಾವೇಶವನ್ನು ಮಾಡುತ್ತಿದ್ದೇವೆ. ಇಂದು ಕೋಮುವಾದಿ ಫ್ಯಾಸಿಸ್ಟ್ ಶಕ್ತಿಗಳು ತಮ್ಮ ಕೊಳಕು ತಲೆಗಳನ್ನು ಎತ್ತಿದ್ದು, ಅವುಗಳು ಸಮಾಜ ಮತ್ತು ರಾಜಕೀಯಕ್ಕೆ ಬಹು ಮುಖ್ಯ ಸವಾಲುಗಳಾಗಿವೆ. ಕಾಂಗ್ರೇಸ್ ಪಕ್ಷ ಯಾವ ದಿಕ್ಕು ದೆಶೆ ಇಲ್ಲದೆ ಹೋಗುತ್ತಿದ್ದು, ಬಿಜೆಪಿಗೆ ಸವಾಲು ನೀಡುವಂತಹ ಪಕ್ಷವಾಗಿ ಉಳಿದಿಲ್ಲ, ನಂತರ ಜೆಡಿಎಸ್ ಪಕ್ಷದಲ್ಲಿ ಕಾರ್ಯಕರ್ತರು ಛಿದ್ರವಾಗಿದ್ದು ಬೇರೆ ಬೇರೆ ಪಕ್ಷಗಳನ್ನು ಸೇರುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸಿ.ಪಿ.ಐ (ಎಂ.ಎಲ್) ತನ್ನ ಪ್ರಪ್ರಥಮ ಸಮ್ಮೇಳನ ನಡೆಸುವುದರ ಮೂಲಕ ಭವಿಷ್ಯದಲ್ಲಿ ತನ್ನ ಕ್ರಾಂತಿಕಾರಿ ಹೋರಾಟಗಳನ್ನು ನಡೆಸಲು ಸಜ್ಜಾಗುತ್ತಿದೆ. ಈ ಸಮಾವೇಶದ ಮೂಲಕ ಕರ್ನಾಟಕದ ಜನತೆ ಸಮುದ್ರದ ಅಲೆಗಳಂತೆ ಮೇಲೆದ್ದು ಕ್ರಾಂತಿಕಾರಿ ಸಮೂಹ ರಾಜಕೀಯ ಹೋರಾಟಗಳನ್ನು ರೂಪಿಸಿಕೊಳ್ಳಲು, ಈ ಸಮಾವೇಶ ಮಾರ್ಗದರ್ಶಿಯಾಗಿರುತ್ತದೆಂದು ನಾವು ನಂಬುತ್ತೇವೆ.

ಕರ್ನಾಟಕ ರಾಜ್ಯವು ರಾಷ್ಟ್ರೀಯ ಮತ್ತು ಜಾಗತಿಕ ಮಾರುಕಟ್ಟೆ ಜೊತೆ ಹೆಚ್ಚು ಸಂಪರ್ಕ ಹೊಂದಿರುವುದರಿಂದ ರಾಷ್ಟ್ರ ಮಟ್ಟದ ಪಕ್ಷಗಳಿಗೆ ಬೆಳೆಯಲು ಯೋಗ್ಯವಾಗಿದೆ. ಹೀಗಾಗಿ ನೆರೆಯ ತಮಿಳುನಾಡು ಮತ್ತು ಸ್ವಲ್ಪಮಟ್ಟಿಗೆ ಅಂಧ್ರಪ್ರದೇಶಗಳಲ್ಲಿ ಇರುವಂತೆ ಪ್ರಾದೇಶಿಕ ರಾಜಕೀಯ ಶಕ್ತಿಗಳು ಇಲ್ಲಿ ಅಪ್ರಸ್ತುತವಾಗಿವೆ. ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳು ಆರ್ಥಿಕವಾಗಿ ಸಮಾನವಾಗಿ ಬೆಳೆದಿಲ್ಲ. ಕೆಲವು ಪ್ರದೇಶಗಳು ಬಹಳ ಹಿಂದೆ ಉಳಿದ್ದಿದ್ದಾವೆ. ಒಂದೊಂದು ಪ್ರದೇಶವು ತನ್ನದೆ ಆದ ಗುಣ ಅಂಶಗಳನ್ನು ಹೊಂದಿರುವ ಕಾರಣ, ಒಂದೊಂದು ಪ್ರದೇಶಗಳ ಬಗ್ಗೆಯು ಆಳವಾದ ವಿಶ್ಲೇಷಣೆ ಮಾಡುವ ಅವಶ್ಯಕತೆ ಇದೆ. ಉದಾ – ಮೈಸೂರು ಪ್ರದೇಶದಲ್ಲಿ ಸಣ್ಣ ರೈತರು ಅರ್ಥಿಕತೆಯಲ್ಲಿ ಮುಂದೆ ಇರುವುದು ಕಂಡುಬಂದರೆ, ಹೈದರಬಾದ್ ಮತ್ತು ಮುಂಬಯಿ ಕರ್ನಾಟಕದ ಪ್ರದೇಶಗಳಲ್ಲಿ ದೊಡ್ಡ ಭೂ ಮಾಲೀಕರು ಮತ್ತು ಊಳಿಗ ಮಾನ್ಯ ವ್ಯವಸ್ಥೆಯೇ ಪ್ರಚಲಿತದಲ್ಲಿರುವುದನ್ನು ಕಾಣಬಹುದಾಗಿದೆ. ಕರಾವಳಿ ಮತ್ತು ಮಲೆನಾಡು ಪ್ರದೇಶಗಳು ಸಾಮಾಜಿಕ, ಅರ್ಥಿಕ ಮತ್ತು ರಾಜಕೀಯ ಸ್ಥಿತಿಗತಿಗಳಲ್ಲಿ ವಿಶಿಷ್ಠ ಗುಣ ಲಕ್ಷಣಗಳನ್ನು ಹೊಂದಿದ್ದಾವೆ.

ದೇಶದಲ್ಲಿ ಬೆಲೆಗಳ ದರ ಹೆಚ್ಚಾಗಿದ್ದರೂ ಸಹ ತಲಾ ವರಮಾನದಲ್ಲಿ ಕರ್ನಾಟಕವು 12ನೇ ಸ್ಥಾನದಲ್ಲಿತ್ತು. ಅದು ರಾಜ್ಯದ ಒಟ್ಟಾರೆ ಹೊಲಿಕೆಯಲ್ಲಿ ಮಾತ್ರ, ವ್ಯಕ್ತಿಗತ ವರಮಾನದಲ್ಲಿ ಅಲ್ಲ! ಕರ್ನಾಟಕದಲ್ಲಿ ಕೆಲವೆಡೆ ಮಾತ್ರ ಶ್ರೀಮಂತ ಮತ್ತು ಪ್ರಬಲ ಭೂ ಮಾಲೀಕರು ಕಂಡು ಬರುತ್ತಾರೆ. ಅದೇ ರೀತಿ ರಾಜ್ಯದ ಸ್ವತ್ತು ಕೆಲವು ಬಂಡವಾಳ ಶಾಹಿಗಳ ಕೈಯಲ್ಲಿದೆ ಮತ್ತು ಸಮಾಜದಲ್ಲಿ ಆರ್ಥಿಕ ತಾರತಮ್ಯ ಹೆಚ್ಚಾಗಿದೆ. ಉದಾರೀಕರಣ ನೀತಿಗಳಿಂದಾಗಿ ಈ ಆರ್ಥಿಕ ತಾರತಮ್ಯ ಇನ್ನೂ ಹೆಚ್ಚಾಗುತ್ತಿದೆ. ಶ್ರಮಜೀವಿ ವರ್ಗಗಳು ದಿವಾಳಿ ಅಗುತ್ತಿರುವಾಗ ಕೆಲವೇ ಕೈಗಾರಿಕಾ ಉದ್ಯಮಿಗಳು ಶ್ರೀಮಂತರಾಗುತ್ತಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಕಾರ್ಮಿಕರ ಸಂಖ್ಯೆ ಹೆಚ್ಚಾಗುತ್ತಿದೆ ಆದರೆ ಭೂಮಿ ಹಿಡುವಳಿ ಗಾತ್ರ ಕಡಿಮೆಯಾಗುತ್ತಿದೆ. ಐದು ಎಕರೆಗಳಿಂದ ಕಡಿಮೆ ಭೂಮಿ ಹೊಂದಿದ್ದ ಬಡ ರೈತರು ತಮ್ಮ ಭೂಮಿ ಕಳೆದುಕೊಂಡು ಕೂಲಿ ಕಾರ್ಮಿಕರಾಗುತ್ತಿದ್ದಾರೆ. ಬಿಹಾರ, ಒರಿಸ್ಸಾ ಮುಂತಾದ ರಾಜ್ಯಗಳಿಗೆ ಹೊಲಿಸಿದರೆ ಕರ್ನಾಟಕದಲ್ಲಿ ಕೃಷಿಯಲ್ಲಿ ಒಂಡವಾಳಶಾಹಿ ಬೆಳವಣಿಗೆ ಹೆಚ್ಚು ಕಂಡು ಬರುತ್ತಿದೆ. ಇದರಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಬಡ ಮತ್ತು ಕೆಳ ಮಧ್ಯಮ ರೈತರು ದಿವಾಳಿ ಆಗುತ್ತಿದ್ದಾರೆ.

ಹೆಚ್ಚುತ್ತಿರುವ ರೈತರ ಅತ್ಮಹತ್ಯೆಯು ಉಲ್ಬಣಗೊಳ್ಳುತ್ತಿರುವ ಕೃಷಿ ಬಿಕ್ಕಟ್ಟಿನ ಚಿಹ್ನೆಯಾಗಿದೆ. ಬಂಡವಾಳ ಶಾಹಿ ಬೆಳೆವಣಿಗೆ ಹೆಚ್ಚಾಗಿರುವ ಮಹಾರಾಷ್ಟ್ರ, ಪಂಜಾಬ್, ಅಂಧ್ರ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಬಿಹಾರ ಮತ್ತು ಉತ್ತರ ಪ್ರದೇಶಕ್ಕಿಂತ ಹೆಚ್ಚು ಕೃಷಿ ಬಿಕ್ಕಟನ್ನು ನೋಡಬಹುದು. ಕರ್ನಾಟಕದಲ್ಲಿ ಆಳುವ ಕಾಂಗ್ರೇಸ್ ಸರ್ಕಾರವು ಈ ಆತ್ಮಹತ್ಯೆಗಳಿಗೆ ಕಾರಣವಾದ ಕಾರ್ಪೋರೇಟ್ ಪರ ಇರುವ ನೀತಿ ನಿಲುವುಗಳನ್ನು ಎದುರಿಸುವ ಬದಲು, ಆತ್ಮಹತ್ಯೆಗಳಿಗೆ ರೈತರಲ್ಲಿರುವ ಮಾನಸಿಕ ಕಾರಣಗಳು ಎಂದು ದೂಷಿಸುತ್ತಿದೆ. ರೈತ ಮತ್ತು ಕೃಷಿ ವಿರೋಧಿ ನೀತಿಗಳು ಮುಂದುವರಿಯುತ್ತಿರುವ ಕಾರಣದಿಂದಲೇ ರೈತರ ಆತ್ಮಹತ್ಯೆಗಳು ದಿನನಿತ್ಯ ನಡೆಯುತ್ತಲೇ ಇವೆ. ವಿಪಾರ್ಯಶ್ಯವೆಂದರೆ ಆತ್ಯಹತ್ಯೆಗಳು ಸರ್ವೆ ಸಾಮಾನ್ಯವಾಗಿದ್ದು, ಸರ್ಕಾರ ಅದರ ಬಗ್ಗೆ ಗಮನ ಹರಿಸುವುದಿಲ್ಲ. ಹೆಚ್ಚುತ್ತಿರುವ ಕೃಷಿ ಬಿಕ್ಕಟ್ಟು ಮತ್ತು ವ್ಯವಸಾಯದಿಂದ ನಷ್ಟವಾಗುತ್ತಿದ್ದರು ಸಹ ಭೂಮಿಗಾಗಿ ಗ್ರಾಮೀಣ ಜನತೆಯ ಹಂಬಲ ಕಡಿಮೆಯಾಗಿಲ್ಲ. ವಾಸ್ತವವಾಗಿ ಭೂಮಿ ರಾಜ್ಯದಲ್ಲಿ ಪ್ರಮುಖ ಬೇಡಿಕೆಯಾಗಿಯೇ ಉಳಿದಿದೆ. ಭೂಮಿ ವ್ಯವಸಾಯಕ್ಕೆ ಮಾತ್ರವಲ್ಲದೆ ವಸತಿಗಾಗಿಯು ಸಹ ಬೃಹತ್ ಬೇಡಿಕೆ ಇರುವುದರಿಂದಾಗಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಭೂಮಿ ಹೋರಾಟಗಳು ಪ್ರಾರಂಭವಾಗಿದ್ದಾವೆ.

ನಾಲ್ಕು ದಶಕಗಳ ಹಿಂದೆ ಸಣ್ಣ ಹಿಡುವಳಿ ರೈತರಿಗೆ ಹೊಲಿಸಿದರೆ ಕೃಷಿ ಕಾರ್ಮಿಕರ ಸಂಖ್ಯೆ ಕಡಿಮೆ ಇತ್ತು. ಕೃಷಿ ಕಾರ್ಮಿಕರು ಶೇ. 20 ಮತ್ತು ರೈತರು ಶೇ. 50 ಇದ್ದು, ರೈತರುಗಳೇ ಅಂದು ಕರ್ನಾಟಕ ರೈತ ಚಳುವಳಿಯ ಮಿಲಿಟೆಂಟ್ ಭಾಗವಾಗಿದ್ದರು. ಇಂದು ಗ್ರಾಮೀಣ ಪ್ರದೇಶದ ಬಹುಪಾಲು ಜನತೆ ಕೂಲಿ ಕಾರ್ಮಿಕರಾಗುತ್ತಿದ್ದು, ಕೃಷಿ ಮಾಡುವವರ ಸಂಖ್ಯೆ ಗಮನಾರ್ಹವಾಗಿ ಕ್ಷೀಣಿಸಿದೆ. ಗತಕಾಲದ ಪ್ರಬಲ ರೈತ ಚಳುವಳಿ ಕರ್ನಾಟಕದಲ್ಲಿ ಮತ್ತೆ ಎದ್ದೇಳುವ ಸಾದ್ಯತೆ ಕ್ಷೀಣಿಸಿದೆರೀ ಸಂದರ್ಭದಲ್ಲಿ ಬಲವಾದ ಮತ್ತು ಉಗ್ರವಾದ ಕೃಷಿ ಕಾರ್ಮಿಕರ ಚಳುವಳಿಯನ್ನು ಕಟ್ಟುವುದಕ್ಕೆ ಸಾಧ್ಯತೆಗಳು ಹೆಚ್ಚಾಗಿದ್ದಾವೆ. ಹೀಗಾಗಿ ನಾವು ವಸ್ತುಸ್ಥಿತಿ ಅರ್ಥ ಮಾಡಿಕೊಂಡು ಸಂಘಟಿಸುವ ಮಾರ್ಗಗಳನ್ನು ಕಂಡುಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ಹಳ್ಳಿ ನಾಡಿನ ಬಡ ಮತ್ತು ಕೃಷಿಕಾರ್ಮಿಕರ "ಕೆಂಪು ಶಾಲು" ಚಳುವಳಿಯು ಶ್ರೀಮಂತ ರೈತರ ಹಸಿರು ಶಾಲು ಚಳುವಳಿಗೆ ಹೇಗೆ ಬಿನ್ನ ಮತ್ತು ಮುಖ್ಯ ಎಂದು ಎತ್ತಿ ತೋರಿಸಿ ಕೊಡಬೇಕಾಗುತ್ತದೆ.

ಕರ್ನಾಟಕದ ಕೃಷಿಯಲ್ಲಿ ಬಂಡವಾಳ ಶಾಹಿ ವ್ಯವಸ್ಥೆ ಆಳವಾಗಿ ಬೇರು ಬಿಟ್ಟಿದ್ದರು ಸಹ ಸಣ್ಣ ರೈತರ ಆರ್ಥಿಕತೆ ಮಟ್ಟ ಸ್ವಲ್ಪ ಮಟ್ಟಿಗೆ ಹೆಚ್ಚಾಗಿದ್ದರೂ ಸಹ

ಇದರ ಆಧಾರದಲ್ಲಿ ಊಳಿಗ ಮಾನ್ಯ ಮತ್ತು ಭೂ ಮಾಲಿಕತ್ವವನ್ನು ಅರ್ಥ ಮಾಡಿಕೊಳ್ಳಲು ಆಗುವುದಿಲ್ಲ. ಬಂಡವಾಳ ಶಾಹಿ ಬೆಳವಣಿಗೆ ಹೆಚ್ಚಿರುವ ರಾಜ್ಯಗಳಲ್ಲಿ ಹೊಸ ರೂಪದ ಭೂಮಾಲೀಕತ್ವವನ್ನು ನೋಡಬಹುದು. ಸಂಪನ್ಮೂಲಗಳು, ಬೆಳೆಗಳನ್ನು ಬೆಳೆಯುವ ರೀತಿ ಮತ್ತು ಸಾಲ ಕೊಡುವ ಸಂಸ್ಥೆಗಳು ಇವು ಎಲ್ಲಾ ಹೊಸ ರೂಪದ ಭೂ ಮಾಲೀಕತ್ವದ ಹಿಡಿತದಲ್ಲಿ ಇರುವುದನ್ನು ಕಾಣಬಹುದು. ಜಾತಿ ಪ್ರಾಬಲ್ಯ ಕೂಡ ಭೂ ಮಾಲೀಕತ್ವದ ಇನ್ನೊಂದು ಸ್ವರೂಪವಾಗಿ ನೋಡಬಹುದು. ಇಂತಹ ಸಂದರ್ಭಗಳಲ್ಲಿ ಪ್ರಭುತ್ವ ವಿರುದ್ಧ ಹೋರಾಟಗಳು ವೃತ್ತಿಗತ ಭೂ ಮಾಲೀಕರ ವಿರುದ್ಧದ ಹೋರಾಟಕ್ಕಿಂತ ಪ್ರಮುಖವಾಗುತ್ತದೆ. ಕರ್ನಾಟಕದಲ್ಲಿ ಚೀನಾ ಅಥವಾ ಬಿಹಾರದಂತೆ ಸಾಂಪ್ರದಾಯಿಕ ಭೂ ಮಾಲೀಕರು ಕಂಡು ಬರದಿದ್ದ ಮಾತ್ರಕ್ಕೆ ಊಳಿಗ ಮಾನ್ಯ ಪಳೆಉಳಿಕೆಗಳು ಮತ್ತು ಅರೆ ಊಳಿಗ ಮಾನ್ಯ ಮೌಲ್ಯಗಳು ಇಲ್ಲ ಎಂದು ಪರಿಗಣಿಸಲು ಬರುವುದಿಲ್ಲ. ಊಲಿಗ್ಯ ಮಾನ್ಯಕ್ಕೆ ವಿರುದ್ಧವಾಗಿ ನಡೆಸುವ ಹೋರಾಟಗಳ ಪ್ರಾಮುಖ್ಯತೆ ಕಡಿಮೆಯಾಗುವುದಿಲ್ಲ. ಊಳಿಗ ಮಾನ್ಯ ಪಳೆಉಳಿಕೆಗಳು ಇನ್ನೂ ಗಟ್ಟಿಯಾಗಿ ಬೇರು ಬಿಟ್ಟಿರುವ ಕಾರಣ ಅದಕ್ಕೆ ವಿರುದ್ಧವಾಗಿ ಜನಪರ ಚಳುವಳಿ ನಡೆಯಬೇಕು. ಅಂತಹ ಚಳುವಳಿ ಇಲ್ಲದೆ ಯಾವುದೆ ಸಾಮಾಜಿಕ ಬದಲಾವಣೆ ಮಾಡಲು ಸಾಧ್ಯವಿಲ್ಲ.

ಹೆಚ್ಚುತ್ತಿರುವ ಬಂಡವಾಳದ ಕ್ರೂಢೀಕರಣವು ಹೆಚ್ಚುತ್ತಿರುವ ಬಂಡವಾಳಶಾಹಿ ಬೆಳವಣಿಗೆಯಿಂದ ಉಂಟಾಗಿದೆ. ಬಂಡವಾಳಶಾಹಿ ಬೆಳವಣಿಗೆ ಹೆಚ್ಚಾಗಿದ್ದರೂ ಅರೆ ಊಳಿಗ ಮಾನ್ಯ ಮತ್ತು ಜಾತಿಯ ದಬ್ಬಾಳಿಕೆಗಳು ಕಡಿಮೆ ಆಗಿಲ್ಲ. ಬದಲಾಗಿ ಜಾತಿಯೇ ಬಂಡವಾಳದ ಸಂಗ್ರಹದ ಒಂದು ಭಾಗ ಅಗಿದೆ. ಲಿಂಗಾಯತರು ಮತ್ತು ವೀರಶೈವರ ಅಲ್ಪಸಂಖ್ಯಾತರು ಎಂಬ ಬೇಡಿಕೆ, ಕುರುಬರಿಗೆ ಪರಿಶಿಷ್ಟ ವರ್ಗದ ಸ್ಥಾನ ಕೊಡುವ ಬೇಡಿಕೆ ಇವುಗಳು ವಾಸ್ತವವಾಗಿ ಬಂಡವಾಳಶಾಹಿ ಇಚ್ಚಾಸಕ್ತಿಗಳ ಕೆಳಗಡೆ ಬರುವ ಅರೆ ಉಳಿಗ ಮಾನ್ಯ ಸ್ವರೂಪದ ಪ್ರಯತ್ನಗಳು. ಆಯಾ ಜಾತಿಗಳ ಪ್ರಬಲ ಮತ್ತು ಶ್ರೀಮಂತ ರಾಜಕಾರಣಿಗಳೇ ಜಾತಿಯ ಹಿತಾಸಕ್ತಿಗಳ ಬೇಡಿಕೆ ಇಡುತ್ತಾರೆ. ಬಿ.ಜೆ.ಪಿ ಪಕ್ಷವು ಮಾದಿಗ ಸಮುದಾಯವನ್ನು ಈ ರೀತಿಯ ಆಟದಲ್ಲಿ ಸೇರಿಸಿಕೊಂಡು ಭೂರ್ಜ್ವಾಗಳ ಹಿತಾಸಕ್ತಿ ರಕ್ಷಿಸಲು ಪ್ರಯತ್ನಿಸುತ್ತಿದೆ. ಇಂತಹ ಸಂಧರ್ಭದಲ್ಲಿ ಅಸ್ಪೃಶ್ಯತೆ ಮತ್ತು ಜಾತಿಯ ಹೆಸರಿನಲ್ಲಿ ನಡೆಯು ದಬ್ಬಾಳಿಕೆಗೆ ವಿರುದ್ಧವಾಗಿ ನಡೆಯುವ ಹೋರಾಟಗಳು ಮತ್ತು ಸಾಮಾಜಿಕ ಘನತೆಗಾಗಿ ನಡೆಯುವ ಹೋರಾಟಗಳು ಊಳಿಗಮಾನ್ಯ ಪ್ರಾಬಲ್ಯಕ್ಕೆ ಸವಾಲು ಕೊಡುವ ಹೋರಾಟವಾಗಿ ಮಾರ್ಪಡುತ್ತದೆ. ಜಾತಿ ಮತ್ತು ವರ್ಗದ ನಡುವೆ ಇರುವ ಆಳವಾದ ಸಂಬಂಧವನ್ನು

ಅರ್ಥಮಾಡಿಕೊಳ್ಳುವುದು ಸಮಾಜವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಬೇಕಾಗಿರುವ ಮುಖ್ಯ ಅಂಶ. ಈ ವಿಚಾರದಲ್ಲಿ ಶೋಷಣೆಗೆ ಒಳಗಾಗುವ ಗ್ರಾಮಾಂತರ ವರ್ಗಗಳನ್ನು, ದಮನಕ್ಕೆ ಒಳಗಾಗುವ ಜಾತಿಗಳನ್ನು ಕೃಷಿ ಕಾರ್ಮಿಕರ ಸಂಘಟನೆಯ ಅಡಿಯಲ್ಲಿ ಸಂಘಟಿಸುವುದರ ಮೂಲಕ ಹೊಸ ಸ್ವರೂಪದಲ್ಲಿರುವ ಊಳಿಗಮಾನ್ಯ ಪ್ರಾಬಲ್ಯಕ್ಕೆ ದೊಡ್ಡ ಸವಾಲು ಕೊಡಬಹುದು.

ಮೊದಲು ಕೃಷಿ ರಂಗವನ್ನು ಪರಿಶೀಲಿಸೋಣ. ನಮಗೆಲ್ಲಾ ಗೊತ್ತಿರುವಂತೆ ದೇಶದಲ್ಲಿ ಕಮ್ಯೂನಿಸ್ಟ್ ಚಳುವಳಿಯು ತನ್ನ ಪ್ರಾರಂಭದ ದಿನಗಳಲ್ಲಿ ರೈತರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳದ್ದೇ ಇದ್ದದ್ದು ಮೂಲಭೂತ ಬಲಹೀನತೆಯಾಗಿತ್ತು. ಇದರ ಒಂದು ಒಳನೋಟವೆಂದರೆ ಪಶ್ಚಿಮ ಭಾರತದಲ್ಲಿ ಬ್ರಿಟಿಷರ ಆಡಳಿತಾವಧಿಯಲ್ಲಿ ಮತ್ತು ಮೈಸೂರು ರಾಜರ ಆಡಳಿತ ಅವಧಿಯಲ್ಲಿ ರೈತವಾರಿ ಪದ್ಧತಿ ಇದ್ದಿದ್ದರಿಂದಾಗಿ ಕಮ್ಯೂನಿಸ್ಟ್ ಚಳುವಳಿ ಬಲಹೀನವಾಗಿತ್ತು ಎನ್ನುವ ತಪ್ಪು ಭಾವನೆ ಇದೆ. ಅದೇ ಸಮಯ ಬೆಂಗಾಲ, ಬಿಹಾರ್ ಮತ್ತು ಆಂಧ್ರ ಪ್ರದೇಶಗಳಲ್ಲಿ ಊಳಿಗ ಮಾನ್ಯ ಭೂ ಮಾಲೀಕತ್ವ ಮತ್ತು ಜಮೀನ್ದಾರಿ ಪದ್ಧತಿ ದೊಡ್ಡ ಮಟ್ಟದಲ್ಲಿದ್ದು ಅವುಗಳಿಗೆ ವಿರುದ್ಧವಾಗಿ ನಡೆದ ಬಲಯುತವಾದ ಹೋರಾಟಗಳಿಂದ ಕಮ್ಯೂನಿಸ್ಟ ಚಳುವಳಿ ಬೆಳೆಯುವುದಕ್ಕೆ ಸಾಧ್ಯವಾಯಿತು ಎನ್ನುವ ತಪ್ಪು ಕಲ್ಪನೆ ಇದೆ.

ರೈತವಾರಿ ಪದ್ದತಿಯಿಂದಾಗಿ ಕೃಷಿಯಲ್ಲಿ ಸಮಾನತೆ ಮತ್ತು ಸಣ್ಣ ರೈತರ ಆರ್ಥಿಕತೆಯಲ್ಲಿ ಸಮಾನವಾದ ಬೆಳವಣಿಗೆ ಬರುತ್ತದೆ ಎನ್ನುವುದು ತಪ್ಪು ಕಲ್ಪನೆ. ಪಶ್ವಿಮ ಭಾರತದಲ್ಲಿ ನಾವು ಕಾಣುವ ಬಲಯುತವಾದ ಭೂ ಮಾಲೀಕರು, ಮಹಾರಾಷ್ಟ್ರದಲ್ಲಿರುವ ಕಬ್ಬು ಬೆಳೆಗಾರರು, ಕರ್ನಾಟಕದಲ್ಲಿ ಕಾಣುವ ಸಹಕಾರಿ ಭೂ ಮಾಲೀಕರು, ಈ ರೈತವಾರಿ ಪದ್ಧತಿಯಿಂದಲೇ ಬೆಳೆದಿದ್ದಾರೆ. ರೈತರ ಮೇಲೆ ಹೆಚ್ಚು ತೆರಿಗೆಯನ್ನು ಹಾಕಿ ರೈತರನ್ನು ಕೊಳ್ಳೆ ಹೊಡೆದ ಬ್ರಿಟಿಷರು ಮತ್ತು ಮಹಾರಜರಿಗೆ ವಿರುಧ್ಧವಾಗಿ ನಡೆದ ರೈತ ಹೋರಾಟಗಳನ್ನು ವಸಹಾತುಶಾಹಿ ಕಾಲದಲ್ಲೇ ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ನಾವು ನೋಡಿದ್ದೇವೆ. ದೊಡ್ಡ ಭೂ ಮಾಲೀಕರು ಇಲ್ಲ ಅಂದರೆ ಕಮ್ಯೂನಿಸ್ಟ್ ಚಳುವಳಿ ನಡೆಸಲು ಅಸಾಧ್ಯ ಎನ್ನುವ ತತ್ವ ಕಮ್ಯೂನಿಸ್ಟ್ ಚಳುವಳಿಗೆ ಮರಣ ಶಾಸನವಾಗುತ್ತದೆ. ವಾಸ್ತವ ಏನೆಂದರೆ, ರೈತವಾರಿ ಪದ್ಧತಿ ಇದ್ದಂತಹ ಜಾಗಗಳಲ್ಲಾಗಲೀ ಅಥವಾ ಜಮೀನ್ದಾರಿ ಪದ್ಧತಿ ಇದ್ದಂತಹ ಜಾಗಗಳಲ್ಲಾಗಲೀ ಕಮ್ಯೂನಿಸ್ಟ್ ಚಳುವಳಿ ಪ್ರಬಲವಾಗಿರಲಿಲ್ಲ. ಕರ್ನಾಟಕದಲ್ಲಿ ಕೃಷಿ ರಂಗದ ಈ ವಿಷಯವನ್ನು ಆಳವಾಗಿ ಅರ್ಥ

ಮಾಡಿಕೊಂಡಿರದ ಕಾರಣ ಬರೀ ಕಾರ್ಮಿಕ ವರ್ಗಕ್ಕೆ ಮಾತ್ರ ಕಮ್ಯೂನಿಸ್ಟ್ ಪಕ್ಷಗಳು ಸೀಮಿತವಾಗಿದ್ದಾವೆ.

ಎರಡನೇಯದಾಗಿ ಕರ್ನಾಟಕದಲ್ಲಿ ದೇವರಾಜ್ ಅರಸ್ ಕಾಲದಲ್ಲಿ ನಡೆದ ಭೂ ಸುಧಾರಣೆಯಿಂದಾಗಿ ರೈತರ ನಡುವೆ ಕಮ್ಯೂನಿಷ್ಟರು ಕೆಲಸ ಮಾಡುವ ಅವಕಾಶವನ್ನು ಕಳೆದು ಕೊಂಡರು ಎಂದು ಹೇಳಲಾಗುತ್ತದೆ. ನಿಜ, ಅರಸು ಕಾಲದ ಭೂ ಸುಧಾರಣೆ ಕೇರಳ ಮತ್ತು ಪಶ್ಚಿಮ ಬಂಗಾಳಕ್ಕಿಂತಲೂ ಪರಿಣಾಮಕಾರಿಯಾಗಿತ್ತು. ಆದರೆ ಆರಸುರವರ ಭೂ ಸುಧಾರಣೆ ಗೇಣಿದಾರರಿಗೆ ಭೂ ಹಂಚುವುದಾಗಿತ್ತೇ ಹೊರತು ಕೃಷಿ ಕಾರ್ಮಿಕರಿಗೆ ಭೂಮಿ ಹಂಚುವುದಾಗಿರಲಿಲ್ಲ. ಯಶಸ್ವಿ ಎಂದು ಹೇಳಲಾಗುವ ಭೂ ಸುಧಾರಣೆಯಿಂದ ಗ್ರಾಮೀಣ ಜನಸಂಖ್ಯೆಯ ಬಹುಪಾಲಾಗಿದ್ದ ದಲಿತರು, ಕೃಷಿ ಕಾರ್ಮಿಕರು, ಸಣ್ಣ ರೈತರು ಇವರೆರಿಗೂ ಏನು ಪ್ರಯೋಜನವಾಗಲಿಲ್ಲ. ಎಲ್ಲಕ್ಕಿಂತಲೂ ಹೆಚ್ಚಾಗಿ ಅ ಭೂ ಸುಧಾರಣೆಯು ಬೂರ್ಜ್ವಾ ಸರ್ಕಾರ, ಬೂರ್ಜ್ವಾ ಸಾಮಾಜಿಕ–ಅರ್ಥಿಕ ವ್ಯವಸ್ಥೆಯೊಳಗಡೆ ಇರುವ ಬಂಡವಾಳಶಾಯಿಯನ್ನು ರಕ್ಷಿಸುವುದೇ ಆಗಿತ್ತು. ದೇವರಾಜು ಅರಸರ ಭೂ ಸುಧಾರಣೆಯನ್ನು ತಳ ಮಟ್ಟದ ಜನರಿಗೆ ಉಪಯೋಗ ಆಗುವ ರೀತಿಯಲ್ಲಿ ಸರ್ಕಾರವನ್ನು ಒತ್ತಾಯ ಮಾಡುವಲ್ಲಿ ಕಮ್ಯೂನಿಸ್ಟ್‌ರು ವಿಫಲರಾಗಿದ್ದರು. ಅದಕ್ಕೆ ಬದಲಾಗಿ ದೇವರಾಜು ಅರಸರ ಭೂ ಸುಧಾರಣೆಯಿಂದ ಕಮ್ಯೂಸ್ಟ್ ಚಳುವಳಿಗೆ ಜಾಗ ಕಡಿಮೆ ಆಗಿದೆ ಎಂದು ನೊಂದು ಕೊಂಡರು. ದೇವರಾಜು ಅರಸುರವರ ಭೂ ಸುಧಾರಣೆಗಳ ಹಿಂದೆ ಇದ್ದಂತಹ ವರ್ಗ ಹಿತಾಸಕ್ತಿ ಮತ್ತು ಏನು ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ನೀತಿಯನ್ನು ಅನುಸರಿಸಿದ ಕಮ್ಯೂನಿಸ್ಟ್‌ರ ದಿವಾಳಿ ತನ ಎಂಬತ್ತರ ದಶಕದದಲ್ಲಿ ಸ್ಪಷ್ಟವಾಗಿ ಹೊರಬಂತು. ಶ್ರೀಮಂತ ರೈತರು ಸಣ್ಣ ಮತ್ತು ಮಧ್ಯಮ ರೈತರ ಚಳುವಳಿಗಳನ್ನು ತಮ್ಮ ನಾಯಕತ್ವದಡಿಯಲ್ಲಿ ವಶಪಡಿಸಿಕೊಂಡರು. ಸಿ.ಪಿ.ಐ ಮತ್ತು ಸಿ.ಪಿ.ಎಂ ಪಕ್ಷಗಳು ಬರೀ ವಿಮರ್ಶೆ ಮಾಡುವ ಪ್ರೇಕ್ಷಕರಾದರು. ಗ್ರಾಮಾಂತರ ಬಡವರು ಜಮೀನುಗಳನ್ನು ಕಳೆದುಕೊಂಡು ಕಾರ್ಮಿಕ ವರ್ಗವಾಗಿ ಪರಿವರ್ತನೆಗೊಂಡು ಸಿಪಿಐ ಮತ್ತು ಸಿಪಿಎಂ ಪಕ್ಷಗಳನ್ನು ಬಿಟ್ಟು ದಲಿತ ಚಳುವಳಿಯ ಅಡಿಯಲ್ಲಿ ಈ ಭೂಮಾಲೀಕರಿಗೆ ಸ್ವಲ್ಪ ಮಟ್ಟಿಗೆ ಸವಾಲಾಗಿ ನಿಂತರೂ ಸಹ ಅವರು ಕೂಡ ಮಿಮರ್ಶೆ ಮಾಡುವವರಾಗಿಯೇ ಉಳಿದರು.

ಸಣ್ಣ ರೈತರೇ ಹೆಚ್ಚಿನ ಸಂಖ್ಯೆಯಲ್ಲಿರುವ ಕರ್ನಾಟಕದಂತಹ ರಾಜ್ಯದಲ್ಲಿ ಊಳಿಗಮಾನ್ಯ ಭೂಮಾಲೀಕರೆಂಬ ವರ್ಗ ಶತ್ರುಗಳನ್ನು ಅರಸಿ ಮುನ್ನಡೆಯುವುದು ಸಾಧ್ಯವಿಲ್ಲ. ಪ್ರಸ್ತುತ ಸಂದರ್ಭದಲ್ಲಿ ಗತಕಾಲದ ಜಮೀನ್ದಾರಿಕೆ ಹೊಸ

ಸ್ವರೂಪಗಳನ್ನು ಪಡೆದಿದೆ. ಕೃಷಿ ಕ್ಷೇತ್ರದ ಕಾರ್ಪೋರೇಟೀಕರಣ ಮತ್ತು ವಾಣಿಜ್ಯೀಕರಣದಿಂದ ಹೊಸ ವರ್ಗಗಳು ಸೃಷ್ಟಿಯಾಗಿದ್ದು ಹೊಸ ರೂಪದ ಪ್ರಾಬಲ್ಯವೂ ತಲೆದೋರಿದೆ. ಕೃಷಿ ಸಂಪನ್ಮೂಲ ಮತ್ತು ನೀರಾವರಿ ಸೌಕರ್ಯಗಳ ಮೇಲಿನ ಪ್ರಾಬಲ್ಯ, ಬೀಜ ಮತ್ತು ರಸಗೊಬ್ಬರದ ಮೇಲಿನ ನಿಯಂತ್ರಣ, ಲೇವಾದೇವಿ ಮಾಫಿಯಾ ಸೇರಿದಂತೆ ಸ್ಥಳೀಯ ಹಣಕಾಸು ವಿನಿಮಯದ ಕೇಂದ್ರಗಳ ಪ್ರಾಬಲ್ಯ, ರಿಯಲ್ ಎಸ್ಟೇಟ್ ವ್ಯವಹಾರ ಮತ್ತು ಮಾಫಿಯಾ, ಕಾರ್ಪೋರೇಟ್ ಉದ್ಯಮಿಗಳ ಪ್ರಾಬಲ್ಯ ಮತ್ತು ಬೀಜ ಬಿತ್ತನೆಯ ವಿಧಾನಗಳ ಮೇಲಿನ ನಿಯಂತ್ರಣ, ಬಲವಂತವಾಗಿ ಹೇರಲಾಗುತ್ತಿರುವ ವಾಣಿಜ್ಯೀಕರಣ ಮತ್ತು ಮಾರುಕಟ್ಟೆ ಪೂರಕವಾದ ಬೆಳೆಯ ಬಿತ್ತನೆ, ಜಾತಿ ಆಧಾರಿತ ತಾರತಮ್ಯ, ದಲಿತರು ಮತ್ತು ತುಳಿತಕ್ಕೊಳಗಾದವರ ಮೇಲಿನ ದೌರ್ಜನ್ಯ, ನವ ಬ್ರಾಹ್ಮಣವಾದ ಮತ್ತು ಬ್ರಾಹ್ಮಣ್ಯದ ಶ್ರೇಣೀಕರಣ, ನಿಯಂತ್ರಣ ಮತ್ತು ಪ್ರಾಬಲ್ಯ ಇವೆಲ್ಲವನ್ನೂ ಎದುರಿಸಬೇಕಿದೆ. ಬಂಡವಾಳಶಾಹಿ ಬೆಳವಣಿಗೆಯಲ್ಲಿ ಹಳೆಯ ಕಾಲದ ಜಮೀನ್ದಾರಿಕೆ ಹೊಸ ಸ್ವರೂಪಗಳನ್ನು ಪಡೆದುಕೊಂಡಿದ್ದು ಗ್ರಾಮೀಣ ಪ್ರದೇಶಗಳಲ್ಲಿ ಭೂಮಾಲೀಕ ವಿರೋಧಿ ಹೋರಾಟಗಳು ಆಧುನಿಕ ಘಟ್ಟದಲ್ಲಿ ಪ್ರಭುತ್ವ ವಿರೋಧಿ, ಕಾರ್ಪೋರೇಟ್ ವಿರೋಧಿ ಸ್ವರೂಪ ಪಡೆಯುತ್ತಿದೆ. ಈ ಮನ್ವಂತರ ಪ್ರಕ್ರಿಯೆ ಅದೇ ಹಳೆಯ ಜಮೀನ್ದಾರಿಕೆಯ ಮುಂದುವರೆದ ಭಾಗವಾಗಿದೆ ಎಂಬ ಎಚ್ಚರಿಕೆಯೂ ನಮಗಿರಬೇಕು. ಇಂತಹ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಭೂ ಹೋರಾಟಗಳು ಪ್ರಥಮ ಆದ್ಯತೆಯಾಗಿರುತ್ತವೆ. ಕೃಷಿ ಕ್ಷೇತ್ರದಲ್ಲಿ ಕುಸಿಯುತ್ತಿರುವ ಆದಾಯ ಮತ್ತು ಲಾಭವಾಗಲೀ, ದಿನೇ ದಿನೇ ಹೆಚ್ಚಾಗುತ್ತಿರುವ ರೈತರ ಆತ್ಮಹತ್ಯೆಗಳಾಗಲೀ ಭೂಮಿಗಾಗಿ ಪರಿತಪಿಸುವ ಪ್ರವೃತ್ತಿಯನ್ನು ಹೋಗಲಾಡಿಸಿಲ್ಲ. ವಾಸ್ತವ ಎಂದರೆ ಗ್ರಾಮೀಣ ಪ್ರದೇಶಗಳಲ್ಲಿನ ಹೋರಾಟಗಳು ಮೂಲತಃ, ಗ್ರಾಮೀಣ ಬಡ ಜನತೆಯಿಂದ ಭೂಮಿಯನ್ನು ಕಸಿದುಕೊಳ್ಳುವ ಕಾರ್ಪೋರೇಟ್ ಉದ್ಯಮಿಗಳ ವಿರುದ್ಧ ಹೋರಾಟವೇ ಆಗಿದೆ. ಈ ಕಾರಣಕ್ಕಾಗಿಯೇ ದಲಿತರ ಶೋಷಣೆ ಮತ್ತು ದಮನ ಹೆಚ್ಚಾಗುತ್ತಿದ್ದು ಗ್ರಾಮೀಣ ಪ್ರದೇಶಗಳಲ್ಲಿ ಶ್ರೀಮಂತ ವರ್ಗಗಳು, ಪ್ರಬಲ ವರ್ಗಗಳು ಮತ್ತು ಜಾತಿಗಳು ಸಂಪೂರ್ಣ ನಿಯಂತ್ರಣ ಸಾಧಿಸಿವೆ.

ಕರ್ನಾಟಕದಲ್ಲಿ ಕಮ್ಯುನಿಸ್ಟ್ ಪಕ್ಷ ಒಂದು ರಾಜಕೀಯ ಶಕ್ತಿಯಾಗಿ ಹೊರ ಹೊಮ್ಮಬೇಕಾದ ಪೂರ್ವ ಸಿದ್ಧತೆ ಏನೆಂದರೆ –ಗ್ರಾಮೀಣ ಬಡವರು, ಬಡರೈತರು ಮತ್ತು ಕೃಷಿ ಕಾರ್ಮಿಕರ ನಡುವೆ ತಳಹದಿಯನ್ನು ಹಾಕಬೇಕಾದ ಅವಶ್ಯಕತೆ ಇದೆ. ಕರ್ನಾಟಕದ ಕೃಷಿಯಲ್ಲಿ ನಾಲ್ಕು ದಶಕಗಳಲ್ಲಿ ಆಗಿರುವ ಬಂಡವಾಳಶಾಹಿ ಬೆಳವಣಿಗೆಯ ಪರಿಣಾಮಗಳ ವಿಶ್ಲೇಷಣೆ ಮಾಡಿ, ಗ್ರಾಮಾಂತರ ಪ್ರದೇಶದ ಕೆಲಸಕ್ಕೆ

ಬೇಕಾಗಿರುವ ನೀತಿಗಳು ಮತ್ತು ತಂತ್ರಗಳನ್ನು ರೂಪಿಸುವುದು ಈ ಸಂಧರ್ಭದಲ್ಲಿ ನಮ್ಮ ಮುಂದಿರುವ ಮುಖ್ಯವಾದ ಅಂಶವಾಗಿರುತ್ತದೆ. ಎಂ.ಎಲ್ ಚಳುವಳಿ ಸಫಲತೆ ಯಾಗುವುದರ ಮೂಲಕ ಕರ್ನಾಟಕದಲ್ಲಿ ಕಮ್ಯೂನಿಸ್ಟ್ ಚಳುವಳಿಯ ಚಾರಿತ್ರಿಕ ಬಲಹೀನತೆಗಳನ್ನು ಸರಿಮಾಡಬಹುದು.

ಕಾರ್ಮಿಕ ಸಂಘಟನೆಗಳಲ್ಲಿನ ಅಧಿಕಾರಶಾಹಿ ಮನೋಭಾವ ಮತ್ತು ರಾಜಕೀಯವಿಲ್ಲದ ಕಾರ್ಮಿಕ ಚಳುವಳಿ, ದೇಶದ ಇತರೆಡೆ ಇದ್ದಂತೆಯೇ ಇಲ್ಲಿಯೂ ಸಹ ಇದೆ. ಕರ್ನಾಟಕದಲ್ಲಿ ಒಂದು ಕ್ರಾಂತಿಕಾರಿ ಕಾರ್ಮಿಕ ಚಳುವಳಿಯನ್ನು ಹುಟ್ಟುಹಾಕಲು ಪ್ರಜ್ಞಾವಂತ, ದಿಟ್ಟ ಮತ್ತು ಸ್ಥಿರ ಮನಸ್ಸಿನ ಹೋರಾಟ ಅಗತ್ಯ. ಕಾರ್ಮಿಕರಿಗೆ ಕ್ರಾಂತಿಕಾರಿ ರಾಜಕಾರಣದ ಅಸ್ತ್ರಗಳನ್ನು ನೀಡುವ ಮೂಲಕ ಮಾತ್ರವೇ ಕಾರ್ಮಿಕ ಚಳುವಳಿಯಲ್ಲಿನ ಈ ನ್ಯೂನತೆಗಳನ್ನು, ಲೋಪಗಳನ್ನು ಸರಿಪಡಿಸಲು ಸಾಧ್ಯ. ಮೊದಲನೆಯ ಹೆಜ್ಜೆಯಾಗಿ ಕಾರ್ಮಿಕ ಸಂಘಟನೆಗಳು ಮತ್ತು ದುಡಿಯುವ ವರ್ಗಗಳ ನಡುವೆ ಇರುವ ನೇರ ಸಂಬಂಧಗಳನ್ನು ಮನದಟ್ಟು ಮಾಡಿಕೊಳ್ಳಬೇಕು. ಮೇಲೆ ಹೇಳಿರುವ ಎಲ್ಲಾ ಅಂಶಗಳನ್ನೊಳಗೊಂಡ ದೃಷ್ಠಿಕೋನವನ್ನಿಟ್ಟುಕೊಂಡು, ರಾಜಕೀಯದಿಂದ ದೂರ ಇರುವ ಕಾರ್ಮಿಕ ಸಂಘಟನೆಗಳಿಗೆ ಪರ್ಯಾಯವಾಗಿ ರಾಜಕೀಯ ಪ್ರಜ್ಞೆ ಇರುವ ಕ್ರಾಂತಿಕಾರಿ ಕಾರ್ಮಿಕ ಚಳುವಳಿಯನ್ನು ಕಟ್ಟಬೇಕು.

ಕಾರ್ಮಿಕರು ಹೆಚ್ಚಿನ ವೇತನ, ಉತ್ತಮ ಸೌಕರ್ಯಗಳು ಮತ್ತು ಕಾರ್ಯಕ್ಷೇತ್ರದಲ್ಲಿ ಉತ್ತಮ ಪರಿಸರವನ್ನು ಆಗ್ರಹಿಸುವ ಹಿನ್ನೆಲೆಯಲ್ಲೇ ಸಂಘಟಿತರಾಗುವುದು ಸಹಜ ಸ್ವಾಭಾವಿಕ ಪ್ರಕ್ರಿಯೆ. ಸುಧಾರಣಾವಾದ, ಸಮಾಜವಾದಿ ಪ್ರಜಾತಾಂತ್ರಿಕ ಕಾರ್ಮಿಕ ಸಂಘಟನೆಗಳು ಈ ಹೆಜ್ಜೆಯನ್ನು ದಾಟಿ ಮುಂದೆ ಹೋಗುವುದಿಲ್ಲ. ಇತ್ತೀಚಿಗೆ ಉಗ್ರವಾದ ಕಾರ್ಮಿಕ ಹೋರಾಟವನ್ನು ಎಲ್ಲಿಯಾದರೂ ಕಾಣುವುದಾದರೆ ಅದು ಬೆಂಗಳೂರಿನ ಗಾರ್ಮೆಂಟ್ಸ್ ಕಾರ್ಮಿಕರು, ತಮಿಳುನಾಡಿನ ಪ್ರಿಕೋಲ್‌ನ ವಾಹನ ಸಲಕರಣೆ ಕಾರ್ಮಿಕರು, ಮಾರುತಿ ಕಾರ್ಮಿಕರ ಮತ್ತು ದೆಹಲಿಯ ಕಾರ್ಖಾನೆಗಳಲ್ಲಿನ ಕಾರ್ಮಿಕರ ಹೋರಾಟಗಗಳಲ್ಲಿ ಕಾಣಬಹುದಾಗಿದೆ. ಬೆಂಗಳೂರಿನ ಗಾರ್ಮೆಂಟ್ಸ್ ಕಾರ್ಮಿಕರ ಹೋರಾಟ ಪೂರ್ವಯೋಜಿತವಲ್ಲ. ಹಠಾತ್ತನೆ ಆರಂಭವಾದ ಈ ಹೋರಾಟಕ್ಕೆ ಯಾವುದೇ ಸಂಘಟಿತ ಕಾರ್ಮಿಕ ಸಂಘಟನೆಯೂ ನಾಯಕತ್ವ ಒದಗಿಸಲಾಗಲಿಲ್ಲ. ಆದರೆ ಕೇಂದ್ರ ಸರ್ಕಾರ ಭವಿಷ್ಯನಿಧಿ ಸುತ್ತೋಲೆಯನ್ನು ಹಿಂಪಡೆಯುವಂತೆ ಮಾಡುವಲ್ಲಿ ಕಾರ್ಮಿಕರ ಹೋರಾಟ ಯಶಸ್ವಿಯಾಗಿತ್ತು. ಮೋದಿ ಸರ್ಕಾರ ತನ್ನ ಕಾರ್ಮಿಕ ವಿರೋಧಿ ನೀತಿಯನ್ನು ಹಿಂಪಡೆದ ಏಕೈಕ ನಿದರ್ಶನ ಇದಾಗಿದೆ. ಈ

ಹೋರಾಟದಿಂದ ನಾವು ಕಲಿಯುವುದು ಸಾಕಷ್ಟಿದೆ. ಮೊದಲನೆಯದಾಗಿ ಇದು ಸ್ಥಾಪಿತ ಕಾರ್ಮಿಕ ಚಳುವಳಿಗಳ ಇತಿಮಿತಿಗಳನ್ನು ಸ್ಪಷ್ಟಪಡಿಸಿದೆ. ಹೋರಾಟವನ್ನು ಇನ್ನೂ ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ವಿಫಲವಾಗಿರುವುದರಲ್ಲಿ ನಮ್ಮ ಪಕ್ಷದ ಲೋಪವೂ ಇದೆ. ಇದು ನಮಗೆ ಪಾಠ ಕಲಿಸಲೇಬೇಕಿದೆ. ಕಾರ್ಮಿಕರ ಇಂತಹ ಹಠಾತ್ ಹೋರಾಟಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಲು ನಾವು ಸಿದ್ಧತೆ ನಡೆಸಬೇಕಿದೆ. ಮೋದಿ ಆಡಳಿತದಲ್ಲಿ ಹೆಚ್ಚಾಗುತ್ತಿರುವ ಉದಾರೀಕರಣ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಇಂತಹ ಹೋರಾಟಗಳು ಮತ್ತಷ್ಟು ತೀಕ್ಷ್ಣವಾಗುತ್ತವೆ. ನಾವು ನಮ್ಮ ನಿಷ್ಕ್ರೀಯತೆಯಿಂದ ಹೊರಬಂದು ಉಗ್ರ ಕಾರ್ಮಿಕ ಸಂಘರ್ಷಗಳಿಗೆ ಸಜ್ಜಾಗಬೇಕಿದೆ.

ಬಹುರಾಷ್ಟ್ರೀಯ ಕಂಪನಿಗಳಲ್ಲಿ, ಬೃಹತ್ ಕಾರ್ಪೋರೇಟ್ ಸಮೂಹಗಳಲ್ಲಿ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಅತಿ ಹೆಚ್ಚಿನ ವೇತನ ಗಳಿಸುವ ಖಾಯಂ ನೌಕರರು ಇದ್ದಾರೆ. ಮತ್ತೊಂದೆಡೆ ಯಾವುದೇ ರಕ್ಷಣೆ ಇಲ್ಲದೆ, ಸುಭದ್ರತೆ ಇಲ್ಲದ ಗುತ್ತಿಗೆ ಕಾರ್ಮಿಕರೂ ಹೇರಳವಾಗಿದ್ದಾರೆ. ಖಾಯಂ ನೌಕರರ ಸಂಖ್ಯೆ ಸತತವಾಗಿ ಕ್ಷೀಣಿಸುತ್ತಲೇ ಇದೆ, ಕನಿಷ್ಠ ಕೂಲಿಯನ್ನೂ ಪಡೆಯಲಾಗದ ಕಾರ್ಮಿಕರ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಕೆಲವು ಬಹುರಾಷ್ಟ್ರೀಯ ಕಂಪನಿಗಳು ಚಾಣಾಕ್ಷತನವನ್ನು ಪ್ರದರ್ಶಿಸುತ್ತಿದ್ದು ಪ್ರಸ್ತುತ ಜಾರಿಯಲ್ಲಿರುವ ಸೀಮಿತ ಕಾಯ್ದೆ ಕಾನೂನುಗಳನ್ನೇ ಬಳಸಿಕೊಂಡು 6–8 ತಿಂಗಳವರೆಗೆ ತರಬೇತಿಗಾಗಿ ನೌಕರರನ್ನು ನೇಮಕ ಮಾಡುತ್ತಿವೆ. ಕಾರ್ಮಿಕರಿಗೆ ವೇತನ ಭದ್ರತೆ, ನೌಕರಿ ಭದ್ರತೆ ಇಲ್ಲದಾಗಿದ್ದು ಹೊಸ ಕಾನೂನು ಜಾರಿಯಾದ ನಂತರ ಭವಿಷ್ಯ ನಿಧಿ, ಇಎಸ್ಐ ಸೌಲಭ್ಯಗಳೂ ಇಲ್ಲದಾಗಿವೆ. ಹೊಸ ಕಾನೂನಿನ ಅನ್ವಯ ಭವಿಷ್ಯನಿಧಿ ಮತ್ತು ಇಎಸ್ಐ ಸೌಲಭ್ಯಗಳು ಐಚ್ಛಿಕ ವಿಷಯಗಳಾಗಿವೆ. ಹಾಗಾಗಿ ಕಂಪನಿಗಳು ನಾಮಕಾವಸ್ಥೆ ವಿಮೆ ಪಡೆದು ನಂತರ ತಪ್ಪಿಸಿಕೊಳ್ಳುತ್ತಿವೆ. ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಕನಿಷ್ಟ ವೇತನದ ಕಡ್ಡಾಯ ನೀತಿಯನ್ನೂ ರದ್ದುಪಡಿಸಲು ಸಜ್ಜಾಗುತ್ತಿದ್ದು 4,500/– ರಿಂದ 5,000/– ರೂಗಳ ತಳಮಟ್ಟದ ವೇತನವನ್ನು ಜಾರಿಗೊಳಿಸಲು ಯತ್ನಿಸುತ್ತಿದೆ. ಮಾಧ್ಯಮಗಳ ಸುಳ್ಳು ಸುದ್ದಿಗಳು ತಿಳಿಸಿರುವಂತೆ ಕನಿಷ್ಟ ವೇತನ 18,000/– ರೂಗಳಲ್ಲ ಎಂಬುದನ್ನು ಗಮನದಲ್ಲಿಡಬೇಕು. ದಿನಕ್ಕೆ 8 ಗಂಟೆಗಳ ಕೆಲಸದ ನಿಯಮವನ್ನೂ ಗಾಳಿಗೆ ತೂರಲಾಗುತ್ತಿದ್ದು ಅನೇಕ ಖಾಸಗಿ ಕಂಪನಿಗಳಲ್ಲಿ ದಿನಕ್ಕೆ 12 ಗಂಟೆ ನಿಗದಿಪಡಿಸಲಾಗುತ್ತಿದೆ. ಕಾರ್ಮಿಕ ಕಾಯ್ದೆಗೆ ತಿದ್ದುಪಡಿ ಮಾಡಿರುವ ಹಿನ್ನೆಲೆಯಲ್ಲಿ ಗುತ್ತಿಗೆ ಕಾರ್ಮಿಕರು ಸಮಾನ ಕೆಲಸಕ್ಕೆ ಸಮಾನ ವೇತನ ನಿಯಮಕ್ಕೆ ಒಳಪಡುವುದಿಲ್ಲ. ಆಯಾ ರಾಜ್ಯಗಳ ಕನಿಷ್ಟ ವೇತನವನ್ನು ಮಾತ್ರವೇ ಪಡೆಯಬಹುದಾಗಿದೆ. ನೌಕರರನ್ನು ವಜಾ ಮಾಡಲು ಮತ್ತು ಉದ್ದಿಮೆಯನ್ನು ಮುಚ್ಚಲು ಸರ್ಕಾರದಿಂದ ಅನುಮತಿ ಪಡೆಯುವ ನಿಯಮಗಳಿಗೆ ತಿದ್ದುಪಡಿ

ಮಾಡಿರುವುದರಿಂದ ಶೇ 75ರಷ್ಟು ಕಂಪನಿಗಳು ಕಾರ್ಮಿಕ ಕಾಯ್ದೆಯನ್ನು ಉಲ್ಲಂಘಿಸುತ್ತಿವೆ. ಇದುವರೆವಿಗೂ 100 ಜನರಿಗಿಂತ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ, ಕಾರ್ಖಾನೆಯನ್ನು ಮುಚ್ಚಲು ಸರ್ಕಾದ ಅನುಮತಿ ಪಡೆಯ ಬೇಕಾಗಿತ್ತು. ಆದರೆ ತಿದ್ದುಪಡಿ ಮಾಡಿದಲ್ಲಿ 300ಕ್ಕಿಂತ ಅಧಿಕವಾಗಿದ್ದಾರೆ ಮಾತ್ರ ಸರ್ಕಾರದ ಅನುಮತಿ ಪಡೆಯಬೇಕಾಗಿರುತ್ತದೆ. ಕಾರ್ಮಿಕ ಸಂಘಟನೆಗಳನ್ನು ಸ್ಥಾಪಿಸಲು ಇರುವ ನಿಯಮಗಳನ್ನು ಕಠಿಣಗೊಳಿಸಲಾಗಿದೆ. ಸಾಮಾನ್ಯ ಕಾರ್ಮಿಕರ ಸಂಘಟನೆಗಳ ನೋಂದಣಿಗೆ ಅವಕಾಶವೇ ಇಲ್ಲವಾಗಿದೆ. ಹಲವಾರು ರೀತಿಗಳಲ್ಲಿ ಕಾರ್ಮಿಕರ ಮುಷ್ಕರದ ಹಕ್ಕನ್ನು ಕಸಿದುಕೊಳ್ಳಲಾಗುತ್ತಿದೆ. ಈ ಎಲ್ಲ ಕಾರ್ಮಿಕ ಕಾನೂನುಗಳು ದೇಶದ ದುಡಿಯುವ ವರ್ಗಗಳ ಸುದೀರ್ಘ ಹೋರಾಟ ಮತ್ತು ಮುಷ್ಕರಗಳ ಫಲವಾಗಿ, ತ್ಯಾಗ ಬಲಿದಾನಗಳ ಫಲವಾಗಿ ಲಭ್ಯವಾಗಿವೆ. ಇಂತಹ ಸಂದರ್ಭದಲ್ಲಿ ಇಂದಿನ ದುಡಿಯುವ ವರ್ಗಗಳು 8 ಗಂಟೆಯ ದುಡಿತ ಎನ್ನುವ ಶತಮಾನದ ಹಿಂದಿನ ಬೇಡಿಕೆಗಳಿಗಾಗಿ, ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಡಬೇಕಿರುವುದು ದುರಂತ. ಕಾರ್ಮಿಕ ವಿರೋಧಿ, ಕಾರ್ಪೋರೇಟ್ ಪರ ಕಾನೂನುಗಳ ವಿರುದ್ಧ ಪ್ರತಿಭಟಿಸಿ ಹೋರಾಡುವುದು ನಮ್ಮ ಮುಖ್ಯ ಆದ್ಯತೆಯಾಗಿದ್ದು, ದುಡಿಯುವ ವರ್ಗಗಳ ಪ್ರಬಲ ಹೋರಾಟಕ್ಕೆ ವೇದಿಕೆ ಸೃಷ್ಟಿಸುವುದು ನಮ್ಮ ಆದ್ಯತೆಯಾಗಬೇಕಾಗಿದೆ. ದುಡಿಯುವ ವರ್ಗಗಳು ತಮ್ಮ ವ್ಯಕ್ತಿಗತ ಸ್ವಾತಂತ್ರ್ಯಕ್ಕಾಗಿ ಮಾತ್ರವೇ ಹೋರಾಡುವುದಲ್ಲ, ಪ್ರತಿರೋಧದ ಹಕ್ಕು, ಪ್ರತಿಭಟನೆಯ ಹಕ್ಕು ಮತ್ತು ಸಮಸ್ತ ಜನತೆಯ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕಿದೆ. ಕಾರ್ಪೋರೇಟ್ , ಕೋಮುವಾದಿ ಫ್ಯಾಸಿಸಂ ವಿರುದ್ಧ ದಿಟ್ಟ ಹೋರಾಟ ನಡೆಸುವ ಮೂಲಕವೇ ಇದು ಸಾಧ್ಯವಾಗುತ್ತದೆ.

ಗಗನದೆತ್ತರದ, ಗಾಜಿನ ಗೋಡೆಗಳನ್ನು ಹೊಂದಿದ ಐಷಾರಾಮಿ ಗಗನಚುಂಬಿ ಕಟ್ಟಡಗಳ ಸಮೀಪದಲ್ಲೇ ಟಿನ್ ಮೇಲ್ಛಾವಣಿ ಇರುವ ಗುಡಿಸಲುಗಳನ್ನು ಕಾಣುವುದು ಇತ್ತೀಚಿನ ದಿನಗಳಲ್ಲಿ ಸಾಮಾನ್ಯ ಸಂಗತಿಯಾಗಿದೆ. ಗಗನಚುಂಬಿ ಅಪಾರ್ಟ್‌ಮೆಂಟ್ ಕಟ್ಟಡಗಳನ್ನು ವಲಸೆ ಬಂದಿರುವ ಕಟ್ಟಡ ಕಾರ್ಮಿಕರು ಕಟ್ಟುತ್ತಾರೆ. ಆದರೆ ತಾವು ಮಾತ್ರ ಪ್ಲಾಸ್ಟಿಕ್ ಹೊದಿಕೆ ಇರುವ ಸಣ್ಣ ಗೂಡುಗಳಲ್ಲಿ ಬದುಕುತ್ತಾರೆ. ಕೊಳೆಗೇರಿಗಳು ದಾರಿದ್ರ್ಯದ ಕೂಪವಾಗಿದ್ದು ಇದು ಎಲ್ಲ ನಗರಗಳಲ್ಲೂ ಕಾಣುವ ಸತ್ಯ, ಬೆಂಗಳೂರು ಹೊರತೇನಲ್ಲ. ಬೆಂಗಳೂರಿನಲ್ಲಿ ಒಂದು ಸಾವಿರಕ್ಕೂ ಹೆಚ್ಚು ಕೊಳೆಗೇರಿಗಳಿವೆ. ಕೊಳೆಗೇರಿಗಳು ಕೇವಲ ಬಡತನದ ಕೂಪಗಳಲ್ಲ. ಈ ಕೊಳೆಗೇರಿಗಳಲ್ಲಿ ವಾಸಿಸುವ ಬಹುಪಾಲು ಜನರು ದಲಿತ ಸಮುದಾಯಕ್ಕೆ, ಅಲ್ಪಸಂಖ್ಯಾತ ಸಮುದಾಯಕ್ಕೆ ಮತ್ತು ಅತಿ ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರುತ್ತಾರೆ. ಶೇ 30ರಷ್ಟು ಕೊಳೆಗೇರಿಗಳಲ್ಲಿ ಕುಡಿಯುವ

ನೀರು ಲಭ್ಯವಿರುವುದಿಲ್ಲ. ಶೇ 66.3ರಷ್ಟು ಕೊಳೆಗೇರಿಗಳಲ್ಲಿ ಶೌಚಾಲಯ ಸೌಲಭ್ಯ ಇರುವುದಿಲ್ಲ. ಶೇ 37.3ರಷ್ಟು ಕೊಳೆಗೇರಿಗಳಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲ, ಶೇ 54.5ರಷ್ಟು ಕೊಳೆಗೇರಿಗಳಲ್ಲಿ ಸರಿಯಾದ ರಸ್ತೆಗಳಿಲ್ಲ. ಶೇ 63.6ರಷ್ಟು ಕೊಳೆಗೇರಿಗಳಲ್ಲಿ ಬೀದಿ ದೀಪಗಳಿಲ್ಲ. ಶೇ 75.4ರಷ್ಟು ಕೊಳೆಗೇರಿಗಳಲ್ಲಿ ಪ್ರಾಥಮಿಕ ಸಾರ್ವಜನಿಕ ಆರೋಗ್ಯ ಕೇಂದ್ರಗಳಿಲ್ಲ.

ಬೆಂಗಳೂರನ್ನು ಸಿಂಗಪೂರ ಮಾಡುವ ವಿಕೃತ ಕಲ್ಪನೆ ಕೆಲವೇ ಐಟಿ ಮತ್ತು ಐಟಿಇಎಸ್ ಕಂಪನಿಗಳಿಗೆ ರಕ್ಷಣೆ ಮತ್ತು ಸೌಲಭ್ಯಗಳನ್ನು ಒದಗಿಸಲು ಸೀಮಿತವಾಗಿದೆ. ಸರ್ಕಾರ ಯಾವ ವಿಮಾ ಪಾಲಿಸಿಯನ್ನು ಪಡೆಯಬೇಕೆಂದು ನಾರಾಯಣ ಹೃದಯಾಲಯ ಆಸ್ಪತ್ರೆಗಳ ಸಮೂಹದ ಅಧ್ಯಕ್ಷರು ಆಯ್ಕೆ ಮಾಡುತ್ತಾರೆ. ಬಯೋಟೆಕ್ನಾಲಜಿ ನೀತಿಯ ಬಗ್ಗೆ ಕಿರಣ್ ಮಜುಂದಾರ್ ನಿರ್ಧರಿಸುತ್ತಾರೆ, ಎಲ್ಲಿ ಫುಟ್‌ಪಾತ್‌ಗಳನ್ನು ನಿರ್ಮಿಸಬೇಕು, ಬೀದಿ ವ್ಯಾಪಾರಿಗಳಿಗೆ ಎಲ್ಲಿ ಅವಕಾಶ ನೀಡಬೇಕು ಎಂದು ಜನಾಗ್ರಹದಂತಹ ಎನ್‌ಜಿಒ ನಿರ್ಧರಿಸುತ್ತದೆ. ಯಾರೋ ಕೆಲವು ಮಧ್ಯಮ ವರ್ಗದವರು ಸಾಮಾಜಿಕ ತಾಣದಲ್ಲಿ ಬೀದಿ ವ್ಯಾಪಾರಿಯನ್ನೋ ಅಥವಾ ಕೊಳೆಗೇರಿಯನ್ನೋ ಉಚ್ಚಾಟಿಸಲು ಕೋರಿದರೆ ಸರ್ಕಾರ ಅವರ ಬೇಡಿಕೆಯನ್ನು ಪಾಲಿಸುತ್ತದೆ. ಸ್ಥಳೀಯ ಆರ್ಥಿಕತೆಯಲ್ಲಿ ಮೂಲ ಸೌಕರ್ಯಗಳೇ ಇರುವುದಿಲ್ಲ. ಸರ್ಕಾರದ ಬೆಂಬಲವೂ ಇರುವುದಿಲ್ಲ. ಅಧಿಕಾರರೂಢ ಪಕ್ಷಗಳು ಮತ್ತು ವಿರೋಧ ಪಕ್ಷಗಳು ಬೆಂಗಳೂರನ್ನು ಒಂದು ಜನಪರ ನಗರವನ್ನಾಗಿ ಮಾಡುವ ದೃಷ್ಟಿಕೋನವನ್ನೇ ಹೊಂದಿಲ್ಲ. ಈ ನಿಟ್ಟಿನಲ್ಲಿ ಎಲ್ಲ ಪಕ್ಷಗಳ ಧೋರಣೆಯೂ ಒಂದೇ ಆಗಿರುತ್ತದೆ. ಎಲ್ಲ ಪಕ್ಷಗಳು ಕಾರ್ಪೋರೇಟ್ ಪರ ಮತ್ತು ಶ್ರೀಮಂತರ ಪರವಾಗಿವೆ. ನಗರ ಪ್ರದೇಶದ ಆಡಳಿತ ನೀತಿಗಳ ಸಂಪೂರ್ಣವಾಗಿ ಜನಪರವಾಗುವಂತೆ, ಬಡ ಜನತೆಯ, ತುಳಿತಕ್ಕೊಳಗಾದವರ ಮತ್ತು ದುರ್ಬಲರ ಪರವಾಗಿರಲು ನಾವು ಆಗ್ರಹಿಸಬೇಕಿದೆ. ರಾಜಕೀಯದಲ್ಲಿ ಪ್ರಬಲ ಜಾತಿ ಸಮುದಾಯಗಳು ಅಧಿಪತ್ಯ ಸಾಧಿಸಿವೆ. ಕೋಮುವಾದಿ ಫ್ಯಾಸಿಸ್ಟ್ ಪಕ್ಷಗಳು ಗದ್ದುಗೆ ಏರಲು ಶ್ರಮಿಸುತ್ತಿದ್ದು ಇವರ ಹಿಂದೆ ರಿಯಲ್ ಎಸ್ಟೇಟ್ ಮಾಫಿಯಾ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದ ಮಾಫಿಯಾಗಳು ಇವೆ. ಸಾರ್ವಜನಿಕ ಹಣವನ್ನು ಲೂಟಿ ಮಾಡಿ ಜನರನ್ನು ಶೋಷಿಸಲು ಬೆಂಗಳೂರು ನಗರವು ಮಾಫಿಯಾಗಳ ಕೇಂದ್ರ ತಾಣವಾಗಿದೆ.

ನಗರ ಪ್ರದೇಶಗಳಲ್ಲಿ ಅಧಿಕಾರದ ಹಲವು ಹಂತಗಳು ಕೆಲಸ ನಿರ್ವಹಿಸುತ್ತಿವೆ. ಮೇಲಿನ ಹಂತದಲ್ಲಿ ಬೂರ್ಷ್ವಾಗಳೇ ಇದ್ದರೆ, ನಿರ್ವಾಹಕರು, ಮಧ್ಯವರ್ತಿಗಳು, ರಾಜಕಾರಣಿಗಳು, ಸರ್ಕಾರಿ ಅಧಿಕಾರಿಗಳು, ಪೊಲೀಸರು ಮತ್ತು

ನ್ಯಾಯಾಂಗದ ಒಂದು ಭಾಗ ಉಳಿದ ಹಂತಗಳಲ್ಲಿ ಪ್ರಬಲವಾಗಿದ್ದಾರೆ. ಅಧಿಕಾರ ರಾಜಕಾರಣದ ಕೆಲವು ಪದರಗಳು ಬೂರ್ಷ್ವಾಗಳಿಗೆ ಉತ್ತಮ ರಕ್ಷಣೆ ಒದಗಿಸುತ್ತವೆ. ನಗರ ಪ್ರದೇಶಗಳಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ಬೂರ್ಷ್ವಾಗಳನ್ನು ಗುತ್ತಿಗೆದಾರರು ಮತ್ತು ದಲ್ಲಾಳಿಗಳಲ್ಲಿ ಕಾಣಬಹುದು. ಇವರು ಅಸಂಘಟಿತ ಕಾರ್ಮಿಕರು ಮತ್ತು ವಲಸೆ ಕಾರ್ಮಿಕರನ್ನು ತೀವ್ರ ಶೋಷಣೆಗೊಳಪಡಿಸುತ್ತಲೇ ತಮ್ಮ ಅಧಿಪತ್ಯ ಸಾಧಿಸುತ್ತಾರೆ.  ನವ ಶ್ರೀಮಂತ ವರ್ಗ ಮತ್ತು ಬೂರ್ಷ್ವಾಗಳು ಸಮಾಜಘಾತುಕ ಶಕ್ತಿಗಳ ಜಾಲವನ್ನು ನಿರ್ಮಿಸಿ, ಮಾಫಿಯಾಗಳ ಮೂಲಕ ತಮ್ಮ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಇಂತಹ ಪ್ರವೃತ್ತಿಯಿಂದಲೇ ಬೂರ್ಷ್ವಾಗಳ ಪುಂಡರ ತಂಡಗಳು ಸೃಷ್ಟಿಯಾಗುತ್ತವೆ. ಬಂಡವಾಳ, ಪ್ರಭುತ್ವ, ಗುತ್ತಿಗೆದಾರರು ಮತ್ತು ಭ್ರಷ್ಟರಾಜಕಾರಣಿಗಳ ಒಂದು ದುಷ್ಟ ಕೂಟ ನಗರಗಳಲ್ಲಿ ಅಧಿಕಾರ ಕೇಂದ್ರಗಳ ಮೇಲೆ ತಮ್ಮ ಹಿಡಿತ ಸಾಧಿಸಿವೆ. ನಗರ ಪ್ರದೇಶಗಳಲ್ಲಿ ಈ ದುಷ್ಟಕೂಟವೇ ಜನಸಾಮಾನ್ಯರ ಶತ್ರುಗಳಾಗಿವೆ. ಈ ದುಷ್ಟಕೂಟಗಳ ಜಾಲವನ್ನು ಬೇಧಿಸಲು ಜನಪರ ಚಳುವಳಿಗಳು ತಂತ್ರಗಳನ್ನು ರೂಪಿಸಬೇಕಿದ್ದು ಜನಸಾಮಾನ್ಯರ ಆಗ್ರಹಗಳಿಗೆ ಮನ್ನಣೆ ನೀಡಬೇಕಿದೆ.

ನವಉದಾರವಾದಿ ನೀತಿಗಳನ್ನು ಅನುಸರಿಸುವ ಬೆಂಬಲಿಸುವ ಬಂಡವಾಳ ಶಾಹಿಗಳಿಗೆ ರಾಜಕೀಯದ ಮೇಲೆ ಮತ್ತು ರಾಜ್ಯಾಂಗದ ಮೇಲೆ ನೇರವಾಗಿ ಇರುವ ಹಿಡಿತವನ್ನು ಕಾಣಬಹುದು. ಅಶೋಕಖೇಣಿ, ಸಂತೋಷ್ ಲಾಡ್, ರೆಡ್ಡಿ ಸಹೋದರರು ಮುಂತಾದವರು ಇದಕ್ಕೆ ಉದಾಹರಣೆ. ಸಂತೋಷ್ ಲಾಡ್ ಒಂದು ಕಡೆ ಕಾರ್ಮಿಕ ಸಚಿವರಾಗಿದ್ದಾರೆ ಇನ್ನೊಂದು ಕಡೆ ಕೆಲವು ಗಣಿಯ ಮಾಲೀಕರಾಗಿಯು ಇದ್ದಾರೆ. ಅವರಿಗೆ ಸ್ವಂತವಾಗಿರುವ ಗಣಿಯಲ್ಲಿ ನೂರಾರು ಕಾರ್ಮಿಕರಿಗೆ ಯಾವುದೇ ಕಾರ್ಮಿಕ ಕಾನೂನು ಅನ್ವಯಿಸುವುದಿಲ್ಲ. ಇಂತಹ ಗಣಿ ಮಾಲೀಕ ಕಾರ್ಮಿಕ ಸಚಿವರಾಗಿರುವುದು ಸರ್ಕಾರದ ಕಾರ್ಮಿಕ ವಿರೋಧಿ ಮತ್ತು ಜನ ವಿರೋಧಿ ಮತ್ತು ಬಂಡವಾಳ ಶಾಹಿ ಪರ ಇದೆ ಎಂಬುವುದನ್ನು ತೋರಿಸುವುದಕ್ಕೆ ಇದು ಒಂದು ಉದಾಹರಣೆ ಮತ್ತು ಸಾಕ್ಷಿಯಾಗಿದೆ.

ಕರ್ನಾಟಕ ರಾಜ್ಯವು ಧರ್ಮಗಳ ನಡುವೆ ಧಾರ್ಮಿಕ ಸಹನೆ, ಪರಸ್ಪರ ಗೌರವ ಮತ್ತು ಸಹ ಬಾಳ್ವೆಯ ಮಹಾನ್ ಪರಂಪರೆ ಹೊಂದಿದೆ. ಇದನ್ನು ಕೋಮುವಾದಿ ಫ್ಯಾಸಿಸ್ಟ್ ಶಕ್ತಿಗಳಾದ ಆರ್.ಎಸ್.ಎಸ್, ಬಿ.ಜೆ.ಪಿ ಮತ್ತು ಸಂಘ ಪರಿವಾರಗಳು ನಾಶ ಮಾಡುತ್ತಿದ್ದವೆ. ಕೊಳೆಚೆ ಪ್ರದೇಶ ಮತ್ತು ಬಡವರು ವಾಸ ಮಾಡುವ ಸ್ಥಳಗಳಲ್ಲಿ ತನ್ನ ಸ್ಥಾನವನ್ನು ನಿರ್ಮಾಣ ಮಾಡಲಿಕ್ಕೆ ಬಡವರಿಗೆ ಬೇಕಾಗಿರು ಸೌಲಭ್ಯಗಳನ್ನು ಕಲ್ಪಿಸು ಕೂಡುವ ನೆಪದಲ್ಲಿ ನಾನಾ ತಂತ್ರಗಳನ್ನು

ಮಾಡುತ್ತಿದ್ದಾರೆ ವಿವಿಧ ಉಪಜಾತಿಗಳ ನಡುವೆ ಜನರನ್ನು ಒಡೆದು ಹಾಳುವ ನೀತಿಯನ್ನು ಅನುಸರಿಸುತ್ತಿದ್ದಾರೆ, ಮತ್ತು ಅವರ ನಡುವೆ ಜಾತಿ ದ್ವೇಷ ಉಂಟು ಮಾಡುತ್ತಿದ್ದಾರೆ. ನಗರ ಪ್ರದೇಶಗಳ ಮಾಧ್ಯಮ ವರ್ಗಗಳು ಬಿ.ಜೆ.ಪಿಯ "ರಾಷ್ಟ್ರೀಯತೆ" ಅಜೆಂಡ ಮತ್ತು "ಬೆಳವಣಿಗೆ" ಘೋಷಣೆಗಳಿಂದ ದಾರಿ ತಪ್ಪಿದ್ದು, ಅವರುಗಳು ಫ್ಯಾಸಿಸ್ಟ್ ಕ್ರೂರ ಮುಖವನ್ನು ಮತ್ತು ಕೊಲೆ ಪಾತಕ ರಾಜೀಕಿಯವನ್ನು ಅರ್ಥ ಮಾಡಿಕೊಂಡಿಲ್ಲ. "ಸ್ವಚ್ಛಾ ಭಾರತ" ಹೆಸರಿನಲ್ಲಿ ಬಹಿರಂಗ ಸ್ಥಳಗಳಲ್ಲಿ ಮಲವಿಸರ್ಜನೆ ಮಾಡುವವರನ್ನು ಅವಮಾನ ಮಾಡಲಾಗುತ್ತಿದೆ. ಶೌಚಾಲಯಗಳನ್ನು ಕಟ್ಟಿಸಲಾಗದ ಬಡವರಿಗೆ ಆ ಕಾರ್ಯಕ್ರಮದಿಂದ ನಿಜವಾಗಿಯೂ ಪ್ರಯೋಜನವಾಗಿಲ್ಲ. ಗೋ ರಕ್ಷಣೆಯ ಹೆಸರಲ್ಲಿ ಈ ಗೋರಕ್ಷಕರು ಬಿ.ಜೆ.ಪಿಯ ಕೊಲೆ ಮಾಡುವ ಪಡೆಗಳಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಬಿ.ಜೆ.ಪಿಯು ಮನುಷ್ಯರಿಗಿಂತ ಹೆಚ್ಚಾಗಿ ಗೋವುಗಳಿಗೆ ರಕ್ಷಣೆ ಕೊಡುತ್ತಾರೆ. ಹುಸಿ ರಾಷ್ಟ್ರೀಯತೆಯ ಹೆಸರಿನಲ್ಲಿ ಸಾವಿರಾರು ಮಧ್ಯಮ ವರ್ಗ ಮತ್ತು ಐಟಿ ವೃತ್ತಿಪರರರನನ್ನು ಬಿ.ಜೆ.ಪಿ ಮತ್ತು ಅರ್.ಎಸ್.ಎಸ್ ರವರು ಮನಪರಿವರ್ತನೆ ಮಾಡಿದ್ದಾರೆ.

ಕೋಮುದ್ವೇಷ ರಾಜಕೀಯದ ಮೂಲಕ ಕರ್ನಾಟಕದಲ್ಲಿ ಹಲವಾರು ಕೊಲೆಗಳು ನಡೆದಿವೆ. ಕೋಮು ದ್ವೇಷವು ಧರ್ಮ ಅಲ್ಪಸಂಖ್ಯಾತರು ಮಾತ್ರವಲ್ಲದೆ ಅದನ್ನು ವಿರೋಧಿಸುವ ರಾಜಕೀಯ ಧ್ವನಿಗಳ ಮೇಲೂ ಕೂಡ ಹಲ್ಲೆ ಮಾಡಲಾಗುತ್ತಿದೆ. ಕಲುಬುರ್ಗಿಯವರ ಕೊಲೆ ಮತ್ತು ಇತ್ತೀಚೆಗೆ ಗೌರಿ ಲಂಕೇಶರ ಕೊಲೆ ಕೋಮುವಾದಿಯ ಅಸಹಿಷ್ಣತೆಯನ್ನು ತೋರಿಸುತ್ತದೆ. ವಾಕ್ ಮತ್ತು ಅಭಿವ್ಯಕ್ತಿ ಸ್ವತಂತ್ರಕ್ಕೆ ಬಿ.ಜೆ.ಪಿ ಮತ್ತು ಆರ್.ಎಸ್.ಎಸ್ ಅಡ್ಡಿ ಪಡಿಸುತ್ತಿದ್ದಾವೆ. ಕೆ.ಎಸ್. ಭಗವಾನ್ ಮತ್ತು ಯೋಗೇಶ್ ಮೇಲಿನ ದಾಳಿ ಇದನ್ನು ಸ್ಪಷ್ಟ ಪಡಿಸುತ್ತದೆ. ಕಾಂಗ್ರೇಸ್ ಪಕ್ಷವು ತನ್ನ ನವ ಉದಾರವಾದ ನೀತಿಗಳಿಂದ ದೊಡ್ಡ ಬೂರ್ಜ್ವಾಗಳು, ಊಳಿಗಮಾನ್ಯ ಶಕ್ತಿಗಳು ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳ ಹಿತಾಸಕ್ತಿಯನ್ನು ಕಾಪಾಡುವ ಮತ್ತು ನವ ಉದಾರಿವಾದ ನೀತಿಗಳನ್ನು ಅನುಸರಿಸುತ್ತಾ, ಆಳುವ ವರ್ಗದ ಪಕ್ಷವಾಗಿ ಇದೆ. ಬಿ.ಜೆ.ಪಿ ಕೂಡ ಅದೇ ಆಳುವ ವರ್ಗಗಳ ಪ್ರತಿನಿಧಿಯಾಗಿದ್ದು ನೀಚಾ ಹಿಂಧುತ್ವ ರಾಜಕೀಯವನ್ನು ಅಳವಡಿಸುತ್ತಾ, ಆಳುವ ವರ್ಗದ ಹಿತಾಸಕ್ತಿಗಳ ಪರವಾಗಿ ಧರ್ಮವನ್ನು ರಾಜಕೀಯ ಅಸ್ತ್ರವನ್ನಾಗಿ ಉಪಯೋಗಿಸುತ್ತಿದೆ. ಪ್ರಾದೇಶಿಕ ಪಕ್ಷಗಳು ಅದರಲ್ಲೂ ಶ್ರೀಮಂತ ರೈತರನ್ನು ಪ್ರತಿನಿಧಿಸುವ ಜನತಾದಳದ ಹಲವಾರು ಅವತಾರಗಳು ಅಂದರೆ ಜ್ಯಾತ್ಯಾತೀತಾ ಹೆಸರು ಹೇಳಿಕೊಂಡು ಆಳುವ ವರ್ಗಗಳ ಹಿತಾಸಕ್ತಿಯನ್ನು ಕಾಪಾಡುವ ಪಕ್ಷವಾಗಿಯೇ ಉಳಿದಿದೆ. ಕರ್ನಾಟಕವು ಎರಡು ಭಾಗವಾಗಿದ್ದು ಒಂದು ಶ್ರೀಮಂತ/ಬಲಾಡ್ಯರದ್ದು ಇನ್ನೊಂದು ಬಡವರು/ಬಲಹೀನರದ್ದು

ಕಾಂಗ್ರೇಸ್ ನಾಯಕತ್ವದ ಸರ್ಕಾರವು ಕರ್ನಾಟಕದಲ್ಲಿ ಅಸಮರ್ಥವಾಗಿದ್ದು ಕೋಮುವಾದಿ ಮತ್ತು ಪ್ರಬಲ ಜಾತಿಗಳನ್ನು ಒಲೈಸುವ ಕೆಲಸ ಮಾಡುತ್ತಿದೆ. ಕೃಷಿ ಬಿಕ್ಕಟ್ಟು, ದಲಿತರ ಮೇಲಿನ ಅತ್ಯಾಚಾರ, ಪುರುಷ ಪ್ರಧಾನ ವ್ಯವಸ್ಥೆ, ಮಹಿಳೆಯರ ಮೇಲಿನ ದಾಳಿ ದಿನೇ ದಿನೇ ಹೆಚ್ಚುತ್ತಿದ್ದು, ಕರ್ನಾಟಕ ಸರ್ಕಾರವು ಮೂಕ ಪ್ರೇಕ್ಷಕನಂತಿದೆ. ಅಸಂಘಟಿತ ಕಾರ್ಮಿಕರ ಮತ್ತು ಗುತ್ತಿಗೆ ಕಾರ್ಮಿಕರು ಅದೇ ರೀತಿಯ ಕಾರ್ಮಿಕರುಗಳಿಗೆ ಅರ್ಥಪೂರ್ಣವಾದ ವೇತನ ಮತ್ತು ಸೌಲಭ್ಯಗಳು ಸಿಗುತ್ತಿಲ್ಲ. ಕೃಷಿ ಕಾರ್ಮಿಕರಿಗೆ ಉದ್ಯೋಗ ಖಾತರಿ ಯೋಜನೆಯಡಿ ಖಡ್ಡಾಯವಾಗಿ ಸಿಗಬೇಕಿರುವ ಕೆಲಸಗಳು ಸಿಗುತ್ತಿಲ್ಲ ಮತ್ತು ಅದಕ್ಕೆ ಬದಲು ಉದ್ಯೋಗ ಖಾತರಿ ಯೋಜನೆಯಲ್ಲಿ ನಡೆಯುತ್ತಿರುವ ಭ್ರಷ್ಟಚಾರದ ವಿರುದ್ಧ ಹೋರಾಟಗಳನ್ನು ಮಾಡಬೇಕಾದ ಸಂದರ್ಭ ಬಂದಿದೆ. ಕೃಷಿ ಮತ್ತು ವಸತಿಗಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಭೂಮಿ ಒಂದು ಸಮಸ್ಯೆಯಾಗಿದೆ ಮತ್ತು ಬೆಡಿಕೆಯಾಗಿದೆ. ಅದೇ ರೀತಿಯಲ್ಲಿ ವಸತಿಗಾಗಿ ಭೂಮಿ ಎನ್ನುವುದು ದೊಡ್ಡ ಬೇಡಿಕೆಯಾಗಿದೆ. ಶಿಕ್ಷಣದ ಖಾಸಗೀಕರಣ ಮತ್ತು ವಾಣಿಜ್ಯ ಕರಣದಿಂದ ಬಡ ಮತ್ತು ಹಿಂದುಳಿದ ವಿದ್ಯಾರ್ಥಿಗಳಿಗೆ ಶಿಕ್ಷಣ ಕೈಗೆಟುಕುತ್ತಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಕಾರ್ಪೋರೇಟ್ ಪರ ಕಾನೂನುಗಳನ್ನು ಮಾಡಿ ಸರ್ಕಾರಿ ಶಾಲೆಗಳನ್ನು ಮುಚ್ಚಲು ಕಾಂಗ್ರೇಸ್ ಸರ್ಕಾರ ಹೊರಟಿದೆ. ಕಾರ್ಪೋರೇಟ್ ಮತ್ತು ಕೋಮು ಶಕ್ತಿಗಳನ್ನು ಖುಷಿಪಡಿಸಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಕಾಂಗ್ರೇಸ್ ಸರ್ಕಾರ ಮಾಡುತ್ತಿದೆ. ಬಹುಪಾಲು ಸಂಖ್ಯೆಯಲ್ಲಿ ಇರುವ ಹಿಂದುಗಳನ್ನು ಖುಷಿ ಪಡಿಸುವ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ರಾಜ್ಯದಲ್ಲಿ ಕೋಮು ಶಕ್ತಿಗಳು ಎದ್ದು ಬರಲು ಕಾಂಗ್ರೇಸ್ ಸರ್ಕಾರ ಅವಕಾಶ ಮಾಡಿಕೊಡುತ್ತದೆ. ಕಾಂಗ್ರೆಸ್ ಅನುಸರಿಸುವ ಮೃದು ಹಿಂದುತ್ವ ದೋರಣೆ ಅ ಪಕ್ಷವನ್ನು ರಾಜಕೀಯ ಸ್ಮಶಾನಕ್ಕೆ ಕರೆದುಕೊಂಡು ಹೋಗುತ್ತದೆ. ಕಾಂಗ್ರೇಸ್ ವೀರಶೈವ ವಿವಾದದಲ್ಲಿ ಕಾಂಗ್ರೇಸ್ ಅನುಸರಿಸಿದ ನಿಲುವು ಇದನ್ನು ತೋರಿಸುತ್ತದೆ. ವಿಧಾನ ಸೌಧದಲ್ಲಿ ಗೋ ವ್ಯಾಪಾರಕ್ಕೆ ವಿರುದ್ಧವಾಗಿ ತೀರ್ಮಾನವನ್ನು ತರುವ ಕಾಂಗ್ರೇಸ್ ಸರ್ಕಾರ ಗೋಮಾಂಸ ತಡೆಗೆ ವಿರುದ್ಧವಾಗಿ ನಡೆಯುವ ಹೋರಾಟಕ್ಕೆ ಅನುಮತಿ ಕೊಡುವುದಿಲ್ಲ. ಅಲ್ಪ ಸಂಖ್ಯಾತರ ಮೇಲೆ ಸಂಘಪರಿವಾರದವರು ಕೋಮು ದಾಳಿ ಮಾಡಿದರೂ, ತಡೆಯಲು ರಾಜ್ಯ ಸರ್ಕಾರ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ. ಕಾಂಗ್ರೇಸ್ ಪಕ್ಷದ ಜಾತ್ಯಾತೀತ ನಿಲುವು ಬರೀ ಬಾಯಿ ಮಾತು ಅಷ್ಟೆ ಅವರು ಅದನ್ನು ಕಾರ್ಯ ರೂಪಕ್ಕೆ ತರುವುದಿಲ್ಲ. ಕಾಂಗ್ರೇಸ್ ಸರ್ಕಾರವು ಕೆಲವು ದಲಿತ ನಾಯಕರನ್ನು ಸೇರಿಸಿಕೊಂಡು ಡಾ॥ ಅಂಬೇಡ್ಕರ್ ರವರ

ಅಂತರಾಷ್ಟ್ರೀಯ ಸಮ್ಮೇಳನವನ್ನು ನಡೆಸಿದ ಕಾರಣ ಮಾತ್ರಕ್ಕೆ ದಲಿತರ ಪರಿಪೂರ್ಣ ಬೆಂಬಲವನ್ನು ನಿರೀಕ್ಷಿಸಿಲಾಗುವುದಿಲ್ಲ.

ಸಂಘ ಪರಿವಾರದ ಕೋಮು ಪ್ಯಾಸಿಸ್ಟ್ ಶಕ್ತಿಗಳು ಜನರ ಮೇಲೆ ಆಗುತ್ತಿರುವ ನಿಜವಾದ ಸಮಸ್ಯೆಗಳನ್ನು ಮುಚ್ಚಿಟ್ಟು ಕಾಂಗ್ರೇಸ್ ಸರ್ಕಾರ ಮಾಡುವ ಒಂದೊಂದು ತಪ್ಪುಗಳನ್ನು ಬೆಟ್ಟು ಮಾಡಿ ತೋರಿಸಿ ತಮ್ಮ ರಾಜಕೀಯಕ್ಕೆ ಲಾಭ ಪಡೆಯಲು ಬಳಸಿಕೊಳ್ಳುತ್ತಿದ್ದಾರೆ. ಆರ್.ಎಸ್.ಎಸ್, ಬಿ.ಜೆ.ಪಿ ಮತ್ತು ಭಜರಂಗದಳ ಮತ್ತು ಇತ್ಯಾದಿ ಸಂಘಪರಿವಾರದ ಶಕ್ತಿಗಳು ಜನರ ಮಧ್ಯ ಕೋಮು ದ್ವೇಷವನ್ನು ಬಿತ್ತುತ್ತಿದ್ದಾವೆ. ಜಾತಿ ತಾರತಮ್ಯವನ್ನು ಹಾಗೂ ದಲಿತರ ಮತ್ತು ದಮನಿತ ಜಾತಿಗಳ ಮೇಲೆ ನಡೆಯುವ ದಾಳಿಯನ್ನು ಮುಚ್ಚಿಟ್ಟು, ಜಾತಿವಾದವನ್ನು ಎತ್ತಿ ಹಿಡಿಯುವ ಬ್ರಾಹ್ಮಣವಾದ ಸಿದ್ಧಾಂತವನ್ನು ಮುಂದುವರಿಸುತ್ತಿದ್ದಾರೆ. ಕೋಮು ಶಕ್ತಿಗಳಿಗೆ ವಿರುದ್ಧವಾಗಿ ಮುಂಚೂಣಿಯಲ್ಲಿದ್ದು ಹೋರಾಟ ಮಾಡಬೇಕಾಗಿರುವ ದಲಿತರು ಮತ್ತು ದಮನಿತ ಜಾತಿಯವರು ಆ ಶಕ್ತಿಗಳಿಗೆ ಬಲಿಪಶುಗಳಾಗುತ್ತಿರುವುದು ದುರಂತ. ಗೋ ರಕ್ಷಕ ಹೆಸರಲ್ಲಿ ಒಂದು ಬಿ.ಜೆ.ಪಿಗೆ ಸೇರಿದ ದಲಿತ ಕಾರ್ಯಕರ್ತನನ್ನೆ ಆರ್.ಎಸ್.ಎಸ್ ಗೂಂಡಾಗಳು ಕೊಂದಿರುವುದನ್ನು ನಾವು ನೋಡಿದ್ದೇವೆ. ಟಿಪ್ಪು ಸುಲ್ತಾನ್ ಒಬ್ಬ ಜ್ಯಾತ್ಯಾತೀತ ರಾಜ ಮತ್ತು ಬ್ರಿಟಿಷರಿಗೆ ವಿರುದ್ಧವಾದ ಹೋರಾಟದಲ್ಲಿ ಹುತಾತ್ಮರಾದ ಕರ್ನಾಟಕದ ನಾಯಕ ಎಂದು ಚರಿತ್ರೆ ಹೇಳುತ್ತದೆ. ಅಂತಹ ಟಿಪ್ಪು ಸುಲ್ತಾನ್‌ಗೆ ಕೋಮು ಬಣ್ಣವನ್ನು ಹಾಕಿ, ಅವರ ಜನ್ಮ ದಿನಾಚರಣೆಯನ್ನು ವಿರೋಧಿಸಿ, ಕೋಮು ಗಲಭೆಗಳನ್ನು ಮಾಡುವುದಕ್ಕೆ ದಾರಿ ಮಾಡಿಕೊಡುತ್ತಾರೆ. ಬಿ.ಜೆ.ಪಿ ಬ್ರಾಹ್ಮಣವಾದ ಶಕ್ತಿಗಳ ಪಕ್ಷ ಮಾತ್ರವಲ್ಲ, ಮೇಲು ಜಾತಿ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಅದೇ ವೇಳೆ ದಲಿತರು ಮತ್ತು ಹಿಂದುಳಿದ ಜಾತಿಗಳ ನಡುವೆ ಕೂಡ ತಮ್ಮ ಆಳವಾದ ಬೇರುಗಳನ್ನು ಬಿಟ್ಟಿದ್ದಾರೆ. ಬಿ.ಜೆ.ಪಿಯನ್ನು ಮೇಲು ಜಾತಿಗೆ ಮಾತ್ರ ಸೀಮಿತವಾದ ಪಕ್ಷ ಎಂದು ಇನ್ನೂ ಮುಂದೆ ಹೇಳುವುದಕ್ಕೆ ಆಗುವುದಿಲ್ಲ. ಬಿ.ಜೆ.ಪಿ ಹಿಡಿತದಲ್ಲಿ ಇರುವ ಪ್ರಗತಿ ಪರ ಶಕ್ತಿಗಳನ್ನು ಮನವರಿಕೆ ಮಾಡಿ, ಸರಿಯಾದ ದಾರಿಯಲ್ಲಿ ತರುವುದು ನಮ್ಮ ಮುಂದೆ ಇರುವ ಮುಖ್ಯ ಕರ್ತವ್ಯವಾಗಿದೆ.

ಜೆ.ಡಿ.ಎಸ್ ಪ್ರಭಾವ ಕುಂಠಿತವಾಗಿದ್ದು, ಅದು ಕರ್ನಾಟಕದ ಕೆಲವೇ ಪ್ರದೇಶಗಳಿಗೆ ಸೀಮಿತಗೊಂಡಿದ್ದು ಅದು ವಿರೋಧ ಪಕ್ಷದ ಸ್ಥಾನವನ್ನು ಬಿ.ಜೆ.ಪಿಗೆ ನೀಡಿದೆ. ಮಣ್ಣಿನ ಮಗ ಅಥವಾ ಜಾತ್ಯಾತೀತಾ ಮಾತಿನಿಂದ ಜೆ.ಡಿ.ಎಸ್ ತನ್ನ ಕಳೆದು ಹೋದ ನೆಲೆಯನ್ನು ಪುನರ್ ಸ್ಥಾಪಿಸಲು ಸಾಧ್ಯವಿಲ್ಲ. ಬಿ.ಜೆ.ಪಿ ವಿರುದ್ದ ಇರುವ ಜೆ.ಡಿ.ಎಸ್ ತನ್ನ ಪೈಪೋಟಿಯನ್ನು ಒಂದು ಹಂತಕ್ಕೆ ತಂದಿತ್ತು ಆದರೆ

ಅದನ್ನು ಕಳೆದುಕೊಂಡು ನಾಶವಾಗುವ ಸ್ಥಿತಿಗೆ ಬಂದಿದೆ. ವಾಸ್ತವ ಏನೆಂದರೆ, ಪ್ರಾರಂಭದ ಹಂತದಲ್ಲಿ ಬಿ.ಜೆ.ಪಿ ಒಂದು ದೊಡ್ಡ ಪಕ್ಷವಾಗಿ ಕರ್ನಾಟಕದಲ್ಲಿ ಬೆಳೆಯಲು ಜೆ.ಡಿ.ಎಸ್ ಸಹಾಯ ಮಾಡಿದೆ. ಹಾಸನ ಜಿಲ್ಲೆಯ ಸಿಂಗಮಾರನಹಳ್ಳಿ ದೇವಸ್ಥಾನಕ್ಕೆ ದಲಿತರ ಪ್ರವೇಶ ಮತ್ತು ವಿಜಯಮಲ್ಯನ ಸಂದರ್ಭದಲ್ಲಿ ಅವರ ನಿಲುವುಗಳು ದಿವಾಳಿತನದ ಸಂಕೇತವಾಗಿತ್ತು. ಹೀಗಾಗಿ ಕರ್ನಾಟಕದಲ್ಲಿ ಹಿಂದುಳಿದ ಜಾತಿಗಳ ರಾಜಕೀಯಕ್ಕೆ ಇರುವ ಜಾಗ ಕಡಿಮೆ ಆಗಿದೆ.

ಕರ್ನಾಟಕದಲ್ಲಿ ಸಿಪಿಐ ಮತ್ತು ಸಿಪಿಎಂ ಪಕ್ಷಗಳು ಬಲಹೀನವಾಗಿದ್ದು, ಕೆಲವು ಕ್ಷೇತ್ರಗಳಲ್ಲಿ ಗರಿಷ್ಠ ರೂ. 10,000/– ಮತಗಳನ್ನು ಗಳಿಸಿದ್ದಾರೆ ಮತ್ತು ಅವರ ಸಂಘಟನೆ ಶಕ್ತಿಯು ಅಷ್ಟೆ ಇದೆ. ಟ್ರೇಡ್ ಯೂನಿಯನ್ ರಂಗದಲ್ಲಿ ಸಾಕಷ್ಟು ಪ್ರಬಲರಾಗಿದ್ದರೂ ಸಹ ಅದು ರಾಜಕೀಯ ಶಕ್ತಿಯಾಗಿ ಬೆಳೆಯಲಿಲ್ಲ. ಆದರೆ ಅವರುಗಳು ಚುನಾವಣಾ ರಾಜಕೀಯದಲ್ಲಿ ಹೆಚ್ಚು ಆಸಕ್ತರಾಗಿದ್ದರೂ ಮಿಲಿಟೆಂಟ್ ಸಮೂಹ ರಾಜಕೀಯ ಚಳುವಳಿಯನ್ನು ಕಟ್ಟಿ, ಆಧಿಕಾರಸ್ಥರನ್ನು ಎದುರಿಸುವಲ್ಲಿ ನಿರಾಶಕ್ತರಾಗಿದ್ದಾರೆ. ಅವರ ಕಾರ್ಯಕ್ರಮಗಳು ಕೇವಲ ಹೆಸರಿಗೆ ಮಾತ್ರವಾಗಿರುತ್ತವೆ.

ಸಂಘಟನೆಗಳಾದ ರೆಡ್‌ಸ್ಟಾರ್ ಮತ್ತು ಜನಶಕ್ತಿಗಳು ಎಂ.ಎಲ್ ಚಳುವಳಿಯ ವಾರಸುದಾರರೆಂದು ಹೇಳಿಕೊಳ್ಳುತ್ತಾರೆ ಆದರೆ ಅವರು ಕ್ರಾಂತಿಕಾರಿ ಮಾರ್ಗದಿಂದ ಹೊರ ಹೋಗಿದ್ದಾರೆ. ಕೆಲವು ಸಂಧರ್ಭದಗಳಲ್ಲಿ ಎಂ.ಎಲ್ ಚಳುವಳಿಯ ಮಾತುಗಳನ್ನು ಮಾತ್ರ ಆಡುತ್ತಾರೆ. ಅವರಲ್ಲಿ ಯಾವುದೇ ಪರ್ಯಾಯ ಅರ್ಥಿಕ ಮತ್ತು ರಾಜಕೀಯ ಕಾರ್ಯಕ್ರಮಗಳು ಇಲ್ಲ. ಅಷ್ಟೇ ಅಲ್ಲದೆ ಅವರಿಗೆ ಕರ್ನಾಟಕ ರಾಜ್ಯದ ಬಗ್ಗೆ ಯಾವುದೇ ದೂರದೃಷ್ಠಿಕೋನವಿಲ್ಲ.

ರೈತ ಸಂಘ ಮತ್ತು ದಲಿತ ಸಂಘರ್ಷ ಸಮಿತಿ ನಡುವೆ ಒಂದು ಹೊಂದಾಣಿಕೆ ತರುವುದರ ಮೂಲಕ ದಲಿತರು ಮತ್ತು ಹಿಂದುಳಿದ ಜಾತಿಗಳ ನಡುವೆ ಹೊಂದಾಣಿಕೆ ತರುವ ಒಂದು ಸಾಧ್ಯವಿಲ್ಲದ ಪ್ರಯತ್ನವನ್ನು ಕೈಗೊಂಡಿರದ್ದ ಕಾರಣ ಸರ್ವೋದಯ ಸಂಘಟನೆಯ ರಾಜಕೀಯ ಮುಂದುವರಿಯಲಿಲ್ಲ. ಸಂದರ್ಭಕ್ಕೆ ತಕ್ಕಂತೆ ಅವಕಾಶವಾದಿ ರಾಜಕೀಯ ಹೊಂದಾಣಿಕಯನ್ನು ಮಾಡವುದರ ಮೂಲಕ ತನ್ನ ರಾಜಕೀಯವನ್ನು ಮುಂದುವರಿಸುವ ಸಂಘಟನೆಯಾಗಿ ಸರ್ವೋದಯ ಪಕ್ಷ ಉಳಿದಿದೆ. ಈ ಸರ್ವೋದಯ ಸಂಘಟನೆ ಶ್ರೀಮಂತ ರೈತರನ್ನು ಪ್ರತಿನಿಧಿಸುವ ರೈತ ಸಂಘದ ನಾಯಕತ್ವದಲ್ಲಿದೆ. ಅದರಲ್ಲಿ ದಲಿತ ಸಂಘಟನೆಗಳು ಒಂದು ಅಲಂಕಾರಿಕ ಗೊಂಬೆಯಾಗಿದ್ದಾವೆ.

ಕೆಳಮಟ್ಟದಲ್ಲಿ ವರ್ಗ ಅಡಿಪಾಯವನ್ನು ಕಟ್ಟುವಲ್ಲಿ ನಮ್ಮ ಹೆಚ್ಚಿನ ಶ್ರಮವನ್ನು ಹಾಕಿದ್ದೇವೆ. ಕೋಮು ಪ್ಯಾಸಿಸ್ಟ್ ಶಕ್ತಿಗಳು ಎದ್ದು ಬರುವ ಹಿನ್ನೆಲೆಯಲ್ಲಿ ನಮ್ಮ ರಾಜಕೀಯ ಸಮರ್ಥನೆ ಪಕ್ಷದ ಮುಖ್ಯ ಅಜೆಂಡವಾಗಬೇಕಿದೆ. ನಮ್ಮ ರಾಜಕೀಯ ಮಧ್ಯ ಪ್ರವೇಶ ಕೂಡ ಹೆಚ್ಚಾಗಬೇಕು. ಹೊಸ ಹೊಸ ರಾಜಕೀಯ ಬೆಳೆವಣಿಗಳು ಸಂಭವಿಸುವಂತಹ ಸಮಯದಲ್ಲಿ ನಮ್ಮ ನಿಲುವನ್ನು ಪತ್ರಿಕೆ ಹೇಳಿಕಗಳ ಮೂಲಕ ಕಾಲದಿಂದ ಕಾಲಕ್ಕೆ ತಿಳಿಸುತ್ತಿರಬೇಕು. ದಲಿತರ ಮೇಲೆ ದೌರ್ಜನ್ಯ ಮತ್ತು ಮಹಿಳೆಯರ ಮೇಲೆ ಅತ್ಯಾಚಾರ ಪ್ರಕರಣಗಳು ನಡೆದಾಗ ಸತ್ಯಶೋಧನ ಸಮಿತಿ ತಂಡವನ್ನು ಕೂಡಲೇ ಕಳುಹಿಸಬೇಕು.

ಇಂತಹ ಪರಿಸ್ಥಿತಿಯಲ್ಲಿ ಬಿ.ಜೆ.ಪಿಯ ಕೋಮುವಾದ ದ್ವೇಷ ರಾಜಕೀಯದ ವಿರುದ್ಧವಾಗಿ ಮತ್ತು ಕಾಂಗ್ರೇಸ್ ಪಕ್ಷದ ನವ ಉದಾರಿವಾದ ನೀತಿಗಳಿಗೆ ವಿರುದ್ಧವಾಗಿ ಒಂದು ಬಲಯುತ ರಾಜಕೀಯ ಚಳುವಳಿಯನ್ನು ಕಟ್ಟುವ ಜವಾಬ್ದಾರಿ ನಮ್ಮಂತಹ ಕ್ರಾಂತಿಕಾರಿ ಕಮ್ಯೂಸ್ಟ್ ಪಕ್ಷದ ಹೆಗಲ ಮೇಲಿದೆ. ಸತತವಾಗಿ ತಲಮಟ್ಟದಲ್ಲಿ ಕಷ್ಟಕರವಾದ ಕೆಲಸ ಮಾಡುವುದರ ಜೊತೆಗೆ ರಾಜಕೀಯ ಮಧ್ಯ ಪ್ರವೇಶ ಮಾಡುವುದರ ಮೂಲಕ ಕ್ರಾಂತಿಕಾರಿ ರಾಜಕೀಯ ಚಳುವಳಿಯನ್ನು ಕರ್ನಾಟಕದಲ್ಲಿ ಕಟ್ಟಿ, ಪ್ರಗತಿ ಪರ ರಾಜಕೀಯ ಶಕ್ತಿಗಳನ್ನು ನಮ್ಮಡೆ ಅಕರ್ಷಿಸಬೇಕಾಗಿದೆ. ನಮ್ಮ ಪಕ್ಷದ ಪ್ರಪ್ರಥಮ ರಾಜಕೀಯ ಸಮಾವೇಶವು ನಮ್ಮ ಚಿಮ್ಮುವ ಹಲಗೆಯಾಗಿ ಕರ್ನಾಟಕದ ಕ್ರಾಂತಿಕಾರಿ ಚಳುವಳಿಯ ದಾರಿದೀಪವಾಗಬೇಕು.

ಈ ಉದ್ದೇಶಕ್ಕಾಗಿ ನಾವು 2018 ಫೆಬ್ರವರಿ 14 ರಂದು ಹತ್ತು ಸಾವಿರ ಜನಸಂಖ್ಯೆಯ ಶಕ್ತಿಶಾಲಿ ರ್‍ಯಾಲಿಯನ್ನು ನಡೆಸಲು ಮತ್ತು ಕರ್ನಾಟಕದ ರಾಜಕೀಯದಲ್ಲಿ ನಮ್ಮ ಹೊರಹೊಮ್ಮುವಿಕೆಯನ್ನು ಪ್ರಕಟಿಸಬೇಕೆಂದು ನಿರ್ದೆಶಿಸಿದ್ದೇವೆ. ಈ ರ್‍ಯಾಲಿಗೆ ಪೂರಕವಾಗಿ ಜನವರಿ 2018 ರಂದು ಸ್ವತಂತ್ರ, ಶಿಕ್ಷಣ, ಜ್ಯಾತ್ಯಾತೀತಾ ಪ್ರಜಾಪ್ರಭುತ್ವ, ಆರೋಗ್ಯ, ವಸತಿ ಇತರೆ ಮೂಲಭೂತ ಬೇಡಿಕೆಗಳ ಜೊತೆ ಇನ್ನೂ ಮುಂದುವರಿಯುತ್ತಿರುವ ಡಬ್ಬಲ್ ಲೋಟ ಪದ್ಧತಿಗೆ ವಿರುದ್ಧವಾಗಿ, ಮಹಿಳೆಯ ಮೇಲೆ ನಡೆಯುತ್ತಿರುವ ಅತ್ಯಾಚಾರ ವಿರುದ್ಧ ಪ್ರಚಾರ ಆಂದೋಲನ ಹಮ್ಮಿಕೊಳ್ಳಬೇಕು. ಕಲ್ಬುರ್ಗಿ ಮತ್ತು ಗೌರಿ ಲಂಕೇಶ್ ರಂತಹ ಪ್ರಗತಿಪರ ಹೋರಾಟಗಾರರ ಕೊಲೆಗಳಿಗು ಮತ್ತು ಕೋಮುವಾದಿ ಶಕ್ತಿಗಳು ದಲಿತರ ಮತ್ತು ಅಲ್ಪಸಂಖ್ಯಾತರ ಮೇಲೆ ನಡೆಸುತ್ತಿರುವ ದಬ್ಬಾಳಿಕಗೆಗಳಿಗೂ ಸಿದ್ದರಾಮಯ್ಯ ಸರ್ಕಾರ ಜವಾಬ್ದಾರರೆಂದು ಜನರ ಮುಂದೆ ತೆರೆದಿಡಬೇಕು.

ಬೆಂಗಳೂರು  ರ್‍ಯಾಲಿಗೆ ಪೂರ್ವವಾಗಿ ತಾಲ್ಲೂಕು ಮಟ್ಟದಲ್ಲಿ ಜನ ಸಮೂಹವನ್ನು ಸಂಘಟಿಸಿ ಪ್ರಚಾರ ಆಂದೋಲನ ಮತ್ತು ಹೋರಾಟಗಳನ್ನು ಹಮ್ಮಿಕೊಳ್ಳಬೇಕು.

ಸಿ.ಪಿ.ಐ (ಎಂ.ಎಲ್) ಲಿಬರೇಷನ್ ಪಕ್ಷವು ಈ ಕೆಳಕಂಡವುಗಳಿಗಾಗಿ ಹೋರಾಟ ಮಾಡುತ್ತದೆ.

1. ಕಾರ್ಪೋರೇಟ್, ಕೋಮುವಾದ ಮತ್ತು ಫ್ಯಾಸಿಸ್ಟ್ ದಾಳಿಯ ವಿರುದ್ಧ
2. ನವ ಉದಾರವಾದಿ ನೀತಿಗಳ ವಿರುದ್ಧ
3. ದಲಿತ ಮಹಿಳೆಯರು ಮತ್ತು ದಮನಿತರ ಮೇಲಿನ ದೌರ್ಜನ್ಯದ ವಿರುದ್ಧ
4. ದುಡಿಯುವ ಜನರ ರಾಜಕೀಯವನ್ನು ಸಮರ್ಥಿಸುವುದಕ್ಕಾಗಿ
5. ಜನರ ಕ್ರಾಂತಿಕಾರಕ ಹೋರಾಟಗಳಲ್ಲಿ ಜಯಿಸುವುದಕ್ಕಾಗಿ
6. ಸಮಾನತೆಯ ಕರ್ನಾಟಕ್ಕಾಗಿ
7. ಕರ್ನಾಟಕದಲ್ಲಿ ಕ್ರಾಂತಿಕಾರ ಎಡಪರ ಪರ್ಯಾಯಕ್ಕಾಗಿ.

# II

# ಕೆಲಸದ ಪುನರ್ ಅವಲೋಕನ ಮತ್ತು ಕ್ರಿಯಾ ಯೋಜನೆ

ಇಂದು ನಾವು ಕರ್ನಾಟಕದಲ್ಲಿ ಸಿಪಿಐ (ಎಂಎಲ್) ಲಿಬರೇಷನ್ ಪಕ್ಷದ ಮೊದಲ ರಾಜ್ಯ ಸಮಾವೇಶವನ್ನು ಏರ್ಪಡಿಸುತ್ತಿದ್ದೇವೆ. ಇದರ ಮೂಲಕ ಕರ್ನಾಟಕ ರಾಜ್ಯದಲ್ಲಿ ಪಕ್ಷದ ಭೂಪಟವನ್ನು ನಿರ್ಧರಿಸುತ್ತಿದ್ದೇವೆ. ಇಂದು ನಮ್ಮ ಪಕ್ಷ ಮತ್ತು ಸಮೂಹ ಸಂಘಟನೆಗಳ ಕಾರ್ಯಚಟುವಟಿಕೆಗಳ ಹೆಜ್ಜೆ ಗುರುತುಗಳನ್ನು ಗ್ರಹಿಸಬೇಕಿದೆ. ಕರ್ನಾಟಕದಲ್ಲಿ ಪಕ್ಷವನ್ನು ಕಟ್ಟುವ ಸಂದರ್ಭದಲ್ಲಿ ಎದುರಾಗುವ ಸವಾಲುಗಳನ್ನು ನಾವು ಗ್ರಹಿಸಬೇಕಿದೆ. ಇದರೊಟ್ಟಿಗೇ ಅಲ್ಪಕಾಲಿಕ ಯೋಜನೆಗಳನ್ನೂ, ದೀರ್ಘಕಾಲಿಕ ಧ್ಯೇಯಗಳನ್ನೂ ನಿರ್ಧರಿಸುವ ಮೂಲಕ ಕರ್ನಾಟಕದಲ್ಲಿ ಪ್ರಮುಖ ಕಮ್ಯುನಿಸ್ಟ್ ಪಕ್ಷವಾಗಿ ನಾವು ಹೊರಹೊಮ್ಮಬೇಕಿದೆ.

ಸಮೂಹ ಸಂಘಟನೆಗಳ ವಿಶ್ಲೇಷಣೆ ಮಾಡುವುದಕ್ಕೂ ಮೊದಲು ನಮ್ಮ ಪಕ್ಷ ಸಂಘಟನೆಯ ಪರಿಸ್ಥಿತಿ ಮತ್ತು ಕರ್ನಾಟಕದಲ್ಲಿ ಸೈದ್ಧಾಂತಿಕ ಐಕ್ಯತೆ ಇರುವ ಮತ್ತು ರಾಜಕೀಯವಾಗಿ ಸಕ್ರೀಯವಾಗಿರುವ ಪಕ್ಷವನ್ನು ಕಟ್ಟುವಲ್ಲಿ ಮುಂದೆ ಇರುವ ಸವಾಲುಗಳನ್ನು ನೋಡೋಣಾ.

1. **ಪಕ್ಷ ಕಟ್ಟಲು ಇರುವ ಸವಾಲುಗಳು**

ಸ್ವ – ವಿಮರ್ಶೆ ಮತ್ತು ತಪ್ಪುಗಳನ್ನು ಸರಿಪಡಿಸುವುದು ಕಮ್ಯುನಿಸ್ಟ್ ಪಕ್ಷದ ಮೂಲ ತತ್ವಗಳು. ಮುಕ್ತ ಮನಸ್ಸಿನಂದ ನಾವು ಪಕ್ಷ ನಿರ್ಮಾಣವನ್ನು ಅವಲೋಕಿಸಬೇಕು. ಸೈದ್ಧಾಂತಿಕವಾಗಿ ಬಲಿಷ್ಟವಾದ, ಸಂಘಟನಾತ್ಮಕವಾಗಿ ಪ್ರಬಲವಾದ ಪಕ್ಷವನ್ನು ಕಟ್ಟಲು ಹಲವಾರು ಸವಾಲುಗಳನ್ನು ಮುಕ್ತ ಮನಸ್ಸಿನಿಂದ ಬಗ್ಗೆಹರಿಸಬೇಕು. ಕಮ್ಯುನಿಸ್ಟ್ ಪಕ್ಷ ಕಾರ್ಯಕರ್ತರನ್ನು ಆಧರಿಸಿದ ಪಕ್ಷವಾಗಿದ್ದು ಮೇಲ್ಮಟ್ಟದಿಂದ ಕಟ್ಟಲ್ಪಡುತ್ತದೆ. ಕರ್ನಾಟಕದಲ್ಲಿ ಕೆಲಸ ಮಾಡುವು ಬಹುತೇಕ ಸಂಗಾತಿಗಳು ಬದ್ಧತೆಯಿಂದ ಪಕ್ಷಕ್ಕಾಗಿ ದುಡಿಯುವವರಾಗಿದ್ದಾರೆ. ಹೋರಾಟದ ಮುಂಚೂಣಿಯಲ್ಲಿದ್ದು ವರ್ಗ ಆಧಾರಿತ ಸಮಸ್ಯೆಗಳು, ರಾಜಕೀಯ ಮತ್ತು ನಾಗರಿಕ

ಸಮಸ್ಯೆಗಳಿಗೆ ಹೋರಾಡುತ್ತಿದ್ದಾರೆ. ತಮ್ಮದೇ ಆದ ಕ್ಷೇತ್ರಗಳಲ್ಲಿ ಜನರ ನಡುವೆ ಸಕ್ರಿಯರಾಗಿದ್ದಾರೆ. ಕರ್ನಾಟಕದಲ್ಲಿ ಸಿಪಿಐ ಲಿಬರೇಷನ್ ಪಕ್ಷವನ್ನು ಕಟ್ಟುವ ಕಾರ್ಯದಲ್ಲಿ ಕೈಜೋಡಿಸಿದ್ದಾರೆ. ಪಕ್ಷ ಕಟ್ಟುವಲ್ಲಿ ನಮ್ಮ ಮುಂದೆ ಇರುವ ಕೆಲವು ಸವಾಲುಗಳನ್ನು ಚರ್ಚಿಸೋಣಾ.

ನಮ್ಮ **ಮೊದಲನೆಯ** ಸವಾಲು ಎಂದರೆ, ಸಮೂಹ ಸಂಘಟನೆಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳ ಪಾತ್ರವನ್ನು ಕುರಿತು ಅರ್ಥಮಾಡಿಕೊಳ್ಳುವುದು. ಇಲ್ಲಿ ಕೊರತೆ ಎದ್ದುಕಾಣುತ್ತದೆ. ಸಂಗಾತಿಗಳಲ್ಲಿ ಜನಸಾಮಾನ್ಯರ ಸಮಸ್ಯೆಗಳನ್ನು ನಿವಾರಿಸಲು ಹೋರಾಟದಲ್ಲಿ ನಿರತರಾಗುವ ಇಚ್ಛೆ ಇರುತ್ತದೆ ಆದರೆ ಒಂದು ಪ್ರಬಲ ಕಮ್ಯುನಿಸ್ಟ್ ಪಕ್ಷದ ನೇತೃತ್ವ ಇಲ್ಲದೆ ಇಂತಹ ಹೋರಾಟಗಳು ಎಷ್ಟೇ ಪ್ರಬಲವಾಗಿದ್ದರೂ ವಿಫಲವಾಗುತ್ತವೆ ಎಂಬ ಸತ್ಯವನ್ನು ನಾವು ಗ್ರಹಿಸುತ್ತಿಲ್ಲ. ಜನ ಸಾಮಾನ್ಯರ ನಿತ್ಯದ ಸಂಘರ್ಷಗಳಿಗೆ ಸೈದ್ಧಾಂತಿಕ ಸ್ಪರ್ಶ ನೀಡುವುದು ಪಕ್ಷದ ಆದ್ಯತೆಗಳಲ್ಲಿ ಒಂದಾಗಿರುತ್ತದೆ. ಪಕ್ಷದ ಕಾರ್ಯಕರ್ತರನ್ನು ಈ ಪ್ರಕ್ರಿಯೆಯಲ್ಲೇ ಸಜ್ಜುಗೊಳಿಸಲಾಗುತ್ತದೆ. ಪ್ರತಿಯೊಂದು ಜನಪರ ಹೋರಾಟಗಳಲ್ಲೂ ಕಮ್ಯುನಿಸ್ಟರು ಆಳುವ ವರ್ಗಗಳ ವಿರುದ್ಧ ಜನಸಾಮಾನ್ಯರ ರಾಜಕೀಯ ಪ್ರಜ್ಞೆಯನ್ನು ಹೆಚ್ಚಿಸಲು ಪ್ರಯತ್ನಿಸಬೇಕು. ಇದೇ ಸಂದರ್ಭದಲ್ಲಿ ಪಕ್ಷಕ್ಕೆ ಸೇರ್ಪಡೆಯಾಗಲು ಅರ್ಹರಾದವರನ್ನು ಗುರುತಿಸಬೇಕು. ನಮ್ಮ ಸಮೂಹ ಚಟುವಟಿಕೆಗೆ ಪಕ್ಷದ ಸಮಿತಿಗಳು ಕೇಂದ್ರ ಬಿಂದುವಾಗಬೇಕು. ಪಕ್ಷದ ಶಾಖೆಗಳು ಮತ್ತು ಸ್ಥಳೀಯ ಪ್ರಾದೇಶಿಕ ಸಮಿತಿಗಳು ನಮ್ಮ ಸಮೂಹ ಚಟುವಟಿಕೆಗಳ ಭೂಮಿಕೆಯಾಗಬೇಕು. ನಮ್ಮ ಸಮೂಹ ಸಂಘಟನೆಗಳಲ್ಲಿ ಹಲವಾರು ನಾಯಕರು ಹೊರಹೊಮ್ಮಿದ್ದಾರೆ ಆದರೆ ಕೆಲವರು ಮಾತ್ರ ಸಮೂಹ ಸಂಘಟನೆಯ ಚೌಕಟ್ಟನ್ನು ಮೀರಿ ಬೆಳೆಯುವುದರಲ್ಲಿ ಯಶಸ್ವಿಯಾಗಿದ್ದಾರೆ. ಸಮೂಹ ಸಂಘಟನೆಗಳಲ್ಲಿ ಕ್ರಾಂತಿಕಾರಿ ರಾಜಕಾರಣ , ಕ್ರಾಂತಿಕಾರಿ ಸಿದ್ಧಾಂತ ಮತ್ತು ವರ್ಗ ಪ್ರಜ್ಞೆಯನ್ನು ಮೂಡಿಸುವ ನಿಟ್ಟಿನಲ್ಲಿ ನಾವಿನ್ನೂ ಸಾಕಷ್ಟು ಶ್ರಮಿಸಬೇಕಿದೆ. ಇದರಿಂದ ಸಂಘಟನೆಗಳ ಸದಸ್ಯರಿಗೆ ಮಾರ್ಕ್ಸ್‌ವಾದದ ನೆಲೆಯಲ್ಲಿ ಜನಸಾಮಾನ್ಯರ ಸಮಸ್ಯೆಗಳನ್ನು ಗ್ರಹಿಸಲು ಸಾಧ್ಯವಾಗುತ್ತದೆ. ಈ ಪ್ರಕ್ರಿಯೆಯ ಮೂಲಕವೇ ಪಕ್ಷದ ಕಾರ್ಯಕರ್ತರನ್ನು ಕ್ರಾಂತಿಕಾರಿ ರಾಜಕೀಯ ನಾಯಕರನ್ನಾಗಿ ರೂಪಿಸಲು ಸಾಧ್ಯ.

ನಮ್ಮ ಮುಂದಿರುವ ಮತ್ತೊಂದು ಸವಾಲು, ಪಕ್ಷದ ಸೈದ್ಧಾಂತಿಕ–ರಾಜಕೀಯ ಚಿಂತನೆಯನ್ನು ಗ್ರಹಿಸಿ ಅಂತರ್ಗತಗೊಳಿಸುವುದು. ಇದಕ್ಕೆ ಮಾರ್ಕ್ಸ್‌ವಾದದ ಅಧ್ಯಯನ, ಮಂಥನ ಮತ್ತು ಮನನ ಬಹುಮುಖ್ಯ. ಮಾರ್ಕ್ಸ್‌ವಾದದ ತತ್ವಗಳನ್ನು ಗ್ರಹಿಸಿ ನಿತ್ಯದ ಹೋರಾಟಗಳಲ್ಲಿ ಪಕ್ಷದಲ್ಲಿ

ಅಳವಡಿಸುವುದು ಮುಖ್ಯ. ಹಲವಾರು ವಿಚಾರಗಳಲ್ಲಿ ಅಧಿಕೃತವಾಗಿ ಸಮಾನ ನಿಲುವು ತಾಳುವ ಅವಶ್ಯಕತೆ ಇಲ್ಲದೆ ಇದ್ದರೂ ಪ್ರತಿಯೊಬ್ಬ ಸಂಗಾತಿಯೂ ಒಂದೇ ರೀತಿಯ ಅಭಿಪ್ರಾಯ ಮತ್ತು ಪ್ರತಿಪಾದನೆಯನ್ನು ವ್ಯಕ್ತಪಡಿಸುವಂತಿರಬೇಕು.

ಕಮ್ಯುನಿಸ್ಟ್ ಪಕ್ಷ ಕಾರ್ಯಕರ್ತರನ್ನು ಮತ್ತು  ಸಿದ್ಧಾಂತವನ್ನು ಆಧ ರಿಸಿದ ಪಕ್ಷ. ಸೈದ್ಧಾಂತಿಕ ಸಂಘರ್ಷ ಪಕ್ಷ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ಪಕ್ಷ ಸಂಘಟನೆಯಲ್ಲಿ ಸೈದ್ಧಾಂತಿಕ ಸಂಘರ್ಷವನ್ನು ಮುಂದುವರೆಸಲು ನಾವು ಹಿಂಜರಿಯುತ್ತೇವೆ. ಯಾವುದೇ ಒಂದು ವಿಚಾರದಲ್ಲಿ ತಾತ್ವಿಕ ನಿಲುವು ಪ್ರತಿಪಾದಿಸುವ ಸಂದರ್ಭದಲ್ಲಿ ನಾವು ಪಕ್ಷದ ಮಾರ್ಗದಲ್ಲೇ ನಡೆಯಬೇಕು. ವ್ಯಕ್ತಿಗತ ತಪ್ಪುಗಳು ಕಂಡುಬಂದಲ್ಲಿ, ಪಕ್ಷದ ಸೈದ್ಧಾಂತಿಕ ದೃಷ್ಟಿಕೋನದ ನೆಲೆಯಲ್ಲಿ ಸಮಸ್ಯೆಯನ್ನು ಬಗೆಹರಿಸಬೇಕು. ಪಕ್ಷದ ಆಂತರಿಕ ಸಂಘರ್ಷ ಮತ್ತು ಸಂಘಟನೆಯ ಉದಾರವಾದ  ಕುರಿತಂತೆ ಕಾಂ. ಮಾವೋ ಅನೇಕ ಲೇಖನಗಳನ್ನು ಬರೆದಿದ್ದಾರೆ. ಪ್ರತಿಯೊಂದು ಪಕ್ಷ ಸಂಘಟನೆಯೂ ಈ ಲೇಖನಗಳನ್ನು ಸಮಗ್ರವಾಗಿ ಓದಿ ತಮ್ಮ ಕಾರ್ಯಾಚರಣೆಯಲ್ಲಿ ಅಳವಡಿಸಿಕೊಳ್ಳಬೇಕು. ಆಗ ಇಂತಹ ಪ್ರವೃತ್ತಿಯನ್ನು ತಡೆಗಟ್ಟಬಹುದು. ದುರ್ಬಲವಾದ ಸಂಘಟನೆ ಶತ್ರುಗಳ ವಿರುದ್ಧ ದೃಢ ಹೋರಾಟ ನಡೆಸಲು ಸಾಧ್ಯವಾಗುವುದಿಲ್ಲ. ತನ್ನ ಸದಸ್ಯರಿಗೆ ಮತ್ತು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಸೀಮಿತ ವರ್ಗ ಹೋರಾಟಗಳಲ್ಲಿ ಸಕ್ರಿಯವಾಗಿರುವ ಕಾರ್ಯಕರ್ತರಿಗೆ ರಾಜಕೀಯ ಶಿಕ್ಷಣ ಮತ್ತು ತರಬೇತಿ ನೀಡುವುದು ಪಕ್ಷ ಸಂಘಟನೆಗಳ ಆದ್ಯ ಕರ್ತವ್ಯ.  ವಿಭಿನ್ನ ಹಿನ್ನೆಲೆ ಇರುವ ಹಲವಾರು ರೀತಿಯ ಸಂಗಾತಿಗಳನ್ನು ಹೊಂದಿರುವ ಸಂಘಟನೆ ಎಲ್ಲ ಸಂದರ್ಭಗಳಲ್ಲೂ ಸರ್ವಸಮ್ಮತ ಪ್ರತಿಪಾದನೆ ಮಾಡಲಾಗುವುದಿಲ್ಲ.  ಸಂಘಟನೆಯಲ್ಲಿ ವಿಭಿನ್ನ ದೃಷ್ಟಿಕೋನಗಳನ್ನು ವ್ಯಕ್ತಪಡಿಸಲು ಮುಕ್ತ ಅವಕಾಶ ಇರಬೇಕು. ಭಿನ್ನಾಭಿಪ್ರಾಯಗಳೊಂದಿಗೇ ಕೆಲಸ ಮಾಡುವುದನ್ನೂ ನಾವು ಕಲಿಯಬೇಕು. ಹಾಗೆಯೇ ಬಹುಮತದ ಅಭಿಪ್ರಾಯಕ್ಕೆ ಮನ್ನಣೆ ನೀಡುತ್ತಲೇ ಪ್ರತಿಯೊಬ್ಬರೂ ಮತ್ತೊಬ್ಬರ ಅಭಿಪ್ರಾಯಕ್ಕೆ ಗೌರವ ನೀಡಬೇಕು. ಕಾರ್ಯಾಚರಣೆಯಲ್ಲಿ ಐಕ್ಯತೆ, ಚಿಂತನೆಯಲ್ಲಿ ವೈವಿಧ್ಯತೆ ಮತ್ತು ವಿಭಿನ್ನತೆ ನಮ್ಮ ನಿಯಮವಾಗಬೇಕು.

ನಾವು ತಳಮಟ್ಟದಲ್ಲಿ ಕೆಲಸ ಮಾಡುವ ಸಂದರ್ಭದಲ್ಲಿ ನಮ್ಮ ಬೇಡಿಕೆಗಳಲ್ಲಿ ಕೆಲವು ಸವಲತ್ತುಗಳು, ರಿಯಾಯಿತಿಗಳು ಪ್ರಮುಖವಾಗಿ ಕಾಣುತ್ತವೆ. ರಸ್ತೆ, ವಿದ್ಯುತ್ ಸೌಲಭ್ಯ, ರೈಲು ಸೌಕರ್ಯ ಇತ್ಯಾದಿಗಳನ್ನು ಸರ್ಕಾರದಿಂದ ಕೇಳುತ್ತೇವೆ.ಕೆಲವೊಮ್ಮೆ ಇಂತಹ ಹೋರಾಟಗಳಲ್ಲಿ ನಾವು ಹೆಚ್ಚು ಅಸಕ್ತಿ ತೋರುವುದರಿಂದ ನಾವು ಸರ್ಕಾರ ಮತ್ತು ಆಡಳಿತ ವ್ಯವಸ್ಥೆಯ ಮೇಲೆ ಹೆಚ್ಚು

ಅವಲಂಬಿತರಾಗುತ್ತೇವೆ. ಇಂತಹ ಸನ್ನಿವೇಶಗಳಲ್ಲೂ ನಾವು ನಮ್ಮ ಪಕ್ಷದ ರಾಜಕೀಯ ಮಾರ್ಗವನ್ನು ಪ್ರತಿನಿಧಿಸುವುದು ಅವಶ್ಯ. ಇಂತಹ ಸುಧಾರಣಾವಾದಿ ವಿಷಯಗಳನ್ನು ರಾಜಕೀಯ ಹಂತಕ್ಕೆ ಮುಂದುವರೆಸುವ ಮೂಲಕ ಆಳುವ ವರ್ಗಗಳ ವಿರುದ್ಧ ಹೋರಾಡಲು ಸಾಧ್ಯ. ಆಗಲೇ ಸರ್ಕಾರದ ಬಂಡವಾಳ ಬಯಲು ಮಾಡಿ ಜನರನ್ನು ಜಾಗೃತಿಗೊಳಿಸಿ ಶ್ರಮಜೀವಿಗಳಿಗೆ ರಾಜಕೀಯ ಅಧಿಕಾರ ದೊರಕಿಸಲು ಸಾಧ್ಯ. ನಮ್ಮ ಹೋರಾಟಗಳು ಆಳುವ ವರ್ಗಗಳ ವಿರುದ್ಧ, ವರ್ಗ ಆಳ್ವಿಕೆಯ ವಿರುದ್ಧ, ಪ್ರಭುತ್ವದ ವಿರುದ್ಧ ಮತ್ತು ಪ್ರಭುತ್ವದ ಏಜೆಂಟರ ವಿರುದ್ಧ, ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ವಿರುದ್ಧ ಇರಬೇಕು. ಪ್ರಭುತ್ವ ತನ್ನ ಹೊಣೆಯನ್ನು ನಮ್ಮ ಹೆಗಲಿಗೆ ಏರಿಸುವ ಮೂಲಕ ನಮ್ಮ ವರ್ಗ ಹೋರಾಟಗಳನ್ನು ಮತ್ತು ಸಮೂಹ ಸಂಘಟನೆಗಳನ್ನು ನಿಷ್ಕ್ರಿಯಗೊಳಿಸಲು ಯತ್ನಿಸುತ್ತದೆ. ಇಂತಹ ಪ್ರವೃತ್ತಿಯ ವಿರುದ್ಧ ಹೋರಾಡಲು ನಾವು ಸದಾ ಸಜ್ಜಾಗಿರಬೇಕಾಗುತ್ತದೆ.

ಕರ್ನಾಟಕದ ಚುನಾವಣೆಯಲ್ಲಿ ನಾವು ಭಾಗವಹಿಸುವುದಕ್ಕೂ ಮತ್ತು ಪಕ್ಷ ಕಟ್ಟುವುದಕ್ಕೂ ನಡುವೆ ಇದ್ದ ಸಂಬಂಧವನ್ನು ಒಮ್ಮೆ ತಿರುಗಿ ನೋಡೋನಾ, ಚುನಾವಣೆಗಳಲ್ಲಿ ಸ್ಪರ್ಧಿಸುವ ಮೂಲಕ ನಾವು ರಾಜಕೀಯ ಪ್ರವೇಶ ಮಾಡಿ 1998 ರಲ್ಲಿ ಮೊದಲ ಚುನಾವಣೆಯಲ್ಲೇ ಮೈಸೂರು ಸಂಸದೀಯ ಕ್ಷೇತ್ರದಲ್ಲಿ 5000 ಮತ ಗಳಿಸಿದ್ದೇವು. ನಂತರ 2004 ಮತ್ತು 2008ರ ಚುನಾವಣೆಗಳಲ್ಲಿ ಬಳ್ಳಾರಿ ಕ್ಷೇತ್ರದಲ್ಲಿ 12000 ಮತಗಳನ್ನು ಗಳಿಸಿದ್ದೆವು. ಒಂದು ವೋಟು ಒಂದು ರೂಪಾಯಿ ನೋಟು ಎಂಬ ನಮ್ಮ ಘೋಷಣೆ ಜನಪ್ರಿಯವಾಗಿತ್ತು. ಇತರ ಪಕ್ಷಗಳಿಗಿಂತಲೂ ಭಿನ್ನವಾಗಿ ನಮ್ಮ ಪಕ್ಷದ ಅಭ್ಯರ್ಥಿ ಜನತೆಯ, ಬಡವರ ಮತ್ತು ದಮನಿತರ ಹೋರಾಟದ ಮುಂಚೂಣಿಯಲ್ಲಿರುತ್ತಾರೆ ಎಂಬ ಭರವಸೆ ನೀಡಿದ್ದೆವು. ಕೊಪ್ಪಳ ಜಿಲ್ಲೆಯ ಕನಕಗಿರಿ ಕ್ಷೇತ್ರ , ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ಮತ್ತು ಮೈಸೂರಿನ ಹೆಗ್ಗಡದೇವನ ಕೋಟೆ ಕ್ಷೇತ್ರದಲ್ಲಿ ನಮ್ಮ ಸಾಧನೆ ಒಂದು ಸಂದರ್ಭದಲ್ಲಿ ಉತ್ತಮವಾಗಿತ್ತು. ಆದರೆ ಮುಂದಿನ ಚುನಾವಣೆಗಳಲ್ಲಿ ನಾವು ಇದೇ ಮುನ್ನಡೆಯನ್ನು ಕಾಪಾಡಿಕೊಳ್ಳಲಾಗಿಲ್ಲ. ಸಮೂಹ ಸಂಘಟನೆಗಳ ಕೊರತೆ ಮತ್ತು ಪಕ್ಷದ ರಚನೆ ಸಮರ್ಥವಾಗಿಲ್ಲದ ಕಾರಣ ಹಿನ್ನಡೆ ಉಂಟಾಗಿತ್ತು. ಸಾಮಾನ್ಯವಾಗಿ ನಮ್ಮ ಪಕ್ಷ ಮುನ್ನೆಲೆಗೆ ಬರುತ್ತಿರುವ ಹೋರಾಟಗಳ ನೆಲೆಯಲ್ಲೇ ಚುನಾವಣೆಯಲ್ಲಿ ಸ್ಪರ್ಧಿಸುತ್ತದೆ. ಅಸಾಂಪ್ರದಾಯಿಕ ಮಾರ್ಗ ಅನುಸರಿಸಿದ ನಮ್ಮ ಪಕ್ಷ ಸಾಕಷ್ಟು ಪ್ರಾಬಲ್ಯ ಇಲ್ಲದೆ ಹೋದರೂ ನಮ್ಮ ಸಾಮರ್ಥ್ಯವನ್ನು ಆಧರಿಸಿ ಚುನಾವಣೆಗಳಲ್ಲಿ ಸ್ಪರ್ಧಿಸಲು ನಿರ್ಧರಿಸಿತ್ತು. ಚುನಾವಣೆಗಳಲ್ಲಿ ಸ್ಪರ್ಧಿಸಿ ಮತಗಳನ್ನು ಗಳಿಸುವ ನಿಟ್ಟಿನಲ್ಲಿ ಪಕ್ಷ ಮತ್ತು ಸಮೂಹ ಸಂಘಟನೆಗಳನ್ನು ಮುನ್ನಡೆಸಿದ್ದೆವು. ನಮ್ಮ

ಅಖಿಲ ಭಾರತ ಮಟ್ಟದ ರಾಜಕೀಯ ನಡೆಗೆ ವ್ಯತಿರಿಕ್ತವಾಗಿ ಕರ್ನಾಟಕದಲ್ಲಿ ಈ ಮಾರ್ಗವನ್ನು ಅನುಸರಿಸಿದ್ದೆವು. ಹಾಗಾಗಿ ಈಗಲೂ ಸಹ ನಾವು ನಮ್ಮ ಚುನಾವಣೆಗಳ ಸಾಧನೆಯನ್ನು ಆಧರಿಸಿ ಪಕ್ಷ ಸಂಘಟನೆಯನ್ನು ಬಲಗೊಳಿಸಲು ಪ್ರಯತ್ನ ಪಡುತ್ತಿದ್ದೇವೆ. ನಮ್ಮ ಚುನಾವಣೆ ಭಾಗವಹಿಸುವಿಕೆಯಲ್ಲಿ ನಮ್ಮ ಅನುಭವಗಳನ್ನು ಗಮನದಲ್ಲಿಟ್ಟುಕೊಂಡು ರಾಜಕೀಯ ಸೈದ್ಧಾಂತಿಕ ಮಟ್ಟದಲ್ಲಿ ಕೆಲವು ತಿದ್ದುಪಡಿಗಳನ್ನು ನಾವು ಮಾಡಬೇಕು.

ಇದೇ ರೀತಿ ನಾವು ಕಾರ್ಮಿಕ ಸಂಘಟನೆಯನ್ನೂ ನೋಡಬೇಕಾಗುತ್ತದೆ. ಹಲವಾರು ಉದ್ದಿಮೆಗಳಲ್ಲಿ ನಮ್ಮ ಕಾರ್ಮಿಕ ಸಂಘಟನೆಗಳು ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿವೆ. ಜನರ ಸಮಸ್ಯೆಗಳಿಗೆ ನಾವು ಹೆಚ್ಚಿನ ಕಾರ್ಯಕ್ಷಮತೆಯಿಂದ ಸ್ಪಂದಿಸುತ್ತಿದ್ದೇವೆ. ಉತ್ತಮ ವೇತನ ಮತ್ತು ಸೇವಾ ನಿಯಮಗಳನ್ನು ಒದಗಿಸಲು ಯಶಸ್ವಿಯಾಗಿದ್ದೇವೆ. ದುರಾದೃಷ್ಟವಶಾತ್ ಕಾರ್ಮಿಕರಲ್ಲಿ ರಾಜಕೀಯ ಪ್ರಜ್ಞೆ ಮೂಡಿಸುವಲ್ಲಿ ಮತ್ತು ಅವರನ್ನು ಕಮ್ಯುನಿಸ್ಟ್ ಪಕ್ಷದ ಸದಸ್ಯರನ್ನಾಗಿ ಮಾಡುವಲ್ಲಿ, ಅವರನ್ನು ಕಮ್ಯುನಿಸ್ಟರನ್ನಾಗಿ ಮಾಡಲು ತರಬೇತಿ ನೀಡುವಲ್ಲಿ ನಾವು ನಿರ್ಲಕ್ಷ್ಯ ತಾಳುತ್ತಿದ್ದೇವೆ. ಕಮ್ಯುನಿಸ್ಟ್ ಪಕ್ಷ ಔದಾರ್ಯ ತೋರುವ ಒಂದು ಸಂಘಟನೆಯಾಗಿರಲು ಸಾಧ್ಯವಿಲ್ಲ. ಕಮ್ಯುನಿಸ್ಟ್ ಪಕ್ಷದ ಸಂಗಾತಿಗಳು ದಾನಿಗಳ ಚೌಕಟ್ಟನ್ನು ಮೀರಿ ಬೆಳೆಯಬೇಕಿದೆ. ವಿಭಿನ್ನ ಕ್ಷೇತ್ರಗಳಲ್ಲಿ, ವಿಭಿನ್ನ ಹೋರಾಟಗಳಲ್ಲಿನ ನಮ್ಮ ಎಲ್ಲ ಚಟುವಟಿಕೆಗಳನ್ನೂ ಪಕ್ಷದ ಸಮಗ್ರ ದೃಷ್ಟಿಕೋನ ಮತ್ತು ಧ್ಯೇಯಗಳೊಡನೆ ಸಮೀಕರಿಸುವುದು ಅಗತ್ಯ. ಕಮ್ಯುನಿಸ್ಟ್ ಪಕ್ಷವನ್ನು ಕಟ್ಟುವುದಕ್ಕಿಂತಲೂ ಬಡ ಜನತೆಯ ದಿನನಿತ್ಯದ ಸಮಸ್ಯೆಗಳ ನಡುವೆಯೇ ಕೆಲಸ ಮಾಡುವುದೇ ಒಳಿತು ಎಂಬ ಭಾವನೆ ಕೆಲವು ಸದಸ್ಯರಲ್ಲಿದೆ.

ಕರ್ನಾಟಕದಲ್ಲಿ ನಮ್ಮ ಪಕ್ಷ ಬಾಲ್ಯಾವಸ್ಥೆಯಲ್ಲಿದೆ. ಆದರೆ ಬಲಿಷ್ಟ ಪಕ್ಷವಾಗಿ ಹೊರಹೊಮ್ಮುವ ಸಾಮರ್ಥ್ಯ ನಮ್ಮಲ್ಲಿದೆ. ಆದರೆ ಇದನ್ನು ಸಾಧಿಸಲು ನಾವು ನಮ್ಮ ಪಕ್ಷ, ರಾಜಕಾರಣ ಮತ್ತು ಬ್ಯಾನರ್‌ಗಳನ್ನು ದಿಟ್ಟತನದಿಂದ ಎತ್ತಿಹಿಡಿಯಬೇಕಿದೆ. ನಮ್ಮದೇ ಆದ ಸ್ವತಂತ್ರ ನೆಲೆಯಲ್ಲಿ ಕ್ರಾಂತಿಕಾರಿ ರಾಜಕಾರಣ ಮತ್ತು ಕ್ರಿಯಾಶೀಲತೆಯಿಂದ ನಾವು ಬೆಳೆಯಬಹುದು. ಕರ್ನಾಟಕದಂತಹ ರಾಜ್ಯಗಳಲ್ಲಿ ನಮ್ಮನ್ನು ಇತರ ಸಮಾನ ಬ್ಯಾನರ್‌ಗಳೊಡನೆ, ಬ್ಯಾನರ್ ಇಲ್ಲದ ಸಂಘರ್ಷಗಳೊಡನೆ ಸಮೀಕರಿಸುವ ಪ್ರಯತ್ನಗಳು ನಡೆಯುತ್ತವೆ. ನಾಟ್ ಇನ್ ಮೈ ನೇಮ್, ಐ ಆಮ್ ಗೌರಿ (ನಾನೇ ಗೌರಿ)ಮುಂತಾದ ಪ್ರಜಾತಾಂತ್ರಿಕ ಹೋರಾಟಗಳ ಸಂದರ್ಭದಲ್ಲಿ ಇದು ಸೂಕ್ತ ಎನಿಸಬಹುದು. ಏಕೆಂದರೆ ಇಲ್ಲಿ ವಿಭಿನ್ನ ರಾಜಕೀಯ ಪ್ರವೃತ್ತಿಗಳು ಕಾರ್ಯಪ್ರವೃತ್ತವಾಗಿರುತ್ತವೆ. ಆದರೆ ನಮ್ಮ ಪಕ್ಷದ ಮೂಲ

ಉದ್ದೇಶವಾದ ಮೂಲ ವರ್ಗ ಹೋರಾಟಗಳನ್ನು ರೂಪಿಸುವಾಗ ಇದೇ ಮಾರ್ಗವನ್ನು ಅನುಸರಿಸಲಾಗುವುದಿಲ್ಲ. ಇಂತಹ ಪ್ರವೃತ್ತಿಗಳ ವಿರುದ್ಧ ನಾವು ಜಾಗೃತರಾಗಿರುವುದು ಒಳಿತು.  ಯಾವುದೇ ಹೋರಾಟದ ವಿಷಯದಲ್ಲಿ, ರಾಜ್ಯ ಸರ್ಕಾರದ ದಮನಕಾರಿ ನೀತಿ ತೀವ್ರವಾಗಿದ್ದರೆ ಅಥವಾ ಸಮಸ್ತ ಜನತೆಗೂ ಸಂಬಂಧಿಸಿದ್ದಾದರೆ ಮಾತ್ರ ನಾವು ಇತರ ಗುಂಪುಗಳೊಡನೆ ಸೇರಬಹುದು. ನಮ್ಮದೇ ಆದ ಸ್ವತಂತ್ರ ಬಲದ ಮೇಲೆ ಎಡ ಪಂಥೀಯ ಮತ್ತು ಪ್ರಜಾತಾಂತ್ರಿಕ ಶಕ್ತಿಗಳನ್ನು ಒಂದುಗೂಡಿಸುವುದು ನಮ್ಮ ಧ್ಯೇಯವಾಗಿದೆ. ಹಾಗಾಗಿ ನಮ್ಮದೇ ಆದ ಹೋರಾಟಗಳಿಗೆ ನಾವು ಹೆಚ್ಚಿನ ಆದ್ಯತೆ ನೀಡಬೇಕಿದೆ. ಇದು ನೇರ ವರ್ಗ ಸಂಘರ್ಷಗಳಿಗೂ ಅನ್ವಯಿಸುತ್ತದೆ. ಯಾವುದೇ ಹೋರಾಟವನ್ನು ನಮ್ಮ ಪಕ್ಷ ವರ್ಗದ ಆಧಾರದ ಮೇಲೆ ಕೈಗೊಳ್ಳುವ ಸಂದರ್ಭದಲ್ಲಿ ನಾವು ಜಂಟಿ ಹೋರಾಟಗಳಿಂದ ದೂರ ಉಳಿಯಬೇಕಾಗುತ್ತದೆ. ನಮ್ಮ ವರ್ಗ ಹೋರಾಟದ ನೆಲೆಯಲ್ಲಿ ಮಾನವನ ಸಾಮಾಜಿಕ ಘನತೆಯೂ ಒಂದು ಮುಖ್ಯ ಅಂಶ ಎನ್ನುವುದನ್ನು ಗಮನದಲ್ಲಿಡಬೇಕು.

ನಮ್ಮ ಸಂಘಟನೆಯಲ್ಲಿ ನಾವು ಎದುರಿಸುತ್ತಿರುವ ಮತ್ತೊಂದು ಸವಾಲು ಎಂದರೆ ನಮ್ಮ ವಿಭಿನ್ನ ಆಚರಣೆಗಳನ್ನು ಒಂದೇ ಸೂರಿನಡಿ ಕ್ರೋಢೀಕರಿಸುವುದು. ಹಠಾತ್ತನೆ ಉದ್ಭವಿಸುವ ರಾಜಕೀಯ ಸನ್ನಿವೇಶಗಳನ್ನು ಎದುರಿಸಲು ಪಕ್ಷ ಸದಾ ಸಿದ್ಧವಾಗಿರಬೇಕಾಗುತ್ತದೆ. ಸಮೂಹ ಸಂಘಟನೆಗಳ ಕಾರ್ಯಕರ್ತರ ನಡುವೆ ಪಕ್ಷದ ಸದಸ್ಯರನ್ನು ನೇಮಿಸಬೇಕಾಗುತ್ತದೆ. ಪಕ್ಷದ ಶಾಖೆಗಳನ್ನು ರೂಪಿಸಿ, ಅಧ್ಯಯನ ನಡೆಸಿ, ನಮ್ಮ ಕಾರ್ಯವ್ಯಾಪ್ತಿಯ ಪ್ರದೇಶದಲ್ಲಿನ ಸಮಾಜ, ಆರ್ಥಿಕ ಹಾಗೂ ರಾಜಕೀಯ ಸನ್ನಿವೇಶಗಳ ವಿಶ್ಲೇಷಣೆ ಮಾಡಬೇಕಾಗುತ್ತದೆ, ವರ್ಗ ಶತ್ರುಗಳನ್ನು ಮತ್ತು ವರ್ಗಾಧಾರಿತ ಸಮಸ್ಯೆಗಳನ್ನು ಗುರುತಿಸಬೇಕಾಗುತ್ತದೆ, ಸೂಕ್ತ ಸಂದರ್ಭದಲ್ಲಿ ವರ್ಗಸಂಘರ್ಷವನ್ನು ರೂಪಿಸಬೇಕಾಗುತ್ತದೆ, ಈ ಹೋರಾಟಗಳನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಬೇಕಾಗುತ್ತದೆ. ಅದೇ ವೇಳೆ ಮೇಲ್ಮಟ್ಟದಿಂದ ನಿಯೋಜಿಸಲ್ಪಟ್ಟ ಕಾರ್ಯಗಳನ್ನು ಪೂರೈಸುತ್ತಲೇ ಸ್ಥಳೀಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕಾಗುತ್ತದೆ. ಎಲ್ಲ ಧ್ಯೇಯಗಳನ್ನೂ ಸಮೀಕರಿಸಿ ಸಮಗ್ರ ಹೋರಾಟ ರೂಪಿಸುವುದು ಉತ್ತಮ ಪಕ್ಷ ಸಂಘಟನೆಯ ಲಕ್ಷಣ. ಸ್ಥಳೀಯ ಮತ್ತು ಜಿಲ್ಲಾ ಮಟ್ಟದ, ಜಿಲ್ಲೆ ಮತ್ತು ರಾಜ್ಯಮಟ್ಟದ, ರಾಜ್ಯ ಮತ್ತು ರಾಷ್ಟ್ರಮಟ್ಟದ ವರ್ಗ ಸಂಘಟನೆಗಳು ಹಾಗು ಸಮೂಹ ಸಂಘಟನೆಗಳು, ಪಕ್ಷದ ಸಂರಚನೆಗಳು, ಸಮೂಹ ಸಂಘಟನೆಗಳ ಸಂರಚನೆಗಳು ಎಲ್ಲವೂ ಒಂದು ಸಮಗ್ರ ಹೋರಾಟದ ಅಂಗಗಳಾಗಿರುತ್ತವೆ. ಈ ಸಮಗ್ರ ಹೋರಾಟವೇ ಕಮ್ಯುನಿಸ್ಟ್ ಪಕ್ಷದ ರೂಪದಲ್ಲಿರುತ್ತದೆ. ಒಂದೇ ದೇಹದ ವಿವಿಧ ಅಂಗಗಳಂತೆ ಎಲ್ಲ ಘಟಕಗಳೂ

ಕಾರ್ಯನಿರ್ವಹಿಸಬೇಕಾಗುತ್ತದೆ. ವಿವಿಧ ಅಂಗಗಳ ನಡುವೆ ಸಮನ್ವಯ ಕಾಪಾಡುವುದರಿಂದ ನಮ್ಮ ಧ್ಯೇಯ ಸಾಧನೆಯತ್ತ ಮುನ್ನಡೆಯಲು ಸಾಧ್ಯವಾಗುತ್ತದೆ.

ನಾವು ಇಲ್ಲಿ ಅರ್ಥಮಾಡಿಕೊಳ್ಳಬೇಕಾಗಿರುವ ಮತ್ತೊಂದು ಅಂಶವೆಂದರೆ ಪಕ್ಷದ ಸಂಗಾತಿಗಳು ಉನ್ನತ ಸಮಿತಿಗಳನ್ನು ಪ್ರತಿನಿಧಿಸಬೇಕು ಮತ್ತು ತಮ್ಮ ಕಾರ್ಯಕ್ಷೇತ್ರಗಳಲ್ಲಿ ಪಕ್ಷದ ನಿರ್ಣಯಗಳನ್ನು ಜಾರಿಗೊಳಿಸಬೇಕು. ಮೂಲತಃ ಈ ಸಂಗಾತಿಗಳು ಪಕ್ಷದ ಉನ್ನತ ಸಮಿತಿಗಳ ನಿರ್ಣಯಗಳನ್ನು ಕೆಳಮಟ್ಟದ ಸಮಿತಿಗಳ ಮೂಲಕ ಸಾಕಾರಗೊಳಿಸುವ ಪ್ರತಿನಿಧಿಗಳಾಗಿರುತ್ತಾರೆ. ಹಾಗಾಗಿ ಪಕ್ಷದ ಪ್ರತಿಯೊಬ್ಬ ಸದಸ್ಯರೂ ಮತ್ತು ನಾಯಕರೂ, ಕೆಲವರನ್ನು ಹೊರತುಪಡಿಸಿದರೆ, ಯಾವುದಾದರೂ ಸಮೂಹ ಸಂಘಟನೆಯ ಸದಸ್ಯರಾಗಿರಬೇಕು. ಕೆಳಹಂತದ ಸದಸ್ಯರೊಡನೆ, ಸಮುದಾಯಗಳೊಡನೆ ಸಮನ್ವಯ ಸಾಧಿಸುವಂತಿರಬೇಕು. ಸಮೂಹ ಸಂಘಟನೆಗಳಲ್ಲಿರುವ ಯಾವುದೇ ಪಕ್ಷದ ಸಂಗಾತಿ ಅಲ್ಲಿ ಪಕ್ಷವನ್ನು ಪ್ರತಿನಿಧಿಸಬೇಕು. ಸಮೂಹ ಸಂಘಟನೆಗಳಲ್ಲಿ ರಾಜಕೀಯ ಪ್ರಜ್ಞೆ ಮೂಡಿಸಬೇಕು. ವಿಭಿನ್ನ ಪಕ್ಷ ಮತ್ತು ಸಿದ್ಧಾಂತಗಳ ಹಿನ್ನೆಲೆ ಇರುವ ಸದಸ್ಯರಲ್ಲಿ ರಾಜಕೀಯ ಪ್ರಜ್ಞೆ ಮೂಡಿಸಬೇಕು. ಆದ್ದರಿಂದ ಪಕ್ಷದ ನಾಯಕರು ಮತ್ತು ಸದಸ್ಯರು ಪಕ್ಷದ ನೀತಿ ನಿರ್ಣಯಗಳನ್ನು ಸಾಕಾರಗೊಳಿಸುವ ಸಾಧನಗಳಂತೆ ಕಾರ್ಯನಿರ್ವಹಿಸುವುದು ಅತ್ಯಗತ್ಯ. ಯಾವುದೇ ರೀತಿಯ ತಪ್ಪು ಅಭಿಪ್ರಾಯಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಹೇಳುವುದಾದರೆ ನಮ್ಮ ಪಕ್ಷ ಸಂಘಟನಾತ್ಮಕವಾಗಿ ಯಾವುದೇ ನಿರ್ಣಯಗಳನ್ನು ಪಕ್ಷದ ಘಟಕಗಳ ಮೇಲೆ ಹೇರುವುದಿಲ್ಲ.

ಪಕ್ಷ ನಿರ್ಮಾಣದಲ್ಲಿ ನಮ್ಮ ಚಟುವಟಿಕೆಗಳನ್ನು ಹೀಗೆ ವಿವರಿಸಬಹುದು:

1. ಎಲ್ಲ ಹಂತಗಳಲ್ಲೂ ಪಕ್ಷದ ಸಮಿತಿಗಳ ಚಟುವಟಿಕೆಗಳನ್ನು ಸರಾಗವಾಗುವಂತೆ ಮಾಡುವುದು.
2. ಹೋಬಳಿ ಮಟ್ಟದ ಸಮಿತಿಗಳನ್ನು ರೂಪಿಸುವುದು.
3. ರಾಜಕೀಯವಾಗಿ, ಸೈದ್ಧಾಂತಿಕವಾಗಿ ತರಬೇತಿ ಪಡೆದ ನೂರು ಸಂಗಾತಿಗಳನ್ನು ಬೆಳೆಸುವುದು.
4. ಪಕ್ಷಕ್ಕೆ ಹತ್ತು ಸಾವಿರ ಸದಸ್ಯರನ್ನು ಸೇರ್ಪಡೆ ಮಾಡುವುದು. ಪ್ರತಿ ಜಿಲ್ಲೆಯಲ್ಲೂ ನಾಲ್ಕು ತಾಲ್ಲೂಕು ಸಮಿತಿ ರಚಿಸಿ ಒಂದು ಸಾವಿರ ಶಾಖೆಗಳನ್ನು ತೆರೆಯುವುದು. ಒಂದು ಜಿಲ್ಲೆಯಲ್ಲಿ ಒಂದು ಅಥವಾ ಎರಡು ತಾಲ್ಲೂಕುಗಳಲ್ಲಿ ಕೇಂದ್ರೀಕೃತವಾಗುವ ಪ್ರವೃತ್ತಿಯಿಂದ ಹೊರಬರುವುದು.

5. ಈಗಾಗಲೇ ಜಿಲ್ಲಾ ಸಮಿತಿಗಳನ್ನು ರಚಿಸಲಾಗಿರುವ ಜಿಲ್ಲೆಗಳ ಸುತ್ತಮುತ್ತಲಿನ ಎರಡು ಜಿಲ್ಲೆಗಳಲ್ಲಿ ನಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸುವ ಗುರಿ ಹೊಂದಿರಬೇಕು. ಮುಂದಿನ ಸಮಾವೇಶದ ವೇಳೆಗೆ ನಾವು ಹತ್ತು ಜಿಲ್ಲೆಗಳಲ್ಲಿ ಜಿಲ್ಲಾ ಸಮಿತಿಗಳನ್ನು ಪೂರ್ಣ ಪ್ರಮಾಣದಲ್ಲಿ ಹೊಂದಿರಬೇಕು. ಇನ್ನು ಹತ್ತು ಜಿಲ್ಲೆಗಳಲ್ಲಿ ಮುಂಚೂಣಿ ತಂಡಗಳನ್ನು ರಚಿಸಿ ಸಮರ್ಥವಾದ ಹೋರಾಟಗಳಲ್ಲಿ ಪಾಲ್ಗೊಳ್ಳಬೇಕು.
6. ಮುಂಚೂಣಿಯಲ್ಲಿರುವ ಸಮೂಹ ಸಂಘರ್ಷಗಳು ಮತ್ತು ಸಂಘಟನೆಗಳಿಂದಲೇ ಪಕ್ಷದ ಸದಸ್ಯರನ್ನು ನೇಮಕ ಮಾಡಿ ಪಕ್ಷದ ಸೂಕ್ತ ನೆಲೆಯಲ್ಲಿ ಸಂಘಟಿಸಬೇಕು.
7. ಪಕ್ಷದ ಸೈದ್ಧಾಂತಿಕ ಶಿಕ್ಷಣವನ್ನು ಮೂರು ಹಂತಗಳಲ್ಲಿ ಸ್ಥಾಪಿಸಬೇಕು :
   1) ಹೊಸ ಸದಸ್ಯರಿಗೆ ಪಕ್ಷ ಮತ್ತು ಸಾಮೂಹಿಕ ಹೋರಾಟಗಳ ಪರಿಚಯ ಮಾಡಿಸುವುದು.
   2) ಆಯ್ದ 100 ಸಂಗಾತಿಗಳಿಗೆ ಪಕ್ಷದ ಸೈದ್ಧಾಂತಿಕ ಶಿಕ್ಷಣ ನೀಡುವುದು.
   3) ಮುಂಚೂಣಿ ನಾಯಕರಿಗೆ ಸತತವಾದ ಔಪಚಾರಿಕ ಶಿಕ್ಷಣ ಒದಗಿಸುವುದು.

   ಇದನ್ನು ಸಾಧಿಸಲು ನಾವು ಪಕ್ಷದೊಳಗೇ ಪ್ರತ್ಯೇಕ ಘಟಕವನ್ನು ಸ್ಥಾಪಿಸಬೇಕು. ಕನ್ನಡದಲ್ಲಿರುವ ಪಕ್ಷದ ಸಾಹಿತ್ಯವನ್ನು ಓದಲು ಪ್ರೇರೇಪಿಸಬೇಕು. ನಮ್ಮ ಸಂಗಾತಿಗಳಿಗೆ ನಿರಂತರವಾಗಿ ತರಬೇತಿ ಶಿಬಿರಗಳನ್ನು ಏರ್ಪಡಿಸುತ್ತಿರಬೇಕು.
8. ಪ್ರತಿಯೊಂದು ಸಮೂಹ ಸಂಘಟನೆಯಲ್ಲೂ, ಕಾರ್ಮಿಕ ಸಂಘಟನೆಯಲ್ಲೂ ಪಕ್ಷದ ಗುಂಪು ರಚಿಸಬೇಕು ಮತ್ತು ತನ್ಮೂಲಕ ಪಕ್ಷದ ಯೋಜನೆಗಳನ್ನು ಜಾರಿಗೊಳಿಸಬೇಕು. ಪಕ್ಷದ ಗುಂಪು ಈ ಸಂಘಟನೆಗಳನ್ನು ಸೀಮಿತ ಆರ್ಥಿಕ ನೆಲೆಯ ಹೋರಾಟಗಳಿಂದ ಹೊರತಂದು ಕಮ್ಯುನಿಸ್ಟ್ ಅಂಶಗಳನ್ನು ಅಳವಡಿಸುವತ್ತ ಕಾರ್ಯಪ್ರವೃತ್ತವಾಗಬೇಕು.
9. ಎಲ್ಲ ಸಮೂಹ ಸಂಘಟನೆಗಳಿಗೂ ಪಕ್ಷದ ಮೂಲ ಗುಂಪುಗಳನ್ನು, ವಿಭಾಗಗಳನ್ನು ನೇಮಿಸಬೇಕು. ಸಮೂಹ ಸಂಘಟನೆಗಳ ಸ್ವತಂತ್ರ ಕಾರ್ಯನಿರ್ವಹಣೆಯನ್ನು ಸಾಕಾರಗೊಳಿಸಬೇಕು. ಸಮೂಹ ಸಂಘಟನೆಗಳ ಕಾರ್ಯಕರ್ತರಿಂದಲೇ ಪಕ್ಷದ ಸದಸ್ಯರ ನೇಮಕವಾಗಬೇಕು. ಜನಸಮೂಹಗಳಲ್ಲಿ ಕಮ್ಯುನಿಸ್ಟ್ ಧೋರಣೆಯನ್ನು ಬೆಳೆಸುವ ಪ್ರಕ್ರಿಯೆ ನಿರಂತರವಾಗಿರಬೇಕು. ಪ್ರತಿವರ್ಷ ನವಂಬರ್ ಡಿಸೆಂಬರ್ ತಿಂಗಳಲ್ಲಿ ಈ ಚಟುವಟಿಕೆ ನಡೆಯುವಂತೆ ಮಾಡಬೇಕು.

**2. ಪಕ್ಷದ ಪ್ರಕಟಣೆಗಳು ಮತ್ತು ಮುಖವಾಣಿ**

ನಮ್ಮ ಪಕ್ಷದ ಮುಖವಾಣಿ ಪತ್ರಿಕೆ ಕನ್ನಡ ಲಿಬರೇಷನ್. 4 ವರ್ಷಗಳ ಕಾಲ ದ್ವೈಮಾಸಿಕ ಪತ್ರಿಕೆಯಾಗಿ ಹೊರತರಲಾಯಿತು. ಆದರೆ ಹಠಾತ್ತನೆ ಈ ಪ್ರಕ್ರಿಯೆ ನಿಂತುಹೋಗಿತ್ತು. ಕೆಲ ಕಾಲದ ನಂತರ ಮೈಸೂರಿನಿಂದ ಪತ್ರಿಕೆಯ ಪುನರಾರಂಭ ಮಾಡಿ ಪ್ರಕಟಿಸಲಾಯಿತು. ಅಲ್ಲಿಯವರೆಗೂ ಕನ್ನಡ ಲಿಬರೇಷನ್ ಪತ್ರಿಕೆ ಎಂಟುಪುಟಗಳ ಸಂಚಿಕೆಯಾಗಿ ನಿಯತಕಾಲಿಕವಾಗಿ ಹೊರಬರುತ್ತಿತ್ತು. ಇತ್ತೀಚೆಗೆ ನಾವು 20 ಪುಟಗಳನ್ನು ಹೊಂದಿರುವ, ನಾಲ್ಕು ವರ್ಣರಂಜಿತ ಹೊದಿಕೆಯ ಪುಟಗಳನ್ನು ಹೊಂದಿರುವ ಸಂಚಿಕೆಯನ್ನು ಆರಂಭಿಸಿದೆವು. ಈಗ ಪತ್ರಿಕೆ ಕುಂಟುತ್ತಲೇ ಸಾಗಿದೆ. ಪಕ್ಷದ ಮುಖವಾಣಿ ಕೇವಲ ಪ್ರಚಾರ ಸಾಮಗ್ರಿಯಾಗದೆ ಪ್ರತಿರೋಧದ ಶಕ್ತಿಯಾಗಿ, ಸಂಘಟನೆಯ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಕಾಂ ಲೆನಿನ್ ಹೇಳುತ್ತಾರೆ. ಹೆಚ್ಚುತ್ತಿರುವ ಪಕ್ಷದ ತಳಮಟ್ಟದ ಸಂಘಟನೆಗಳು ಮತ್ತು ಸಮೂಹ ಸಂಪರ್ಕದ ನೆಲೆಯಲ್ಲಿ ಇದು ಅತ್ಯವಶ್ಯ ಎನಿಸುತ್ತದೆ. ಹಾಗಾಗಿ ಪಕ್ಷದ ಮುಖವಾಣಿಯನ್ನು ಸಮರ್ಥವಾಗಿ ಮುನ್ನಡೆಸಲು ಬದ್ಧತೆ ಇರುವ ಸಂಗಾತಿಗಳ ತಂಡವೊಂದನ್ನು ನಾವು ಗುರುತಿಸಬೇಕಿದೆ. ಒಂದು ವರ್ಷದ ಕಾಲ ದ್ವೈಮಾಸಿಕವಾಗಿ ಪತ್ರಿಕೆಯನ್ನು ಪ್ರಕಟಿಸುವುದು ನಮ್ಮ ಆದ್ಯತೆಯಾಗಬೇಕಿದೆ. ನಂತರ ಮಾಸಿಕ ಪತ್ರಿಕೆಯಾಗಿ ಪ್ರಕಟಿಸಬಹುದು.

ಬಲಪಂಥೀಯ ಅವಕಾಶವಾದಿ ರಾಜಕಾರಣದಲ್ಲಿ ತೊಡಗುವ ಎಡಪಂಥೀಯ ಪಕ್ಷಗಳಾದ ಸಿಪಿಐ ಮತ್ತು ಸಿಪಿಎಂ ಪಕ್ಷಗಳಿಂದ ಭಿನ್ನವಾದ ರಾಜಕೀಯ ಧೋರಣೆಯನ್ನು ನಮ್ಮ ಪಕ್ಷ ಪ್ರತಿಪಾದಿಸುತ್ತದೆ. ರಾಜ್ಯದಲ್ಲಿ ಅರೆ ಅರಾಜಕತಾವಾದಿ ಧೋರಣೆಯಿಂದ ಎಡಪಂಥೀಯ ಸಾಹಸ ಧೋರಣೆಯಿಂದ ವರ್ತಿಸುವ ಮಾವೋವಾದಿ ಪಕ್ಷಕ್ಕಿಂತಲೂ ಭಿನ್ನ ಮಾರ್ಗವನ್ನು ನಮ್ಮ ಪಕ್ಷ ಅನುಸರಿಸುತ್ತದೆ. ಆದರೆ ನಮ್ಮ ಪಕ್ಷದ ತತ್ವ, ಸಿದ್ಧಾಂತ ಮತ್ತು ರಾಜಕೀಯ ಧ್ಯೇಯಗಳನ್ನು ಪ್ರಚಾರ ಮಾಡಲು ನಮ್ಮ ಬಳಿಕನ್ನಡದಲ್ಲಿ ಹೆಚ್ಚಿನ ಪ್ರಚಾರ ಸಾಮಗ್ರಿಗಳು ಲಭ್ಯವಿಲ್ಲ. ಸಮಕಾಲೀನ ಸಮಸ್ಯೆಗಳನ್ನು ಕುರಿತ ಅನೇಕ ವಿಚಾರಗಳ ಬಗ್ಗೆ ಅಂಗ್ಲ ಭಾಷೆಯಲ್ಲಿ ಹೇರಳವಾದ ಸಾಹಿತ್ಯ ಇದೆ ಆದರೆ ಕನ್ನಡದಲ್ಲಿ ಲಭ್ಯವಿಲ್ಲ. ಹಾಗಾಗಿ ನಾವು ನಿಯತಕಾಲಿಕವಾಗಿ ಕನ್ನಡ ಪತ್ರಿಕೆಯನ್ನು ಪ್ರಕಟಿಸಲು ಸಜ್ಜಾಗಬೇಕಿದೆ. ಕನಿಷ್ಟ ಮೂರು ತಿಂಗಳಿಗೊಮ್ಮೆಯಾದರೂ ಪ್ರಕಟಿಸಬೇಕಿದೆ. ಪಕ್ಷದ ಸಮಾವೇಶದ ದಸ್ತಾವೇಜುಗಳು, ಪಕ್ಷದ ತಂತ್ರಗಾರಿಕೆಯನ್ನು ಕುರಿತ ಹೊತ್ತಿಗೆಗಳು,

ಜಾತಿ ಸಮಸ್ಯೆ, ಗ್ರಾಮೀಣ ಸಮಸ್ಯೆ, ಕೃಷಿಕರ ಸಮಸ್ಯೆ ಮತ್ತು ನಗರ ಪ್ರದೇಶಗಳ ಸಮಸ್ಯೆಗಳನ್ನು ಬಿಂಬಿಸುವ ಪ್ರಕಟಣೆಗಳು ಅತ್ಯಗತ್ಯವಾಗಿವೆ. ಪಕ್ಷದ ತತ್ವಗಳು ಮತ್ತು ಭಾರತದ ಕಮ್ಯುನಿಸ್ಟ್ ಚಳುವಳಿಯ ಮೂರು ವಾಹಿನಿಗಳು, ಮಹಿಳೆ ಮತ್ತು ಕ್ರಾಂತಿ, ಅಂಬೇಡ್ಕರ್ ಮತ್ತು ಮೂರು ವರ್ಷದ ಮೋದಿ ಆಡಳಿತ ಹಾಗೂ ವಿನೋದ್ ಮಿಶ್ರ ಅವರ ನನ್ನ ಕನಸು ಕೃತಿಗಳು ಈಗಾಗಲೇ ಕನ್ನಡದಲ್ಲಿ ಲಭ್ಯವಿದೆ.

ಸಾಮಾಜಿಕ ಮಾಧ್ಯಮಗಳು ಪರಿಣಾಮಕಾರಿಯಾದ ಮಾರ್ಗವಾಗಿದ್ದು ಅನೇಕ ವಿಷಯಗಳ ಚರ್ಚೆಗೆ ಭೂಮಿಕೆಯಾಗಲಿದೆ. ಆರೆಸ್ಸೆಸ್ ಮತ್ತು ಬಿಜೆಪಿ ಈ ಭೂಮಿಕೆಯನ್ನು ಬಳಸಿಕೊಡೇ ತನ್ನ ಸುಳ್ಳು ಸುದ್ದಿಗಳನ್ನು, ಅರ್ಧಸತ್ಯಗಳನ್ನು ಪ್ರಚಾರ ಮಾಡುತ್ತಿವೆ. ನಾವೂ ಸಹ ವಿಭಿನ್ನ ಪ್ರಜಾಸತ್ತಾತ್ಮಕ ಚಳುವಳಿಗಳೊಂದಿಗೆ ಸಮನ್ವಯ ಸಾಧಿಸುವ ಮೂಲಕ, ಸಮಾನ ಮನಸ್ಕ ಪ್ರಜೆಗಳೊಡನೆ ಸಂಪರ್ಕ ಸಾಧಿಸುವ ಮೂಲಕ ನಮ್ಮ ರಾಜಕೀಯ ಚಿಂತನೆಗಳನ್ನು ಪ್ರಚಾರ ಮಾಡಬೇಕಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಸಕ್ರಿಯವಾಗಿರುವುದೇ ಅಲ್ಲದೆ ನಮ್ಮದೇ ಆದ ವೆಬ್ ತಾಣ ಮತ್ತು ಬ್ಲಾಗ್‌ಗಳನ್ನು ರೂಪಿಸಬೇಕಿದೆ. ದುಡಿಯುವ ವರ್ಗಗಳಲ್ಲಿ ವಾಟ್ಸಪ್ ಒಂದು ಪ್ರಧಾನ ಸಂವಹನ ಮಾಧ್ಯಮವಾಗಿರುವುದರಿಂದ ಇದನ್ನು ಸಮರ್ಥವಾಗಿ ಬಳಸಲು ಕಾರ್ಯತಂತ್ರ ರೂಪಿಸಬೇಕಿದೆ.

**ಸಮೂಹ ಸಂಘಟನೆಗಳು**

## 3. ಗ್ರಾಮೀಣ ಹೋರಾಟಗಳು ನಮ್ಮ ಧೋರಣೆ ಮತ್ತು ಎಐಎಲ್‌ಆರ್‌ಎಲ್‌ಎ

ಎ. ಎಐಎಆರ್‌ಎಲ್‌ಎ ಸಂಘಟನೆಯ ಮುಖ್ಯ ಲಕ್ಷಣ ಬದಲಾಗಿದ್ದು ಕೃಷಿ ಕಾರ್ಮಿಕರೊಂದಿಗೆ ಗ್ರಾಮೀಣ ದುಡಿಯುವ ವರ್ಗಗಳನ್ನೂ ಸೇರಿಸಲಾಗಿದೆ. ನಮ್ಮ ಎಐಎಆರ್‌ಎಲ್‌ಎ ಕಾರ್ಯಕರ್ತರು ಈ ಪರಿಕಲ್ಪನೆಯನ್ನು ಬಹುಶಃ ಸರಿಯಾಗಿ ಗ್ರಹಿಸಿಲ್ಲ. ಕರ್ನಾಟಕದಲ್ಲಿ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಖ್ಯೆ ಸಂಖ್ಯೆಯಲ್ಲಿ ಮತ್ತು ವಿಷಯಾಧಾರಿತವಾಗಿ ಹೆಚ್ಚಾಗುತ್ತಲೇ ಇದೆ. ಅದರೂ ನಾವು ದಿಟ್ಟ ಮುನ್ನಡೆ ಸಾಧಿಸಲಾಗಿಲ್ಲ. ಎರಡು ಹಂತಗಳಲ್ಲಿ ನಮ್ಮ ನ್ಯೂನತೆಯನ್ನು ಕಾಣಬಹುದು. ಭೂಮಿ, ಕೂಲಿ, ವಸತಿ ಮತ್ತು ಸಾಮಾಜಿಕ ಘನತೆ ಇವು ನಮ್ಮ ಹೋರಾಟದ ವಾಹಿನಿಯ ಮುಖ್ಯಾಂಶಗಳಾಗಿವೆ. ಕೂಲಿಯ ಬಗ್ಗೆ ಕೊಂಚ ಮುನ್ನಡೆ ಸಾಧಿಸಿರುವ ನಾವು ಕೆಲವು ಗ್ರಾಮಗಳಲ್ಲಿ ಕೆಲವೇ ಜನರೊಡನೆ ಸಂಪರ್ಕ ಸಾಧಿಸಿದ್ದೇವೆ. ಆದರೆ ಭೂಮಿ ಮತ್ತು ಸಮಾಜಿಕ ಘನತೆ ಆಧಾರಿತ ಹೋರಾಟಗಳಲ್ಲಿ ನಾವು ಅಷ್ಟು ಯಶಸ್ಸನ್ನು ಸಾಧಿಸಿಲ್ಲ. ಆದರೆ ಇದು ಸಮೂಹ ಆಯಾಮವನ್ನು ಪಡೆದಿಲ್ಲ. ನಮ್ಮ ಕಾರ್ಯಸೂಚಿಯ ಸುತ್ತ ಜನರನ್ನು

ಕ್ರೋಢೀಕರಿಸುವುದು, ಕೆಂಪು ಗ್ರಾಮ, ಕೆಂಪು ಪಂಚಾಯತ್ ಮತ್ತು ಕೆಂಪುಶಾಲುಗಳನ್ನು ಪ್ರಧಾನವಾಗಿ ಬಿಂಬಿಸುವುದು ಇಂದಿನ ತುರ್ತು ಅಗತ್ಯತೆಯಾಗಿದೆ. ತಾಲ್ಲೂಕು ಕಚೇರಿಗಳ ಮುಂದೆ ಧರಣಿ ನಡೆಸಲು ನೂರಕ್ಕೂ ಹೆಚ್ಚು ಜನರನ್ನು ಒಂದುಗೂಡಿಸುವಲ್ಲಿ ನಾವು ಯಶಸ್ವಿಯಾಗಿದ್ದೇವೆ. ಇದೇ ರೀತಿಯ ಹೋರಾಟಗಳನ್ನು ಪಂಚಾಯತ್ ಮಟ್ಟದಲ್ಲಿ ಅಥವಾ ಜಿಲ್ಲಾ ಮಟ್ಟದಲ್ಲಿ ಮುಂದುವರೆಸಲು ಅಶಕ್ಯರಾಗಿದ್ದೇವೆ. ಪಂಚಾಯತ್ ಮಟ್ಟದಲ್ಲಿ ಹೋರಾಡಲು ಜನರನ್ನು ಕ್ರೋಢೀಕರಿಸಲು ವಿಫಲವಾಗಿರುವುದು ನಮ್ಮ ತಳಮಟ್ಟದ ಚಟುವಟಿಕೆಯಲ್ಲಿನ ನ್ಯೂನತೆಯನ್ನು ತೋರುತ್ತದೆ. ಸ್ಥಳೀಯ ಮಟ್ಟದಲ್ಲಿ ಅಧಿಕಾರಸ್ಥರ ಪ್ರಾಬಲ್ಯವನ್ನು ವಿರೋಧಿಸುವುದು ಅಥವಾ ಸ್ಥಳೀಯ ಆಡಳಿತವನ್ನು ವಿರೋಧಿಸುವುದು ಕಷ್ಟ ಎಂದು ಭಾವಿಸುವ ನಮ್ಮ ಕಾರ್ಯಕರ್ತರು ವಿರೋಧಾಭಾಸಗಳು ಕ್ಷೀಣವಾಗಿರುವ ತಾಲ್ಲೂಕು ಮಟ್ಟದ ಪ್ರತಿಭಟನೆಗಳಲ್ಲೇ ಹೆಚ್ಚಿನ ವಿಶ್ವಾಸ ಹೊಂದಿರುವಂತೆ ಕಾಣುತ್ತದೆ. ಹಾಗಾಗಿ ಜಿಲ್ಲಾ ಮಟ್ಟದಲ್ಲಿ ಅಥವಾ ತಾಲ್ಲೂಕು ಮಟ್ಟದಲ್ಲಿ ನಡೆಯುವ ಪ್ರತಿಭಟನೆಗಳು ಅನುಕೂಲಕರವಾಗಿ ಕಾಣುತ್ತವೆ ಆದರೆ ಪಂಚಾಯತ್ ಮಟ್ಟದ ಹೋರಾಟಗಳು ಕಷ್ಟಕರ ಎನಿಸುತ್ತವೆ. ಸ್ಥಳೀಯ ಶಕ್ತಿಗಳ ವಿರುದ್ಧ ಸೆಟೆದು ನಿಲ್ಲಲು ಹೆಚ್ಚಿನ ಶ್ರದ್ಧೆ, ರಾಜಕೀಯ ಬದ್ಧತೆ ಮತ್ತು ರಾಜಕೀಯ ಚಾಣಾಕ್ಷತೆ ಅಗತ್ಯ. ಆಗ ಮಾತ್ರ ಜನಸಾಮಾನ್ಯರನ್ನು ರಾಜಕೀಯ ನೆಲೆಯಲ್ಲಿ ಜಾಗೃತಗೊಳಿಸಿ ವರ್ಗ ಸಂಘರ್ಷದಲ್ಲಿ ವರ್ಗ ಶತ್ರುಗಳ ವಿರುದ್ಧ ಹೋರಾಟಕ್ಕೆ ಸಜ್ಜುಗೊಳಿಸಬಹುದು. ಈ ಗಡಿರೇಖೆಯನ್ನು ನಾವು ದಾಟದ ಹೊರತು ನಮ್ಮ ಮುನ್ನಡೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಪ್ರತಿಯೊಂದು ತಾಲ್ಲೂಕಿನಲ್ಲೂ ಕನಿಷ್ಠ ಶೇ 25ರಷ್ಟು ಗ್ರಾಮಗಳಲ್ಲಿ ಕೆಂಪು ಪಂಚಾಯತ್‌ಗಳನ್ನು ರೂಪಿಸುವುದು ನಮ್ಮ ಧ್ಯೇಯವಾಗಬೇಕು. ಇದು ಗ್ರಾಮೀಣ ಭಾಗದಲ್ಲಿ ನಮ್ಮ ಪಕ್ಷದ ಮುನ್ನಡೆಗೆ ಪೂರಕವಾಗಿರುತ್ತದೆ. ನಮ್ಮ ವ್ಯಾಪ್ತಿ ಮತ್ತು ಆಳ ಪರಸ್ಪರ ಪೂರಕವಾಗಿರುವಂತೆ ಎಚ್ಚರ ವಹಿಸಬೇಕು. ಹಾಗಾಗಿ ಗ್ರಾಮೀಣ ಚಟುವಟಿಕೆಯ ನೆಲೆಯಲ್ಲಿ " ಸಾವಿರಾರು ಕೆಂಪು ಶಾಲುಗಳು ನೂರಾರು ಕೆಂಪು ಪಂಚಾಯತ್‌ಗಳು" ನಮ್ಮ ಘೋಷ ವಾಕ್ಯವಾಗಬೇಕು. ಕೂಲಿಯನ್ನು ಒಳಗೊಂಡಂತೆ ಭೂಮಿ ಮತ್ತು ದಲಿತರಿಗೆ ಸಂಬಂಧಿಸಿದ ವಿಷಯಗಳನ್ನು ನಾವು ಕೇಂದ್ರೀಕರಿಸಬೇಕು. ಮುಂಬರುವ ದಿನಗಳಲ್ಲಿ ಈ ಬಗ್ಗೆ ಹೆಚ್ಚಿನ ಗಮನ ನೀಡಬೇಕು. ಆದ್ದರಿಂದ ಭೂಮಿ ಮತ್ತು ಘನತೆ ನಮ್ಮ ಕಾರ್ಯಕ್ಷೇತ್ರದ ಮೂಲ ಬಿಂದು ಆಗಬೇಕು. ಭೂಮಿ ಎಂದರೆ ವಸತಿ ಮತ್ತು ಸಾರ್ವಜನಿಕ ಬಳಕೆಯ ಭೂಮಿ ಎಂದು ಗ್ರಹಿಸಬೇಕು.

ಬಿ. ಇಂದಿನ ಸಂದರ್ಭದಲ್ಲಿ ಭೂಮಿ, ಕೂಲಿ ಮತ್ತು ಸಾಮಾಜಿಕ ಘನತೆಯನ್ನು ಹೊರತುಪಡಿಸಿ ನಾವು ವಸತಿ, ಆರೋಗ್ಯ, ಶಿಕ್ಷಣ, ಸಣ್ಣಪ್ರಮಾಣದ ಸಾಲ, ವಿದ್ಯುತ್ ಸೌಲಭ್ಯ, ನೀರು, ವಿಶೇಷವಾಗಿ ಕುಡಿಯುವ ನೀರು ಇವೆಲ್ಲವೂ ನಮ್ಮ ಗ್ರಾಮೀಣ ಹೋರಾಟಗಳ ಕಾರ್ಯಸೂಚಿಯಲ್ಲಿರುವುದು ಅತ್ಯಗತ್ಯ. ಈಗ ಜಾರಿಯಲ್ಲಿರುವ ಅಸಂಖ್ಯಾತ ಕಲ್ಯಾಣ ಯೋಜನೆಗಳ ಸಮಗ್ರ ವಿಶ್ಲೇಷಣೆ ನಡೆಸಿ ಈ ಯೋಜನೆಗಳ ಅನುಷ್ಟಾನದಲ್ಲಿ ಕಂಡುಬರುವ ಪಕ್ಷಪಾತಿ ಧೋರಣೆ, ಸ್ವಜನಪಕ್ಷಪಾತ, ಪಟ್ಟಭದ್ರ ಹಿತಾಸಕ್ತಿಗಳ ಲಾಲಸೆ ಮತ್ತು ತಾರತಮ್ಯಗಳ ವಿರುದ್ಧ ಹೋರಾಡಬೇಕಿದೆ. ಈ ಮಾರ್ಗ ಅನುಸರಿಸುವುದರಿಂದ ಪ್ರಭುತ್ವದ ರಚನೆಯಲ್ಲಿ ಸೌಲಭ್ಯಗಳಿಗಾಗಿ ಸಮ್ಮಿಳಿತವಾಗುವ ಮಧ್ಯಮ ವರ್ಗಗಳ ನೇತೃತ್ವದ ದಲಿತ ಸಂಘರ್ಷ ಸಮಿತಿಗಳ ಮಾರ್ಗಕ್ಕೆ ಪರ್ಯಾಯ ರೂಪಿಸಬಹುದು. ಹೈದರಾಬಾದ್ ಕರ್ನಾಟಕದಲ್ಲಿ ಪ್ರಾದೇಶಿಕ ಅಭಿವೃದ್ಧಿ ನಮ್ಮ ಜನಾಂದೋಲನಗಳಲ್ಲಿ ಪ್ರಧಾನ ಪಾತ್ರ ವಹಿಸಬಹುದು. ಅಭಿವೃದ್ಧಿ ಮತ್ತು ಪ್ರಗತಿಯ ವಿಚಾರದಲ್ಲಿ, ರಸ್ತೆ ನಿರ್ಮಾಣ, ಸಾರಿಗೆ, ಸ್ವಚ್ಚ ಭಾರತ ಮುಂತಾದ ಸಮಸ್ಯೆಗಳನ್ನು ದಮನಿತ ಜನತೆಯ ದೃಷ್ಟಿಕೋನದಿಂದ ಬಗೆಹರಿಸಲು ಯತ್ನಿಸುವುದು ಉಚಿತ. ಮಾರ್ಕ್ಸ್‌ವಾದಿಗಳಾಗಿ ನಾವು ಅಭಿವೃದ್ಧಿಯ ವಿಚಾರಗಳಲ್ಲಿ ಹೋರಾಟ ರೂಪಿಸುವಾಗ ವರ್ಗ ದೃಷ್ಟಿಕೋನ ಹೊಂದುವುದರ ಬಗ್ಗೆ ಗಮನ ಇರಿಸಬೇಕು. ವರ್ಗ ಹೋರಾಟದ ನೆಲೆಯಿಂದ ದೂರವಾಗಿ ಅಧಿಪತ್ಯ ರಾಜಕಾರಣದ ಪ್ರಭಾವಕ್ಕೆ ಸಿಲುಕುವ ಅಪಾಯವನ್ನು ಸದಾ ಮನಗಾಣುತ್ತಿರಬೇಕು. ಮಹಿಳೆಯರಿಗೆ ಒದಗಿಸಲಾಗುವ ಸಣ್ಣ ಪ್ರಮಾಣದ ಸಾಲ ಸೌಲಭ್ಯಗಳ ವಿಚಾರದಲ್ಲಿ ಪ್ರಭುತ್ವ ವಿರೋಧಿ ನೆಲೆಯಲ್ಲಿ ಹೋರಾಟ ರೂಪಿಸಲು ಯತ್ನಿಸಬೇಕು. ಸರ್ಕಾರವೇ ರೂಪಿಸುವ ಸ್ತ್ರೀ ಶಕ್ತಿ ಸಂಘಟನೆಗಳಿಗೆ ನೀಡಲಾಗುವ ಸಾಲದ ಮೇಲಿನ ಬಡ್ಡಿ ದರದಲ್ಲಿ ಕಡಿತ, ಬಡ್ಡಿ ಮನ್ನಾ ಮತ್ತು ಪಾವತಿಯಾಗದ ಸಾಲಗಳ ಮನ್ನಾ ಮಾಡಲು ಒತ್ತಾಯ ಮಾಡಬೇಕು.

ನಮ್ಮ ಮುಂದಿರುವ ತತ್‌ಕ್ಷಣದ ಗುರಿ

ಅ. ಕೊಪ್ಪಳ, ದಾವಣಗೆರೆ, ಬಳ್ಳಾರಿ ಮತ್ತು ಮೈಸೂರು ಜಿಲ್ಲೆಗಳಲ್ಲಿ 20 ಸಾವಿರಕ್ಕೂ ಹೆಚ್ಚು ಕೃಷಿ ಕಾರ್ಮಿಕರ ಮೇಲೆ ನಮ್ಮ ಸಂಘಟನೆ ಪ್ರಭಾವ ಬೀರಿದೆ. ದುರಾದೃಷ್ಟವಶಾತ್ ನಾವು ಈ ಕೃಷಿ ಕಾರ್ಮಿಕರನ್ನು ಪಕ್ಷದ ಸದಸ್ಯರನ್ನಾಗಿ ನೋಂದಾಯಿಸುವುದು ಸಾಧ್ಯವಾಗಿಲ್ಲ. ಎಐಎಆರ್‌ಎಲ್‌ಎ ಪ್ರತಿಯೊಂದು ಪಂಚಾಯತಿಯಲ್ಲೂ ಸದಸ್ಯರ ನೋಂದಣಿಗಾಗಿ ಶ್ರಮಿಸಬೇಕು. ಇನ್ನು ಎರಡು ವರ್ಷಗಳಲ್ಲಿ ಐವತ್ತು ಸಾವಿರ ಸದಸ್ಯರನ್ನು ನೋಂದಾಯಿಸುವ ಗುರಿಯತ್ತ ಮುನ್ನಡೆಯಬೇಕು.

ಆ. ಔಪಚಾರಿಕವಾಗಿ ಹಲವು ಸಮಿತಿಗಳನ್ನು ರಚಿಸಲಾಗಿದ್ದರೂ ರಾಜ್ಯ ತಂಡಕ್ಕೆ ಎಐಎಆರ್‌ಎಲ್‌ಎ ಸಂಘಟನೆಯನ್ನು ಬೆಳೆಸುವ ದೂರದರ್ಶಿತ್ವ ಕಾಣುತ್ತಿಲ್ಲ. ಗ್ರಾಮೀಣ ಬಡ ಜನತೆಗಾಗಿ ಹೋರಾಡುವ ಸಮರ್ಥ ತಂಡವನ್ನು ಕಟ್ಟಬೇಕಿದೆ.

ಇ. ಪಕ್ಷ ಮುನ್ನಡೆಯುತ್ತಿರುವ ಎಲ್ಲ ಜಿಲ್ಲೆಗಳಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಸಂಘಟನೆಯನ್ನು ಒಂದು ಪ್ರಮುಖ ಹೋರಾಟದ ಶಕ್ತಿಯಾಗಿ ರೂಪಿಸುವುದು ನಮ್ಮ ಆದ್ಯತೆಯಾಗಬೇಕು. ದಲಿತರು ಮತ್ತು ತುಳಿತಕ್ಕೊಳಗಾದವರನ್ನು ಕ್ರೋಢೀಕರಿಸುವ ಮೂಲಕ ಕನಿಷ್ಟ 1000 ಹಳ್ಳಿಗಳನ್ನು ನಮ್ಮ ಗ್ರಾಮಗಳನ್ನಾಗಿ ಪರಿವರ್ತಿಸಬೇಕು. ಹೀಗೆಯೇ 30 ರಿಂದ 40 ತಾಲ್ಲೂಕುಗಳಿಗೆ ನಮ್ಮ ಕಾರ್ಯವ್ಯಾಪ್ತಿ ವಿಸ್ತರಿಸಬೇಕು. ಮುಂದಿನ ಸಮಾವೇಶಕ್ಕೆ ಮುನ್ನ ಇದನ್ನು ಸಾಧಿಸಬೇಕು.

ಈ. ಡಿಸೆಂಬರ್ 2017ರ ಅಂತ್ಯದ ವೇಳೆಗೆ ಅಥವಾ ಜನವರಿ ತಿಂಗಳಲ್ಲಿ ಕನಿಷ್ಟ 1000 ಜನರನ್ನು ಕ್ರೋಢೀಕರಿಸಿದ ತಾಲ್ಲೂಕು ಮಟ್ಟದ ರ್‍ಯಾಲಿಗಳನ್ನು ಆಯೋಜಿಸುವ ಮೂಲಕ ತಳಮಟ್ಟದಲ್ಲಿ ಪಕ್ಷ ಹಾಗೂ ಎಐಎಆರ್‌ಎಲ್‌ಎ ಸಂಘಟನೆಯನ್ನು ಬಲಪಡಿಸಬೇಕು. ಶೀಘ್ರದಲ್ಲೇ ಸಂಘಟನೆಯ ರಾಜ್ಯ ಸಮಾವೇಶ ಏರ್ಪಡಿಸುವ ಮೂಲಕ ಗ್ರಾಮೀಣ ಪ್ರದೇಶದ ಹೋರಾಟವನ್ನು ವಿಸ್ತರಿಸಿ ರಾಜ್ಯ ಸಮಿತಿಯೊಂದನ್ನು ರಚಿಸಬೇಕು.

ಉ. ಶ್ರೀಮಂತ ರೈತರ ಸಂಘಟನೆಯಾದ ಕರ್ನಾಟಕ ರಾಜ್ಯ ರೈತ ಸಂಘಕ್ಕೆ ಪ್ರತಿಯಾಗಿ ನಾವು ಅಖಿಲ ಭಾರತ ಕಿಸಾನ್ ಮಹಾಸಭಾ ರಚಿಸಲು ಸಜ್ಜಾಗಬೇಕು. ಮುಂದಿನ ವರ್ಷ ಜುಲೈ–ಸೆಪ್ಟಂಬರ್ ಅವಧಿಯಲ್ಲಿ ರೈತರ ಆತ್ಮಹತ್ಯೆ ಮತ್ತು ಕೃಷಿ ಬಿಕ್ಕಟ್ಟಿನ ವಿರುದ್ಧ ರೈತ ಸಮಾವೇಶ ಏರ್ಪಡಿಸುವ ಮೂಲಕ ಈ ಪ್ರಯತ್ನಕ್ಕೆ ಚಾಲನೆ ನೀಡಬೇಕಿದೆ. ರಾಜ್ಯದಲ್ಲಿ ಸಾಕಷ್ಟು ರೈತ ಆತ್ಮಹತ್ಯೆಗಳು ಸಂಭವಿಸುತ್ತಿದ್ದರೂ ಕೃಷಿ ಬಿಕ್ಕಟ್ಟನ್ನು ಎದುರಿಸುವಲ್ಲಿ ನಮ್ಮ ಪಕ್ಷ ಸಾಕಷ್ಟು ಸಾಧನೆ ಮಾಡಲಾಗದಿರುವುದು ವಿಷಾದನೀಯ. ಇತರ ರೈತ ಸಂಘಟನೆಗಳೊಡನೆ ಸಂಪರ್ಕ ಸಾಧಿಸುವ ಮೂಲಕ ಈ ನಿಟ್ಟಿನಲ್ಲಿ ಮುನ್ನಡೆಯಬಹುದು.

**4. ದುಡಿಯುವ ವರ್ಗಗಳೊಡನೆ ನಮ್ಮ ಚಟುವಟಿಕೆ ಮತ್ತು ಎಐಸಿಸಿಟಿಯು**

ಎ. ಅಸಂಘಟಿತ ಕಾರ್ಮಿಕರನ್ನು ಸಂಘಟಿಸುವ ನಿಟ್ಟಿನಲ್ಲಿ ನಾವು ಹೆಚ್ಚಿನ ಶ್ರಮ ವಹಿಸಲು ಮುಂದಾಗಿದ್ದೇವೆ. ಅಸಂಘಟಿತ ಕಾರ್ಮಿಕರ ನಡುವೆಯೇ ನಮ್ಮ ಪಕ್ಷದ ಹೆಚ್ಚಿನ ಪಾತ್ರ ಇರುವುದರಿಂದ ಈ ನಿಟ್ಟಿನಲ್ಲಿ ನಾವು ಮುನ್ನಡೆ ಸಾಧಿಸಬೇಕಿದೆ.

ಅಸಂಘಟಿತ ಕಾರ್ಮಿಕರ ನಡುವೆಯೂ ನಾವು ಸಕ್ರಿಯವಾಗಿದ್ದೇವೆ. ಬೆಂಗಳೂರು, ಮಂಗಳೂರು, ಕೊಪ್ಪಳ ಜಿಲ್ಲೆಗಳಲ್ಲಿ ಸಾರ್ವಜನಿಕ ವಲಯದಲ್ಲಿ ಗುರುತಿಸಲ್ಪಟ್ಟಿದ್ದೇವೆ. ಮೈಸೂರು, ಹಾಸನ, ಬಳ್ಳಾರಿ, ದಾವಣಗೆರೆ, ಕೋಲಾರ, ಹುಬ್ಬಳ್ಳಿ–ಧಾರವಾಡದಲ್ಲಿ ನಾವಿನ್ನೂ ಗಮನ ಹೆಚ್ಚಿಸಬೇಕಿದೆ. ಬೆಂಗಳೂರು ಮತ್ತು ಗಂಗಾವತಿಯ ಸ್ವಚ್ಚತಾ ಕಾರ್ಮಿಕರ ನಡುವೆ ನಾವುಪ್ರಬಲ ಶಕ್ತಿಯಾಗಿ ಬೆಳೆದಿದ್ದೇವೆ. ರಾಜ್ಯಾದ್ಯಂತ ಈ ಪೌರ ಕಾರ್ಮಿಕರನ್ನು ಮತ್ತು ಸ್ವಚ್ಚತಾ ಕಾರ್ಮಿಕರನ್ನು ಸಂಘಟಿಸಲು ಪ್ರಚಾರಾಂದೋಲನ ಹಮ್ಮಿಕೊಳ್ಳಬೇಕಿದೆ. ಹಾಗೆಯೇ ಬೆಂಗಳೂರು ಒಳಚರಂಡಿ ಮತ್ತು ಜಲ ನಿರ್ವಹಣೆ ಮಂಡಲಿಯ ಗುತ್ತಿಗೆ ನೌಕರರನ್ನು ಪ್ರತಿನಿಧಿಸುವ ಏಕೈಕ ಸಂಘಟನೆ ನಮ್ಮದಾಗಿದೆ. ಇತರ ನೀರು ಸರಬರಾಜು ಮಂಡಲಿಗಳಿಗೆ ನಮ್ಮ ಸಂಘಟನೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ನಾವು ಕಾರ್ಯಪ್ರವೃತ್ತರಾಗಬೇಕಿದೆ. ಬೆಂಗಳೂರು, ಸಕಲೇಶಪುರ, ಗಂಗಾವತಿಯಲ್ಲಿ ಬೀದಿ ಬದಿ ವ್ಯಾಪಾರಿಗಳೊಡನೆಯೂ ನಮ್ಮ ಪ್ರಾಬಲ್ಯ ಹೆಚ್ಚಾಗಿದೆ. ಆದರೆ ಇದು ಇತರ ಪ್ರದೇಶಗಳಿಗೆ ವ್ಯಾಪಿಸಬೇಕಿದೆ. ಬೆಂಗಳೂರಿನ ಆರ್‌ಎಮ್‌ಸಿ, ಆರ್‌ಡಿಸಿ, ಲಫಾರ್ಜ್ ಮತ್ತು ಮಂಗಳೂರಿನ ಆರ್‌ಎಂಸಿ ಕಾರ್ಖಾನೆಯಲ್ಲಿ ಕಳೆದ ಹತ್ತು ವರ್ಷಗಳಿಂದ ರೆಡಿಮಿಕ್ಸ್ ಕಾರ್ಮಿಕರನ್ನು ಸಂಘಟಿಸಿರುವ ಏಕೈಕ ಕಾರ್ಮಿಕ ಸಂಘಟನೆ ನಮ್ಮದಾಗಿದೆ. ಆದರೆ ಎಲ್ಲಾ ಜಿಲ್ಲೆಗಳಲ್ಲಿರುವ ರೆಡಿಮಿಕ್ಸ್ ಕಾರ್ಮಿಕರನ್ನು ಸಂಘಟಿಸಲು ನಾವು ಇನ್ನೂ ಸಾಕಷ್ಟು ಶ್ರಮಿಸಬೇಕಿದೆ. ಈ ನಿಟ್ಟಿನಲ್ಲಿ ನಾವು ಸಾಕಷ್ಟು ಒಪ್ಪಂದಗಳಿಗೆ ಸಹಿ ಮಾಡಿದ್ದು ಕಾರ್ಮಿಕರಿಗೆ ಉತ್ತಮ ಗುಣಮಟ್ಟದ ಜೀವನ ಒದಗಿಸಲು ಯಶಸ್ವಿಯಾಗಿದ್ದೇವೆ. ಇತ್ತೀಚೆಗೆ ಆರ್‌ಎಂಸಿ ಕಾರ್ಮಿಕರು 37 ದಿನಗಳ ಮುಷ್ಕರ ಹೂಡಿದ್ದು ಒಂದು ಒಪ್ಪಂದಕ್ಕೆ ಸಹಿ ಮಾಡಿದ್ದಾರೆ. ಬೆಂಗಳೂರು ಮತ್ತು ಮೈಸೂರಿನ ರೇಸ್‌ಕೋರ್ಸ್ ಕಾರ್ಮಿಕರೊಡನೆಯೂ ನಮ್ಮ ಚಟುವಟಿಕೆ ಮುನ್ನಡೆ ಕಾಣುತ್ತಿದೆ. ಕಾರ್ಮಿಕ ಸಂಘಟನೆಯಲ್ಲಿ ಪ್ರಜಾತಂತ್ರ ಮೌಲ್ಯಗಳ ರಕ್ಷಣೆಗಾಗಿ ಹೋರಾಡುತ್ತಿರುವ ರೇಸ್ ಕೋರ್ಸ್ ಕಾರ್ಮಿಕರು ನಮ್ಮೊಡನಿದ್ದು ಇತ್ತೀಚಿನ ಚುನಾವಣೆಗಳಲ್ಲಿ ಹೈಕೋರ್ಟ್ ಆದೇಶದ ಮೇಲೆ ರಹಸ್ಯ ಮತದಾನ ನಡೆದಿದ್ದು ಕಾಂಗ್ರೆಸ್ ನೇತೃತ್ವದ ಸಂಘಟನೆಯನ್ನು ನಮ್ಮ ಸಂಘಟನೆ ಸೋಲಿಸಿದೆ. ಕೇಂದ್ರ ಸರ್ಕಾರದ ಆಸ್ಪತ್ರೆಯಾದ ನಿಮ್ಹಾನ್ಸ್, ಸಿಎಸ್‌ಐ ಆಸ್ಪತ್ರೆ , ಸಾರ್ವಜನಿಕ ಉದ್ದಿಮೆಗಳಾದ ಹೆಚ್‌ಎಎಲ್, ಎನ್‌ಎಎಲ್, ಬಹುರಾಷ್ಟ್ರೀಯ ಕಂಪನಿಗಳಾದ ಮೈಕೋ ಬಾಷ್, ಕೆನ್ನಾಮೆಟಲ್ ಮುಂತಾದ ಉದ್ದಿಮೆಗಳಲ್ಲಿನ ಗುತ್ತಿಗೆ ಕಾರ್ಮಿಕರ ನಡುವೆ ನಾವು ಸಕ್ರಿಯವಾಗಿದ್ದೇವೆ. ಇತ್ತೀಚೆಗೆ ಬೆಂಗಳೂರಿನಲ್ಲಿರುವ ಮಾತಾ ಅಮೃತಾನಂದಮಯಿ ಒಡೆತನದ ಅಮೃತ ವಿಶ್ವವಿದ್ಯಾಪೀಠಂ ವಿಶ್ವವಿದ್ಯಾಲಯದಲ್ಲಿ ನಾವು ಕಾರ್ಮಿಕ ಸಂಘಟನೆ ಆರಂಭಿಸಿದ್ದೇವೆ. ಈ ಸಂಸ್ಥೆ ತಂತ್ರಜ್ಞಾನ ಕ್ಷೇತ್ರದ ತೊಟ್ಟಿಲು ಎಂದೇ ಪ್ರಸಿದ್ಧವಾಗಿದೆ. ಸಕಲೇಶಪುರ, ಹಾಸನ,

ಕಕ್ಕಿಂಜೆ, ದಕ್ಷಿಣ ಕನ್ನಡ ಜಿಲ್ಲೆಗಳ ಜಲವಿದ್ಯುತ್ ಉತ್ಪಾದನಾ ಘಟಕಗಳಲ್ಲಿ ನಮ್ಮ ಸಂಘಟನೆ ಸಕ್ರಿಯವಾಗಿದೆ. ಕೋಲಾರ, ಹುಬ್ಬಳ್ಳಿ ಧಾರವಾಡ, ಮೈಸೂರು ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ನಮ್ಮ ಕಟ್ಟಡ ಕಾರ್ಮಿಕರ ಸಂಘಟನೆ ಸಕ್ರಿಯವಾಗಿದ್ದು ಬೆಂಗಳೂರಿನಲ್ಲೂ ಕೆಲವೆಡೆ ತನ್ನ ಪ್ರಭಾವ ಹೊಂದಿದೆ. ಹೋಟೆಲ್ ಕಾರ್ಮಿಕರು , ವಾಹನ ತಂತ್ರಜ್ಞಾನದ ಕಾರ್ಮಿಕರು, ಗಂಗಾವತಿಯ ಟ್ಯಾಕ್ಸಿ ಚಾಲಕರ ನಡುವೆ ಸಂಘಟನೆಯ ಚಟುವಟಿಕೆ ಮುನ್ನಡೆದಿದೆ. ಮಂಗಳೂರಿನ ಹಡಗು ಕಂಪನಿಗಳಲ್ಲಿ ಸಕ್ರಿಯವಾಗಿರುವ ಏಕೈಕ ಕಾರ್ಮಿಕ ಸಂಘಟನೆ ನಮ್ಮದಾಗಿದ್ದು ಇದರ ಮೂಲಕವೇ ಹಡಗು ಕಂಪನಿ ನೌಕರರ ಅಖಿಲ ಭಾರತ ಒಕ್ಕೂಟ ಸ್ಥಾಪಿಸಲು ಸಾಧ್ಯವಾಗಿದೆ. ತೂತ್ತುಕುಡಿ ಮತ್ತು ಚೆನ್ನೈನಲ್ಲೂ ನಮ್ಮ ಸಂಘಟನೆ ಬಲವಾಗಿದೆ. ಈ ಸಂಘಟನೆಗಳ ಕೆಲವು ಅನುಭವಗಳು ಹಂಚಿಕೊಳ್ಳಲು ಯೋಗ್ಯವಾಗಿವೆ.

ಇದೇ ವೇಳೆ ಸಂಘಟಿತ ಕಾರ್ಮಿಕರ ಶಕ್ತಿ, ಸಾಮರ್ಥ್ಯವನ್ನೂ ನಾವು ನಿರ್ಲಕ್ಷಿಸಲಾಗುವುದಿಲ್ಲ. ಆದರೆ ಕಾರ್ಖಾನೆಗಳ ಮಟ್ಟದಲ್ಲಿ ಸಂಘಟಿತ ಕಾರ್ಮಿಕರು ಅಸಂಘಟಿತ ಕಾರ್ಮಿಕರ ವಿರುದ್ಧವಾಗಿಯೇ ಇರುವುದು ದುರದೃಷ್ಟಕರ ಸಂಗತಿ. ಈ ಎರಡೂ ಕಾರ್ಮಿಕ ವಲಯಗಳ ನಡುವೆ ಸಮನ್ವಯ ಮತ್ತು ಹೊಂದಾಣಿಕೆಯನ್ನು ಸಾಧಿಸುವುದರಲ್ಲಿ ಸಂಘಟಿತ ಕಾರ್ಮಿಕ ಚಳುವಳಿ ವಿಫಲವಾಗಿರುವುದೂ ಸತ್ಯ. ಮತ್ತೊಂದೆಡೆ, ಗಣಕ ಯಂತ್ರಗಳ ಕೀಲಿಮಣೆಗಳಿಗೆ ಗುಲಾಮರಾಗಿರುವ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ನವ ಪೀಳಿಗೆಯ ನೌಕರರನ್ನೂ ಕಾಣುತ್ತಿದ್ದೇವೆ. ಅತ್ಯಾಧುನಿಕ ನೌಕರಿಯನ್ನು ಅವಲಂಬಿಸಿರುವ ಐಟಿ ಕ್ಷೇತ್ರದ ಕಾರ್ಮಿಕರನ್ನು ಸಂಘಟಿಸುವ ಪ್ರಯತ್ನವೂ ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದಿದೆ. ದುರದೃಷ್ಟವಶಾತ್ ಈ ಕ್ಷೇತ್ರದಲ್ಲಿ ನಮ್ಮ ಪ್ರಭಾವ ಹೆಚ್ಚಾಗಿಲ್ಲ. ಸಂಘಟಿತ ಕಾರ್ಮಿಕರು ಮತ್ತು ಕೀಲಿಮಣೆ ಕಾರ್ಮಿಕರ ನಡುವೆ ಸಮನ್ವಯ ಸಾಧಿಸಲು ನಾವು ಪ್ರಯತ್ನಿಸಬೇಕಿದೆ.

**ಬಿ.** ಕಾರ್ಮಿಕ ಸಂಘಟನೆಯ ಚಟುವಟಿಕೆಗಳು ಆರಂಭವಾದ ದಿನದಿಂದಲೇ ನಾವು ಸರಿಯಾದ ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇವೆ. ನಗರ ಪ್ರದೇಶಗಳಲ್ಲಿ ಕಾರ್ಮಿಕರೊಡನೆ ನಮ್ಮ ಒಡನಾಟದಲ್ಲಿ ಈ ಕೆಲವು ಸಂಗತಿಗಳನ್ನು ಗಮನಿಸಬಹುದು.

- ಪ್ರಚಲಿತ ರಾಜಕೀಯ ವಿಚಾರಗಳ ಬಗ್ಗೆ ಸೂಕ್ತ ರಾಜಕೀಯ ಹಸ್ತಕ್ಷೇಪ ಮತ್ತು ಉಗ್ರ ಹೋರಾಟಗಳ ಸಂಘಟನೆ.
- ಒಬ್ಬ ಕೈಗಾರಿಕೋದ್ಯಮಿ ಅಥವಾ ಬಂಡವಾಳಿಗನ ವಿರುದ್ಧದ ಹೋರಾಟ ಮತ್ತು ವರ್ಗ ಹೋರಾಟದ ಪ್ರಜ್ಞೆಯನ್ನು ಸಮಗ್ರ ಕೈಗಾರಿಕೋದ್ಯಮಿಗಳು

ಮತ್ತು ಬಂಡವಾಳಿಗರ ವಿರುದ್ಧ ಜಾಗೃತವಾಗುವಂತೆ ಕಾರ್ಮಿಕರಲ್ಲಿ ಪ್ರಜ್ಞೆ ಮೂಡಿಸುವುದು.

- ಆಂತರಿಕ ವರ್ಗ ಪ್ರಜ್ಞೆಯನ್ನು ಸಮಗ್ರ ವರ್ಗ ಪ್ರಜ್ಞೆಯಾಗಿ ಪರಿವರ್ತಿಸುವುದು.
- ಕಾರ್ಮಿಕರು ತಮ್ಮ ಸಮಸ್ಯೆಗಳನ್ನು ಗುರುತಿಸುವಂತೆ ಕೂಡಲೇ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವುದು, ಕಾರ್ಮಿಕ ಹೋರಾಟವನ್ನು ಪ್ರಭುತ್ವದ ವಿರುದ್ಧದ ಹೋರಾಟವನ್ನಾಗಿ ಮಾಡುವುದು, ದುಡಿಯುವ ವರ್ಗಗಳು ರಾಜಕೀಯ ಅಧಿಕಾರ ಗಳಿಸಲು ಸಾಧ್ಯವಾಗುವಂತೆ ಜಾಗೃತಗೊಳಿಸುವುದು, ಶ್ರೀಮಂತರು ಮತ್ತು ಬೂರ್ಷ್ವಾಗಳಿಂದ ಅಧಿಕಾರವನ್ನು ಕಸಿದುಕೊಳ್ಳುವ ಬಗ್ಗೆ ಪ್ರಜ್ಞೆ ಮೂಡಿಸುವುದು.
- ಕಾರ್ಖಾನೆಯ ನಾಲ್ಕು ಗೋಡೆಗಳನ್ನು ದಾಟಿ ಕಾರ್ಮಿಕ ಸಂಘಟನೆಯನ್ನು ಬೆಳೆಸುವುದು.
- ಅಸಂಘಟಿತ ಕಾರ್ಮಿಕರನ್ನು ಸಂಘಟಿಸುವುದು.
- ಯಾವುದೇ ಉದ್ಯಮದಲ್ಲಿ ಯಾವುದೇ ಕಾರ್ಮಿಕ ಸಂಘಟನೆಯ ಹೋರಾಟಗಳಿಗೆ ಸ್ಪಂದಿಸಿ ಐಕಮತ್ಯ ವ್ಯಕ್ತಪಡಿಸುವುದು.
- ಹೋರಾಟನಿರತ ಕೃಷಿ ಕಾರ್ಮಿಕರು ಮತ್ತು ರೈತಾಪಿಯೊಡನೆ ಸಮನ್ವಯ ಸಾಧಿಸಿ ಐಕಮತ್ಯ ವ್ಯಕ್ತಪಡಿಸುವುದು.
- ಕಾರ್ಮಿಕ ಸಂಘಟನೆಯನ್ನು ದುಡಿಯುವ ವರ್ಗಗಳ ರಾಜಕಾರಣದೊಡನೆ ಸಮೀಕರಿಸುವುದು.
- ಕಾರ್ಮಿಕರನ್ನು ಕ್ರಾಂತಿಕಾರಿ ಪಕ್ಷದ ಸದಸ್ಯರನ್ನಾಗಿ ಮಾಡುವುದು, ಕ್ರಾಂತಿಕಾರಿ ರಾಜಕಾರಣಕ್ಕೆ ಸಜ್ಜುಗೊಳಿಸುವುದು.

ಸಿ. ಕಾರ್ಮಿಕ ಸಂಘಟನೆಯ ಕೇಂದ್ರವಾಗಿ ನಾವು ಈ ಬೇಡಿಕೆಗಳನ್ನು ಆಧರಿಸಿ ಚಳುವಳಿಗಳನ್ನು ರೂಪಿಸಬೇಕಿದೆ.

1. ಕಾರ್ಮಿಕ ಕಾನೂನು ತಿದ್ದುಪಡಿಯನ್ನು ರದ್ದುಪಡಿಸಲು ಆಗ್ರಹಿಸುವುದು.
2. ಕಾರ್ಮಿಕರನ್ನು ಶೋಷಣೆಗೊಳಪಡಿಸುವ ಗುತ್ತಿಗೆ ಪದ್ಧತಿ ಮತ್ತಿತರ ಅನೌಪಚಾರಿಕ ಪದ್ಧತಿಗಳನ್ನು ರದ್ದುಪಡಿಸುವುದು.
3. ಕಾರ್ಮಿಕರು ಯಾವುದೇ ಪ್ರ ವರ್ಗಕ್ಕೆ ಸೇರಿದ್ದರೂ ಒಂದೇ ಸೇವಾ ನಿಯಮ ಮತ್ತು ವೇತನ ನಿಗದಿಪಡಿಸುವುದು. ಗುತ್ತಿಗೆ ಕಾರ್ಮಿಕರಾಗಲಿ, ಸಾಮಾನ್ಯ ನೌಕರರಾಗಲಿ ಒಂದೇ ರೀತಿಯ ಕೆಲಸಕ್ಕೆ ಒಂದೇ ವೇತನ ನೀಡಬೇಕು.

4. ಆಶ್ರಯ ಯೋಜನೆಯ ಮಾದರಿಯಲ್ಲಿ ಕಾರ್ಮಿಕರಿಗೆ ವಸತಿ ಯೋಜನೆ ರೂಪಿಸಬೇಕು.
5. ತಮಿಳುನಾಡು ಸರ್ಕಾರ ಜಾರಿಗೊಳಿಸಿರುವ ಕಾನೂನಿನ ಮಾದರಿಯಲ್ಲಿ ವರ್ಷದಲ್ಲಿ 240 ದಿನ ಕೆಲಸ ಮಾಡಿರುವ ಕಾರ್ಮಿಕರನ್ನು ಖಾಯಂ ಮಾಡಬೇಕು.
6. ಪ್ರತಿಯೊಂದು ಕಂಪನಿಯಲ್ಲೂ ಹೆಚ್ಚಿನ ಸಂಖ್ಯೆಯ ಕಾರ್ಮಿಕರ ಬೆಂಬಲ ಹೊಂದಿರುವ ಸಂಘಟನೆಗೆ ಮಾನ್ಯತೆ ನೀಡಬೇಕು.
7. ಮಹಾರಾಷ್ಟ್ರ ಸರ್ಕಾರ ಜಾರಿಗೊಳಿಸಿರುವ ನಿಯಮಗಳಂತೆ ಅನಪೇಕ್ಷಿತ ಕಾರ್ಮಿಕ ವಿರೋಧಿ ಚಟುವಟಿಕೆಗಳನ್ನು ನಿಯಂತ್ರಿಸಬೇಕು.
8. ತಿಂಗಳಿಗೆ 25 ಸಾವಿರ ರೂಗಳ ಕನಿಷ್ಟ ವೇತನ ಜಾರಿಗೊಳಿಸಬೇಕು.
9. ಈಗಿರುವ ವೇತನದ ಮೇಲೆ ಹೆಚ್ಚಿನ ತುಟ್ಟಿ ಭತ್ಯೆಯನ್ನು ಕಡ್ಡಾಯವಾಗಿ ಪಾವತಿ ಮಾಡಬೇಕು.
10. ಇಎಸ್‌ಐ, ಭವಿಷ್ಯ ನಿಧಿ, ಗ್ರಾಚುಯಿಟಿ ಮುಂತಾದ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಎಲ್ಲರಿಗೂ ವಿಸ್ತರಿಸಬೇಕು.
11. ಬೋನಸ್ ಮೇಲಿರುವ ಮಿತಿಯನ್ನು ರದ್ದುಪಡಿಸಿ ಕನಿಷ್ಟ ಶೇ 20ರಷ್ಟು ಬೋನಸ್ ನೀಡಬೇಕು.
12. ಕಾರ್ಮಿಕ ಸಂಘಟನೆಗಳ ನೋಂದಣಿ ಪ್ರಕ್ರಿಯೆಯನ್ನು 45 ದಿನಗಳ ಒಳಗಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು ಮತ್ತು ಸಾಮಾನ್ಯ ಕಾರ್ಮಿಕ ಸಂಘಟನೆಗಳ ನೋಂದಣಿಗೆ ಅವಕಾಶ ಮಾಡಿಕೊಡಬೇಕು.
13. ಕಾರ್ಮಿಕರಿಗೆ ಸಂಬಂಧಿಸಿದ ಮಂಡಳಿಗಳಲ್ಲಿ, ಸಮಿತಿಗಳಲ್ಲಿ ಕಾರ್ಮಿಕ ಸಂಘಟನೆಗಳಿಗೆ ಅವಕಾಶ ನೀಡಬೇಕು.
14. ಎಲ್ಲ ಕಾರ್ಮಿಕರ ಮಕ್ಕಳಿಗೆ ಉಚಿತ ಶಿಕ್ಷಣ ಮತ್ತು ಹೆಣ್ಣುಮಕ್ಕಳಿಗೆ ವಿಶೇಷ ಯೋಜನೆಗಳನ್ನು ರೂಪಿಸಬೇಕು.

**ಡಿ. ಪೌರ ಕಾರ್ಮಿಕರ ನಡುವೆ ನಮ್ಮ ಚಟುವಟಿಕೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೌರ ಕಾರ್ಮಿಕರ ನಡುವೆ ನಮ್ಮ ತಂಡ ಸಕ್ರಿಯವಾಗಿ ಕ್ರಿಯಾಶೀಲಯತೆಯಿಂದ ಕೆಲಸ ಮಾಡುತ್ತಿದೆ. ರಾಜ್ಯದ ಸ್ವಚ್ಚತಾ ಸಿಬ್ಬಂದಿಯ ಕನಿಷ್ಟ ವೇತನ ರೂ. 7000/– ಗಳಿಂದ ರೂ. 14040/– ಕ್ಕೆ ಹೆಚ್ಚಾಗಲು ನಮ್ಮ ಕಾರ್ಮಿಕ ಸಂಘಟನೆಯ ಹೋರಾಟ ಮತ್ತು ಬದ್ಧತೆಯೇ ಕಾರಣ ಎಂದು ನಿರ್ಭಿಡೆಯಿಂದ ಹೇಳಬಹುದು. ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವ ಸ್ವಚ್ಚತಾ ಸಿಬ್ಬಂದಿಯ ನೌಕರಿಯನ್ನು ಖಾಯಂಗೊಳಿಸುವ

ವಿಚಾರದಲ್ಲಿ ನಮ್ಮ ಪ್ರಯತ್ನಗಳು ಫಲ ನೀಡುತ್ತಿದ್ದು ಕಾರ್ಮಿಕರಿಗೆ ನೇರವಾಗಿ ವೇತನ ಪಾವತಿ ಮಾಡಲು ಸರ್ಕಾರ ಸಮ್ಮತಿಸಿದೆ. ಇದರಿಂದ ರಾಜ್ಯದಲ್ಲಿ ಗುತ್ತಿಗೆ ಪದ್ಧತಿ ಕೊನೆಗಾಣಲಿದೆ. ಕರ್ನಾಟಕದ ಗುತ್ತಿಗೆ ಆಧಾರಿತ ಸ್ವಚ್ಚತಾ ಕಾರ್ಮಿಕರ ದೃಷ್ಟಿಯಲ್ಲಿ ಈ ಎರಡೂ ಸಾಧನೆಗಳು ಚಾರಿತ್ರಿಕವಾಗಿದ್ದು ಇದರ ಶ್ರೇಯ ಎಐಸಿಸಿಟಿಯು ಸಂಘಟನೆಯ ಮುಂಚೂಣಿ ತಂಡಕ್ಕೆ ಸಲ್ಲಬೇಕಿದೆ. ಎರಡು ವರ್ಷಗಳ ಸತತ ಹೋರಾಟದ ನಂತರ ಇದು ಸಾಧ್ಯವಾಗಿದೆ. ಈ ಅವಧಿಯಲ್ಲಿ ಎಐಸಿಸಿಟಿಯು ಕಾರ್ಮಿಕ ಆಯುಕ್ತರ ಕಚೇರಿಯ ಮುಂದೆ ಧರಣಿ ನಡೆಸಿದೆ, ವಿಧಾನಸಭೆ ಚಲೋ ಹಮ್ಮಿಕೊಂಡಿದೆ, ಕಾರ್ಮಿಕ ಸಚಿವರನ್ನು ಘೇರಾವ್ ಮಾಡಿದೆ, ಬಿಬಿಎಂಪಿ ಚಲೋ ಕಾರ್ಯಕ್ರಮ ನಡೆಸಿದೆ ಇನ್ನಿತರ ಹಲವಾರು ಹೋರಾಟದ ಮಾರ್ಗಗಳನ್ನು ಅನುಸರಿಸಿದೆ. ನೌಕರಿ ಖಾಯಂಗೊಳಿಸುವ ಆಗ್ರಹದೊಂದಿಗೆ ನಡೆದ ಎರಡು ದಿನಗಳ ಮುಷ್ಕರದಿಂದ ಬೆಂಗಳೂರು ನಗರ ತತ್ತರಿಸಿಹೋಗಿತ್ತು. ಈ ಹೋರಾಟದಲ್ಲಿ ಇತರ ಅನಪೇಕ್ಷಿತ ಸಂಘಟನೆಗಳು ಭಾಗಿಯಾಗಿದ್ದರೂ ಅಂತಿಮವಾಗಿ ರಾಜ್ಯ ಸರ್ಕಾರ ನಮ್ಮ ಬೇಡಿಕೆಗಳಿಗೆ ಸ್ಪಂದಿಸಿದೆ. ಆದರೆ ಸರ್ಕಾರದ ಯೋಜನೆ ರಾಜ್ಯಾದ್ಯಂತ 11 ಸಾವಿರ ಕಾರ್ಮಿಕರ ನೌಕರಿಯನ್ನು ಖಾಯಂಗೊಳಿಸುವುದೇ ಆಗಿದೆ. ರಾಜ್ಯದಲ್ಲಿರುವ ಎಲ್ಲ ಗುತ್ತಿಗೆ ಕಾರ್ಮಿಕರಿಗೂ ಖಾಯಂ ನೌಕರಿ ನೀಡುವಂತೆ ಆಗ್ರಹಿಸಿ ಹೋರಾಟವನ್ನು ಮುಂದುವರೆಸಲು ನಾವು ಜಂಟಿ ಹೋರಾಟ ಸಮಿತಿಯ ಮೇಲೆ ಒತ್ತಡ ಹೇರಿದ್ದೆವು, ಆದರೆ ಅವಕಾಶವಾದಿ ನಾಯಕತ್ವ ಕಾರ್ಮಿಕರಿಗೆ ವಿಶ್ವಾಸ ದ್ರೋಹ ಬಗೆದಿದ್ದು ರಾಜ್ಯ ಸರ್ಕಾರದೊಡನೆ ಶಾಮೀಲಾಗಿದೆ.

ಈ ಹಿನ್ನೆಲೆಯಲ್ಲಿ ನಾವು ಸ್ವತಂತ್ರವಾಗಿ ನಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದೆ ಮಂಡಿಸುವುದು ಅನಿವಾರ್ಯವಾಗಿತ್ತು. ಈ ಹಿನ್ನೆಲೆಯಲ್ಲೇ ನಮ್ಮ ಸಂಘಟನೆ ಕಾರ್ಮಿಕ ಆಯುಕ್ತರ ಕಚೇರಿಯ ಘೇರಾವ್ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಎಲ್ಲ ಗುತ್ತಿಗೆ ಕಾರ್ಮಿಕರನ್ನು ಖಾಯಂ ಮಾಡುವುದು ಮತ್ತು ಸೇವಾ ನಿಯಮಗಳನ್ನು ಎಲ್ಲರಿಗೂ ಸಮಾನವಾಗಿ ಅನ್ವಯಿಸುವಂತೆ ಮಾಡುವುದು ನಮ್ಮ ಆಗ್ರಹವಾಗಿತ್ತು. ಕಾಂಗ್ರೆಸ್ ಮತ್ತು ಇತರ ಸಾಮಾಜಿಕ ಸಂಘಟನೆಗಳಿಗೆ ಮತ್ತು ದಲಿತ ಗುಂಪುಗಳಿಗೆ ಸಂಯೋಜಿತವಾಗಿದ್ದ ಕಾರ್ಮಿಕ ಸಂಘಟನೆಗಳು ಕೇವಲ ತಮ್ಮ ಸ್ವಾರ್ಥಕ್ಕಾಗಿ ಹೋರಾಡುತ್ತಿರುವ ಸಂದರ್ಭದಲ್ಲಿ ಕೆಲವೇ ಸಾವಿರ ಗುತ್ತಿಗೆ ನೌಕರರು ಎಐಸಿಸಿಟಿಯು ಸಂಘಟನೆಯಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಈ ಸಂಘಟನೆಯನ್ನು ನಾವು ಗಂಗಾವತಿಯಲ್ಲೂ ಸಕ್ರಿಯಗೊಳಿಸಿದ್ದೇವೆ. ನೌಕರರ ವೇತನ ಹೆಚ್ಚಿಸುವಲ್ಲಿ ನಾವು ಉತ್ತಮ ಸಾಧನೆ ಮಾಡಿರುವ ಹಿನ್ನೆಲೆಯಲ್ಲೇ ಮುಂದಿನ ಹಂತದಲ್ಲಿ ನಾವು ರೂ. 25000/– ನ್ನು ಕನಿಷ್ಠ ವೇತನಕ್ಕಾಗಿ

ಆಗ್ರಹಿಸಲು ನಿರ್ಧರಿಸಿದ್ದು ರಜೆ ಸೌಲಭ್ಯ, ಓವರ್ ಟೈಂ, ಸಾಲಪ್ಪ ಸಮಿತಿ ವರದಿಯ ಅನುಷ್ಠಾನ ಮುಂತಾದ ಬೇಡಿಕೆಗಳಿಗಾಗಿ ಹೋರಾಡಲಿದ್ದೇವೆ.

ಸರ್ಕಾರಿ ಪ್ರಾಯೋಜಿತ ಸ್ವಚ್ಛ ಭಾರತ ಅಭಿಯಾನದ ಹಿನ್ನೆಲೆಯಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸುವ ಗುತ್ತಿಗೆ ಕಾರ್ಮಿಕರ ಚಳುವಳಿ ನಿರ್ಣಾಯಕ ಹಂತವನ್ನು ತಲುಪಿದ್ದು ಒಂದು ಕಾಯಕಲ್ಪಕ್ಕಾಗಿ ಎದುರುನೋಡುತ್ತಿದೆ. ಈ ಹೋರಾಟಕ್ಕೆ ಮರುಹುಟ್ಟು ನೀಡುವ ಅವಶ್ಯಕತೆ ಎದುರಾಗಿದೆ. ಸಾಮಾಜಿಕ ಘನತೆ, ಅಸ್ಪೃಶ್ಯತೆಗೆ ಸಂಬಂಧಿಸಿದ ವಿಚಾರಗಳನ್ನು ಗಂಭೀರವಾಗಿ ಕೈಗೆತ್ತಿಕೊಳ್ಳಬೇಕಿದೆ. ಬಹುಪಾಲು ಸ್ವಚ್ಛತಾ ಸಿಬ್ಬಂದಿ ಮಾದಿಗ ಸಮುದಾಯಕ್ಕೆ ಸೇರಿರುವುದರಿಂದ ಇದು ಅತ್ಯವಶ್ಯ ಎನಿಸುತ್ತದೆ. ಉಚಿತ ವಸತಿ, ಉಚಿತ ಆರೋಗ್ಯ, ಉಚಿತ ಶಿಕ್ಷಣ ಪೌರ ಕಾರ್ಮಿಕರ ಹೋರಾಟದ ಪ್ರಮುಖ ಬೇಡಿಕೆಗಳಾಗಿರುತ್ತವೆ. ಇದರೊಂದಿಗೆ ಸಾಮಾಜಿಕ ಘನತೆ, ಕಾರ್ಯಕ್ಷೇತ್ರದಲ್ಲಿ ಲೈಂಗಿಕ ಕಿರುಕುಳವನ್ನು ತಪ್ಪಿಸುವುದು ನಮ್ಮ ಆದ್ಯತೆಯಾಗಬೇಕಿದೆ. ಈ ನಿಟ್ಟಿನಲ್ಲಿ ಕಾನೂನುಬದ್ಧ ಪರಿಹಾರಗಳನ್ನು ಅರಸುತ್ತಲೇ ಮಹಿಳಾ ಕಾರ್ಮಿಕರ ತಂಡಗಳನ್ನು ಹೋರಾಟಕ್ಕ ಸಜ್ಜಾಗಿಸುವುದು ನಮ್ಮ ಆದ್ಯತೆಯಾಗಬೇಕಿದೆ.

- ನಾವು ಪ್ರಾಮಾಣಿಕ ಪ್ರಯತ್ನ ಮಾಡಿದರೆ ನಮ್ಮ ಸಂಘಟನೆಯನ್ನು ಬಿಬಿಎಂಪಿಯಲ್ಲಿರುವ ಮೂವತ್ತು ಸಾವಿರ ಕಾರ್ಮಿಕರ ಸಕ್ರಿಯವಾಗಿಸಬಹುದು. ಆರಂಭದ ಹೆಜ್ಜೆಯಾಗಿ ಹತ್ತು ಸಾವಿರ ಸದಸ್ಯರನ್ನು ನೋಂದಾಯಿಸುವ ಪ್ರಯತ್ನ ನಡೆಯಬೇಕು. ಇದು ಒಂದು ವರ್ಷದ ಒಳಗೆ ನಡೆಯಬೇಕಿರುವ ಕಾರ್ಯ.
- ಇನ್ನು ಎರಡು ಮೂರು ತಿಂಗಳ ಅವಧಿಯಲ್ಲಿ ರಾಜ್ಯ ಮಟ್ಟದ ಕಾರ್ಮಿಕ ಸಂಘಟನೆಯ ನೋಂದಣಿ ಪಡೆಯಬೇಕು. ಆಗ ರಾಜ್ಯಾದ್ಯಂತ ಸ್ವಚ್ಛತಾ ಸಿಬ್ಬಂದಿಯನ್ನು ಎಐಸಿಸಿಟಿಯು ಸಂಘಟನೆಯಡಿ ಕ್ರೋಢೀಕರಿಸಬಹುದು. ಗುತ್ತಿಗೆ ಸ್ವಚ್ಛತಾ ನೌಕರರ ಬೇಡಿಕೆಗಳಿಗೆ ಸಮರ್ಥವಾಗಿ ಸ್ಪಂದಿಸುವ ಒಂದು ಸಂಘಟನೆಯಾಗಿ ನಾವು ಪ್ರಬಲವಾಗಿ ಬೆಳೆದು ರಾಜ್ಯಾದ್ಯಂತ ವಿಸ್ತರಿಸಬೇಕಿದೆ. ಈ ನಿಟ್ಟಿನಲ್ಲಿ ನಮ್ಮ ಸಂಘಟನೆ ರಾಜ್ಯವ್ಯಾಪಿಯಾಗಿ ವಿಸ್ತರಿಸಲು ನೆರವಾಗುವಂತೆ ಒಂದು ಮೇಲ್ವಿಚಾರಣಾ ತಂಡವನ್ನು ರೂಪಿಸಬೇಕಿದೆ. ನಿಮಗೆಲ್ಲರಿಗೂ ತಿಳಿದಿರುವಂತೆ ಸ್ವಚ್ಛತಾ ಕಾರ್ಮಿಕರ ಅಖಿಲ ಭಾರತ ಸಂಘಟನೆಗಳ ಒಕ್ಕೂಟ ಸ್ಥಾಪಿಸಲು ನಾವು ಸತತವಾಗಿ ಶ್ರಮಿಸುತ್ತಿದ್ದೇವೆ. ಇತರ ನಗರಗಳಲ್ಲಿ ಈ ನಿಟ್ಟಿನಲ್ಲಿ ಸಕ್ರಿಯವಾಗಿರುವ ಸಂಘಟನೆಗಳನ್ನೂ ಈ ಒಕ್ಕೂಟದಲ್ಲಿ ಒಳಗೊಳ್ಳಲಾಗುತ್ತದೆ.

- ರಾಜ್ಯದ ವಿವಿಧ ನಗರಗಳಲ್ಲಿನ ಕಾರ್ಮಿಕರನ್ನು, ಸಂಘಟನೆಗಳನ್ನು ನಮ್ಮ ಸಂಘಟನೆಗೆ ಸೇರ್ಪಡೆ ಮಾಡಲು ರಾಜ್ಯ ಮಟ್ಟದ ತಂಡವೊಂದನ್ನು ರಚಿಸಬೇಕಿದೆ.
- ಈ ರೀತಿಯ ಕಾರ್ಮಿಕ ಸಂಘಟನೆಯ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಲು ಕಾರ್ಯಕರ್ತರ ಪಡೆಯನ್ನು ರೂಪಿಸಬೇಕಿದ್ದು ಇವರಿಗೆ ರಾಜಕೀಯ ತರಬೇತಿ ನೀಡಲು ನಿಯತಕಾಲಿಕವಾಗಿ ಅಧ್ಯಯನ ಶಿಬಿರವನ್ನು ಆಯೋಜಿಸಬೇಕಿದೆ.
- ಚಳುವಳಿಯ ಮುಂಚೂಣಿ ನಾಯಕರನ್ನು ಪಕ್ಷದ ಸದಸ್ಯರನ್ನಾಗಿ ನೇಮಕ ಮಾಡಬೇಕಿದೆ.
- ಪ್ರತಿಯೊಂದು ವಾರ್ಡ್‌ಮಟ್ಟದಲ್ಲೂ ಕಾರ್ಮಿಕ ಸಂಘಟನೆಯ ಕೆಲಸವನ್ನು ಆರಂಭಿಸುವ ಮೂಲಕ ಪಕ್ಷದ ಶಾಖೆಗಳನ್ನು ಎಲ್ಲ ವಸತಿ ಬಡಾವಣೆಗಳಲ್ಲಿ ಆರಂಭಿಸಬೇಕಿದೆ. ಇದು ನಮ್ಮಪಕ್ಷ ಹಾಗೂ ಕಾರ್ಮಿಕ ಸಂಘಟನೆಯ ಕಾರ್ಯನಿರ್ವಹಣೆಗೆ ಕೇಂದ್ರ ಸ್ಥಾನಗಳಾಗುತ್ತವೆ.

**ಇ. ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರೊಡನೆ:**

ಹೆಚ್‌ಎಎಲ್, ಬಿಹೆಚ್‌ಇಎಲ್, ಬೆಂಗಳೂರು ಮತ್ತು ಕೆಜಿಎಫ್‌ನ ಬಿಇಎಂಎಲ್ ಕಂಪನಿಗಳಲ್ಲಿ ದುಡಿಯುವ ಗುತ್ತಿಗೆ ಕಾರ್ಮಿಕರನ್ನು ಸಂಘಟಿಸುವ ನಮ್ಮ ಅನುಭವ ಮಹತ್ವದ್ದಾಗಿದೆ. ಎಐಸಿಸಿಟಿಯು ಸಂಯೋಜಿತ ಕಾರ್ಮಿಕ ಸಂಘಟನೆ ಮಾತ್ರವೇ ಹೆಚ್‌ಎಎಲ್ ಕಂಪನಿಯಲ್ಲಿ ಕಾರ್ಮಿಕರಿಗೆ ಕನಿಷ್ಟ ವೇತನದ ಹಕ್ಕು ಮತ್ತಿತರ ಸೌಲಭ್ಯಗಳನ್ನು ದೊರಕಿಸಿಕೊಡುವಲ್ಲಿ ಯಶಸ್ವಿಯಾಗಿದೆ. ಹೆಚ್‌ಎಎಲ್‌ನಲ್ಲಿ ಗುಲಾಮರಂತೆ ಕಾಣಲ್ಪಡುತ್ತಿದ್ದ ಗುತ್ತಿಗೆ ಕಾರ್ಮಿಕರು ತಮ್ಮ ಉಗ್ರ ಹೋರಾಟಗಳ ಮೂಲಕ ಉತ್ತಮ ಮೂಲ ವೇತನ ಗಳಿಸಿರುವುದೇ ಅಲ್ಲದೆ ತಮ್ಮ ಸಾಮಾಜಿಕ ಘನತೆಯನ್ನೂ ಕಾಪಾಡಿಕೊಂಡು ಬಂದಿದ್ದಾರೆ. ಇಡೀ ಕಾರ್ಖಾನೆಯ ನೌಕರರ ಮುಷ್ಕರ ಮತ್ತು ಹೆಚ್‌ಎಎಲ್ ಮುಖ್ಯ ಕಚೇರಿಗೆ ನಡೆಸಿದ ಪಾದಯಾತ್ರೆ ನಿಜಕ್ಕೂ ಸ್ತುತ್ಯಾರ್ಹ. ಸಾರ್ವಜನಿಕ ಉದ್ದಿಮೆಗಳಲ್ಲಿ ಗುತ್ತಿಗೆ ಕಾರ್ಮಿಕರು ಇಂತಹ ಹೋರಾಟಗಳನ್ನು ನಡೆಸಿರುವ ಸಂದರ್ಭಗಳೇ ಇಲ್ಲ. ಆದರೆ ಒಂದು ಹಂತದಲ್ಲಿ, ಅಂದರೆ ಹತ್ತು ವರ್ಷಗಳ ಮುನ್ನ, ಹೆಚ್‌ಎಎಲ್ ಕಾರ್ಖಾನೆಯಲ್ಲಿ ಖಾಯಂ ನೌಕರರನ್ನು ಪ್ರತಿನಿಧಿಸುವ ಕಾರ್ಮಿಕ ಸಂಘಟನೆಗಳೊಡನೆ ಶಾಮೀಲಾಗಿದ್ದ ಆಡಳಿತ ಮಂಡಲಿ ನಮ್ಮ ಸಂಘಟನೆಗೆ ಬಹಳ ಕಿರುಕುಳ ನೀಡಿದ್ದನ್ನು ಮರೆಯಲಾಗುವುದಿಲ್ಲ. ನಮ್ಮ ಸಂಘಟನೆ ಅಂದು ಎದುರಿಸಿದ ನಷ್ಟದಿಂದ ಹೊರಬಂದಿದೆಯಾದರೂ ಕಾರ್ಮಿಕ ನಾಯಕರು ಇಂದಿಗು

ತಮ್ಮ ನೌಕರಿ ಉಳಿಸಿಕೊಳ್ಳಲು ಕಾನೂನು ಸಂಘರ್ಷದಲ್ಲಿ ತೊಡಗಿದ್ದಾರೆ. ಬಿಹೆಚ್‌ಇಎಲ್ ಕಾರ್ಖಾನೆಯಲ್ಲೂ ಸಹ ಇದೇ ರೀತಿಯ ಘಟನೆಗಳು ಸಂಭವಿಸಿದ್ದು, ಕಾಂಗ್ರೆಸ್ ಬೆಂಬಲ ಇರುವ ಐಎನ್‌ಟಿಯುಸಿ ಕಾರ್ಖಾನೆಯ ಆಡಳಿತ ಮಂಡಲಿ ಮತ್ತು ಖಾಯಂ ನೌಕರರ ಸಂಘಟನೆಗಳೊಡನೆ ಕೈಜೋಡಿಸಿ ನಮ್ಮ ಸಂಘಟನೆಯನ್ನು ಒಡೆಯಲು ಯಶಸ್ವಿಯಾಗಿದ್ದಾರೆ. ಇಲ್ಲಿ ಸಂಘರ್ಷ ಮುಂದುವರೆದಿದೆ. ಕೆಜಿಎಫ್‌ನ ಬಿಇಎಂಎಲ್‌ನಲ್ಲೂ  ನಮ್ಮ ಹೋರಾಟಗಳು ಚಾರಿತ್ರಿಕ ಮಹತ್ವ ಪಡೆದಿವೆ. ನಮ್ಮ ನ್ಯೂನತೆ  ಎಂದರೆ ಆಡಳಿತ ಮಂಡಲಿಯ ಎಲ್ಲರೀತಿಯ ಕಿರುಕುಳಗಳನ್ನೂ ಸಹಿಸಿಕೊಂಡು ಹೋರಾಟದಲ್ಲಿ ತೊಡಗಿಸಿಕೊಳ್ಳುವ ಕಾರ್ಯಕರ್ತರ ಜಾಲವನ್ನು ರೂಪಿಸುವುದರಲ್ಲಿ ವಿಫಲವಾಗಿರುವುದು ಮತ್ತು ನಿಸ್ವಾರ್ಥತೆಯಿಂದ ಕೆಲಸ ಮಾಡುವ ನಾಯಕರನ್ನು ಗುರುತಿಸಲು ಆಗದಿರುವುದು. ಆಡಳಿತ ಮಂಡಲಿಗಳು ಕ್ರೂರ ದಬ್ಬಾಳಿಕೆಗೆ ಮುಂದಾದಾಗ ನಾವು ದಿಟ್ಟ ಉತ್ತರ ನೀಡಿದ್ದೇವೆ. ಆದರೆ ಆಡಳಿತ ಮಂಡಲಿಗಳು ಪಿತೂರಿ ನಡೆಸಿ ವಿಭಜನೆಯ ಮಾರ್ಗ ಅನುಸರಿಸಿದಾಗ ನಾವು ಎದುರಿಸಲು ವಿಫಲರಾಗಿದ್ದೇವೆ. ಏಕೆಂದರೆ ನಮ್ಮ ಕಾರ್ಮಿಕ ಸಂಘಟನೆಗಳು ಮತ್ತು ರಾಜಕೀಯ ಚಟುವಟಿಕೆಗಳ ವಿಸ್ತೃತ ಜಾಲ ಇಲ್ಲವಾಗಿದೆ. ಸಾರ್ವಜನಿಕ ಉದ್ದಿಮೆಗಳಲ್ಲಿ ಕೆಲಸ ಮಾಡುವ ಗುತ್ತಿಗೆ ಕಾರ್ಮಿಕರ ನಡುವೆ ಪ್ರಬಲ ಸಂಘಟನೆಯಾಗಿ ಬೆಳೆಯಲು ನಮ್ಮಲ್ಲಿ ಸಾಕಷ್ಟು ಸಾಮರ್ಥ್ಯವಿದೆ. ಆದರೆ ನಾವು ಈ ಬಗ್ಗೆ  ಹೆಚ್ಚಿನ ಗಮನ ನೀಡಬೇಕಿದೆ.

**ಎಫ್. ರಸ್ತೆ ಬದಿ ವ್ಯಾಪಾರಿಗಳೊಡನೆ:**

ಕರ್ನಾಟಕ ಪ್ರಗತಿಪರ ಬೀದಿ ವ್ಯಾಪಾರಿಗಳ ಸಂಘ ಎಂಬ ಸಂಘಟನೆಯನ್ನು ನಾವು ಸ್ಥಾಪಿಸಿದ್ದೇವೆ.  ಈ ಸಂಘಟನೆಗೆ ರಾಜ್ಯಾದ್ಯಂತ ಬೀದಿ ವ್ಯಾಪಾರಿಗಳಿಗೆ ನೋಂದಣಿ ಮಾಡಲು ಉದ್ದೇಶಿಸಿದ್ದೇವೆ. ಬೆಂಗಳೂರು ಹೊರತುಪಡಿಸಿ ಹಾಸನ ಮತ್ತು  ಕೊಪ್ಪಳ ಜಿಲ್ಲೆಯಲ್ಲಿ ಸಂಘಟನೆಯ ಶಾಖೆಗಳಿವೆ. ಸಮರ್ಥರಾದ ಸಂಗಾತಿಗಳ ನೇತೃತ್ವದಲ್ಲಿ ನಾವು ಬೀದಿ ವ್ಯಾಪಾರಿಗಳ ಒಕ್ಕೂಟವನ್ನೂ ಸ್ಥಾಪಿಸಿದ್ದೇವೆ. ಈ ಹಿಂದೆಯು ಒಕ್ಕೂಟದ ವತಿಯಿಂದ ಹಲವಾರು ಪ್ರಚಾರಾಂದೋಲನಗಳನ್ನು ಹಮ್ಮಿಕೊಂಡಿದ್ದೇವೆ. ಬೀದಿ ವ್ಯಾಪಾರಿಗಳ ಎತ್ತಂಗಡಿಯ ವಿರುದ್ಧ, ಐಡಿ ಕಾರ್ಡ್‌ಗಾಗಿ ಈ ಒಕ್ಕೂಟ ಸಾವಿರಾರು ಸದಸ್ಯರನ್ನು ಕ್ರೋಢೀಕರಿಸಿದೆ. ಅಧಿಕಾರ ದಾಹದ ಕೆಲವೇ ನಾಯಕರಿಂದ ಒಕ್ಕೂಟ ಶಿಥಿಲವಾಗುತ್ತಿದ್ದು ನಾವು ಮೊದಲು ನಮ್ಮದೇ ಕಾರ್ಮಿಕ ಸಂಘಟನೆಗೆ ಸದಸ್ಯರನ್ನು ನೋಂದಾಯಿಸಿ ಒಕ್ಕೂಟವನ್ನು ಸಾಧ್ಯವಾದಷ್ಟು ಬಲಪಡಿಸಬೇಕಿದೆ. ಈ ನಿಟ್ಟಿನಲ್ಲಿ ಎಐಸಿಸಿಟಿಯು ಸಂಘಟನೆಯ ಪ್ರಾದೇಶಿಕ ಸಮಿತಿಗಳನ್ನು ರಚಿಸುವುದು ಮತ್ತು ಸ್ವಚ್ಛತಾ ಕಾರ್ಮಿಕರೊಡನೆ, ಜಲ ಸರಬರಾಜು ಕಾರ್ಮಿಕರೊಡನೆ, ಬೀದಿ

ವ್ಯಾಪಾರಿಗಳೊಡನೆ ಮತ್ತು ಇತರ ಕಾರ್ಮಿಕರೊಡನೆ ಸಮನ್ವಯ ಸಾಧಿಸಬಹುದಾಗಿದೆ.

ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಲಿಯ ಮಾದರಿಯಲ್ಲೇ ಬೀದಿ ವ್ಯಾಪಾರಿಗಳಿಗೂ ಒಂದು ಮಂಡಲಿಯನ್ನು ಸ್ಥಾಪಿಸುವುದು, ಹಾಲಿ ನಡೆಯುತ್ತಿರುವ ಸಮೀಕ್ಷೆಯ ಮುಂದುವರಿಕೆ, ಐಡಿ ಕಾರ್ಡ್ ವಿತರಣೆ, ಅಕ್ರಮ ಎತ್ತಂಗಡಿಯನ್ನು ನಿಲ್ಲಿಸುವುದು, ಬೀದಿ ವ್ಯಾಪಾರಿಗಳನ್ನು ನಗರಗಳ ಹೊರಗೆ ಕಳುಹಿಸುವ ಮತ್ತು ಜನನಿಬಿಡ ಪ್ರದೇಶದಿಂದ ಹೊರಹಾಕುವ ಸರ್ಕಾರದ ಪ್ರಯತ್ನಗಳನ್ನು ತಪ್ಪಿಸಲು ಪರಿಣಾಮಕಾರಿಯಾಗಿ ಶ್ರಮಿಸುವುದು, ಈ ಪ್ರಮುಖ ಬೇಡಿಕೆಗಳನ್ನು ಆಧರಿಸಿಯೇ ರಾಜ್ಯ ಮಟ್ಟದಲ್ಲಿ ಬೀದಿ ವ್ಯಾಪಾರಿಗಳನ್ನು ಕ್ರೋಢೀಕರಿಸಿ ಸಂಘಟಿಸುವುದು ನಮ್ಮ ಆದ್ಯತೆಯಾಗಿರುತ್ತದೆ. ಪ್ರಭುತ್ವ ಮತ್ತು ಬೂರ್ಷ್ವಾ ರಾಜಕಾರಣಿಗಳಿಗೆ ಪ್ರತಿಯಾಗಿ ಬೀದಿ ವ್ಯಾಪಾರಿಗಳನ್ನು ಒಂದು ಸ್ವತಂತ್ರ ರಾಜಕೀಯ ಶಕ್ತಿಯಾಗಿ ಬೆಳೆಸುವದರ ಬಗ್ಗೆ ನಮ್ಮ ಗಮನ ಇರುತ್ತದೆ.

**ಜಿ. ರೆಡಿಮಿಕ್ಸ್ ಕಾರ್ಮಿಕರ ನಡುವೆ:**

ರೆಡಿಮಿಕ್ಸ್ ಕಾರ್ಮಿಕರು, ವಿಶೇಷವಾಗಿ ಆರ್‌ಎಂಸಿ ಕಾರ್ಮಿಕರು ಪಕ್ಷದ ಬೆಳವಣಿಗೆಯಲ್ಲಿ ಬೆನ್ನೆಲುಬಾಗಿದ್ದಾರೆ. ಇತರ ಕಾರ್ಮಿಕರನ್ನು ಸಂಘಟಿಸುವುದರಿಂದ ಹಿಡಿದು ರಾಜಕೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರೆಗೆ ಈ ಕಾರ್ಮಿಕರು ಪಕ್ಷದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿದ್ದು ದಿಟ್ಟತನದಿಂದ, ಉತ್ಸಾಹದಿಂದ ಪಾಲ್ಗೊಂಡಿದ್ದಾರೆ. ಹಣಕಾಸು ಸಂಗ್ರಹಕ್ಕೂ ನೆರವಾಗುತ್ತಿರುವ ಈ ಕಾರ್ಮಿಕರು ಬೆಂಗಳೂರಿನಲ್ಲಿ ಪಕ್ಷದ ವರ್ಚಸ್ಸು ಹೆಚ್ಚಲು ಮೂಲ ಕಾರಣರಾಗಿದ್ದಾರೆ. ನೋಟು ಅಮಾನ್ಯೀಕರಣ ಮತ್ತು ನೂತನ ಔದ್ಯಮಿಕ ಪುನಾರಚನೆಯ ಸಂದರ್ಭದಲ್ಲಿ ಉದ್ಯಮಗಳಲ್ಲಿ  ಹಲವಾರು ಬದಲಾವಣೆಗಳು ಉಂಟಾಗುತ್ತಿದ್ದು ದುಡಿಯುವ ವರ್ಗಗಳ ಹೋರಾಟಗಳು ತೀಕ್ಷ್ಣವಾಗುತ್ತಿವೆ. ಇತ್ತೀಚೆಗೆ ನಾವು ಒಂದು ಕಂಪನಿಯಲ್ಲಿ 37 ದಿನಗಳ ಮುಷ್ಕರ ಹೂಡಬೇಕಾಯಿತು. ಅಂತಿಮವಾಗಿ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಮುಷ್ಕರ ಅಂತ್ಯವಾಯಿತು. ಇಡೀ ಸಂಘರ್ಷಕ್ಕೆ ಕಾರ್ಮಿಕರೇ ನಾಯಕತ್ವ ವಹಿಸಿದ್ದರು. ಅವರ ಸಂಪೂರ್ಣ ಸಾಮರ್ಥ್ಯ ಅಲ್ಲಿ ಪ್ರಕಟಗೊಂಡಿತ್ತು. ಶೇ 65ರಷ್ಟು ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸಿದ, ಎರಡು ಒಪ್ಪಂದಗಳಿಗೆ ಸಹಿ ಹಾಕಿದ ಮತ್ತು ಮೂರನೆಯ ಒಪ್ಪಂದದ ಬಗ್ಗೆ ಮಾತುಕತೆ ನಡೆಸುತ್ತಿರುವ ನಡುವೆಯೇ ಈ ಮುಷ್ಕರ ನಡೆದಿರುವುದು ಗಮನಾರ್ಹ. ನಮ್ಮ ಪ್ರತಿಸ್ಪರ್ಧಿ ಕಾರ್ಮಿಕ ಸಂಘಟನೆಯ ಕಾರ್ಮಿಕ ವಿರೋಧಿ ಧೋರಣೆಯ ಪರಿಣಾಮ ಲಫಾರ್ಗ್ ಕಂಪನಿ ದೊಡ್ಡ ತೊಂದರೆಗೆ ಸಿಲುಕುವುದರಲ್ಲಿತ್ತು. ಆದರೆ

ಅಂತಿಮ ವೇತನ ಒಪ್ಪಂದದ ಮೂಲಕ ಉಳಿಯಲು ಸಾಧ್ಯವಾಯಿತು. ಈಗ ಆರ್‌ಎಂಸಿ ಖಾಯಂ ನೌಕರರು, ಗುತ್ತಿಗೆ ಕಾರ್ಮಿಕರ ಒಪ್ಪಂದಕ್ಕೆ ಸಹಿ ಹಾಕಿದ ನಂತರವೂ, ಹಲವಾರು ತೊಂದರೆಗಳನ್ನು ಎದುರಿಸುತ್ತಿದ್ದು ಎಂದಾದರೂ ಕಾರ್ಮಿಕರ ಆಕ್ರೋಶ ಸ್ಫೋಟಗೊಳ್ಳುವ ಸಾಧ್ಯತೆಗಳಿವೆ.

**ಹೆಚ್. ಮಂಗಳೂರು ಬಂದರು ಕಾರ್ಮಿಕರ ನಡುವೆ:**

ನವ ಮಂಗಳೂರು ಬಂದರು ಟ್ರಸ್ಟ್‌ನಲ್ಲಿ ನೌಕರಿಯಲ್ಲಿರುವ ಒಂದು ಸಾವಿರ ಕಾರ್ಮಿಕರ ನಡುವೆ ಸಂಘಟನೆಯ ಕಾರ್ಯದಲ್ಲಿ ತೊಡಗಿರುವ ಏಕೈಕ ಕಾರ್ಮಿಕ ಸಂಘಟನೆ ನಮ್ಮದಾಗಿದೆ. ಎನ್‌ಎಂಪಿಟಿಯಲ್ಲಿ ನೇರ ನೌಕರಿ ಹೊಂದಿರುವವರ ಸಂಖ್ಯೆ ನೂರಿನ್ನೂರಕ್ಕೆ ಸೀಮಿತವಾಗಿದೆ. ಆದರೆ ನೌಕರರ ವೇತನ ಮತ್ತು ಸೇವಾ ನಿಯಮಗಳ ಬಗ್ಗೆ ಯಾವುದೇ ನಿರ್ದಿಷ್ಟ ಧೋರಣೆ ಕಂಡುಬರುತ್ತಿಲ್ಲ. ಕೇಂದ್ರ ಸರ್ಕಾರದ ಕನಿಷ್ಟ ವೇತನವನ್ನೂ ಪಡೆಯದ ಈ ಕಾರ್ಮಿಕರು ದಿನಕ್ಕೆ 12 ಗಂಟೆಗಳ ಕಾಲ ದುಡಿಯುತ್ತಾರೆ. ಓವರ್ ಟೈಂ ಸೌಲಭ್ಯವೂ ಇಲ್ಲದೆ, ಇಎಸ್‌ಐ ಮತ್ತು ಭವಿಷ್ಯನಿಧಿಯಿಂದ ವಂಚಿತರಾಗಿದ್ದಾರೆ. ಕೇಂದ್ರ ಕಾರ್ಮಿಕ ಆಯುಕ್ತರ ಅಧಿಕಾರ ವ್ಯಾಪ್ತಿ ಪ್ರದೇಶವನ್ನು ನೆಪವಾಗಿಟ್ಟುಕೊಂಡು ಆಡಳಿತ ಮಂಡಲಿ ಯಾವುದೇ ರೀತಿಯ ಪರಿಹಾರ ಮಾರ್ಗಗಳನ್ನು ತಿರಸ್ಕರಿಸಿದೆ. ಈ ಸಮಸ್ಯೆಯನ್ನು ಬಗೆಹರಿಸಲು ಅನೇಕ ಪ್ರತಿಭಟನೆ, ಮುಷ್ಕರ, ಧರಣಿ ನಡೆದಿದ್ದರೂ ಯಾವುದೂ ಪ್ರಯೋಜನವಾಗಿಲ್ಲ. ಎಐಸಿಸಿಟಿಯು ನೇತೃತ್ವದಲ್ಲಿ ನೂರಾರು ಕಾರ್ಮಿಕರು ಮಂಗಳೂರಿನ ಮುಖ್ಯ ಬೀದಿಗಳಲ್ಲಿ ಪ್ರತಿಭಟನೆಯ ಮೆರವಣಿಗೆ ನಡೆಸಿದ್ದು ಹಲವು ಅಧಿಕಾರಿಗಳನ್ನು, ಎನ್‌ಎಂಪಿಟಿ ಅಧ್ಯಕ್ಷರನ್ನು, ಕಾರ್ಮಿಕ ಆಯುಕ್ತರನ್ನು, ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಲಾಗಿದೆ. ಆದರೆ ಯಾವುದೇ ಪರಿಹಾರ ಮಾರ್ಗ ಕಂಡುಬಂದಿಲ್ಲ. ಡೆಲ್ಟಾ ಇನ್‌ಫ್ರಾಲಾಜಿಸ್ಟಿಕ್ಸ್ ಎಂಬ ಒಂದು ಕಂಪನಿಯಲ್ಲಿ ಕಾರ್ಮಿಕರು ಒಂದು ವರ್ಷದಿಂದಲೂ ಮುಷ್ಕರನಿರತರಾಗಿದ್ದಾರೆ. ಹಲವಾರು ಕಾರ್ಮಿಕರಿಗೆ ನೌಕರಿ ನಿರಾಕರಿಸಿ ನಂತರ ಕಾರ್ಮಿಕ ಸಂಘಟನೆಯ ಪರಿಶ್ರಮದಿಂದ ನೌಕರಿ ಮರಳಿಪಡೆದಿದ್ದಾರೆ. ಕಾರ್ಮಿಕರು ಮುಷ್ಕರ ನಡೆಸಿದ್ದು ವಾಹನಗಳ ಚಲನೆಯನ್ನು ತಡೆಯಲು ಚಕ್ರಗಳ ಕೆಳಗೆ ಮಲಗಿ ಪ್ರತಿಭಟಿಸಿದ್ದಾರೆ. ಪರಿಣಾಮ ಕಾರ್ಮಿಕರ ವಿರುದ್ಧ ಸುಳ್ಳು ಮೊಕದ್ದಮೆಗಳನ್ನು ಹೂಡಲಾಗಿದ್ದು, ಅಕ್ರಮವಾಗಿ ವರ್ಗಾವಣೆ ಮಾಡಲಾಗುತ್ತಿದೆ. ಘಟಕದ ಅಧ್ಯಕ್ಷ ಕಾಂ ಮೋಹನ್ ಅವರನ್ನು ವಜಾ ಮಾಡಲಾಗಿದೆ. ಕಾರ್ಮಿಕ ಸಂಘಟನೆಯನ್ನು ತೊರೆಯುವಂತೆ ಒತ್ತಡ ಹೇರಲು ಗೂಂಡಾಗಳಿಂದ ಬೆದರಿಕೆ ಒಡ್ಡಲಾಗಿದ್ದು ನೌಕರರನ್ನು ಬೆದರಿಸಲು ಪೊಲೀಸ್ ಅಧಿಕಾರಿಗಳನ್ನು ಬಳಸಲಾಗಿದೆ. ಆದರೆ ಈ ಎಲ್ಲ ಬೆದರಿಕೆ ಒತ್ತಡಗಳನ್ನು ಸಮರ್ಥವಾಗಿ ಎದುರಿಸಿರುವ ದಿಟ್ಟ

ಕಾರ್ಮಿಕರು ತಮ್ಮ ಹೋರಾಟವನ್ನು ಮುಂದುವರೆಸಿದ್ದಾರೆ. ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಕಾರ್ಮಿಕರು ಶೀಘ್ರದಲ್ಲೇ ಬೃಹತ್ ಹೋರಾಟ ರೂಪಿಸಲು ಸಜ್ಜಾಗುತ್ತಿದ್ದಾರೆ.

**ಐ.** ಒಟ್ಟಾರೆ ಹೇಳುವುದಾದರೆ ಎಐಸಿಸಿಟಿಯು ಕರ್ನಾಟಕದಲ್ಲಿ ಒಂದು ಮಹತ್ತರವಾದ ಹೆಜ್ಜೆ ಇಟ್ಟಿದ್ದು ಪ್ರಮುಖ ಕಾರ್ಮಿಕ ಸಂಘಟನೆಯಾಗಿ ಹೊರಹೊಮ್ಮಿದೆ. ಆದರೆ ಬೆಂಗಳೂರನ್ನು ಹೊರತುಪಡಿಸಿ, ಕೊಂಚಮಟ್ಟಿಗೆ ಮಂಗಳೂರನ್ನು ಹೊರತುಪಡಿಸಿ ಇತರೆಡೆ ಜಿಲ್ಲಾ ಮತ್ತು ರಾಜ್ಯ ಸಮಿತಿಗಳು ರಚಿಸಲು ಸಾಧ್ಯವಾಗಿಲ್ಲ. ಇಂತಹ ಸಮಿತಿಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುವುದು ತುರ್ತು ಅಗತ್ಯತೆಯಾಗಿದೆ. ಕಾರ್ಮಿಕ ಸಂಘಟನೆಗಳನ್ನು ಎಐಸಿಸಿಟಿಯು ಸಂಘಟನೆಯ ಒಂದು ಅಂಶಿಕ ಭಾಗದಂತೆ ನೋಡದೆ ಪ್ರತ್ಯೇಕವಾಗಿ ಪರಿಗಣಿಸುವುದರಿಂದ ನಮ್ಮ ಐಕ್ಯತೆಗೆ ಧಕ್ಕೆ ಉಂಟಾಗಿದ್ದು, ಸಂಘಟನೆ ಮತ್ತು ನಾಯಕತ್ವದ ಬೆಳವಣಿಗೆಯಲ್ಲಿ ಪ್ರತ್ಯೇಕ ಸಂಘಟನೆಗಳು ಕೇವಲ ಪ್ರೇಕ್ಷಕರಂತೆ ಕಾಣುತ್ತಿವೆ. ಇದರಿಂದ ಸಂಘಟನೆಯ ಐಕಮತ್ಯಕ್ಕೂ ಧಕ್ಕೆ ಉಂಟಾಗಿದೆ. ಕಾರ್ಮಿಕ ಸಂಘಟನೆಗಳನ್ನು ಮುನ್ನಡೆಸಲು ಕಾರ್ಮಿಕರು ಸ್ವ ಇಚ್ಚೆಯಿಂದ ಹೆಗಲು ನೀಡಲು ಮುಂದಾದಲ್ಲಿ ಎಐಸಿಸಿಟಿಯು ಪ್ರಬಲವಾಗಿ ಬೆಳೆಯುತ್ತದೆ. ಇಲ್ಲವಾದಲ್ಲಿ ಸಮರ್ಥವಾದ ನಿರ್ಣಯಗಳನ್ನು ಕೈಗೊಳ್ಳುವ ಜವಾಬ್ದಾರಿ ಕೆಲವೇ ವ್ಯಕ್ತಿಗಳ ಜವಾಬ್ದಾರಿಯಾಗುತ್ತದೆ. ಇದರಿಂದ ಅಧಿಕಾರಶಾಹಿ ಮನೋಭಾವ ಹೆಚ್ಚಾಗುವ ಸಾಧ್ಯತೆಗಳಿವೆ. ಕಾರ್ಮಿಕ ಸಂಘಟನೆಗಳಲ್ಲಿ ಪ್ರಜಾತಂತ್ರ ಮೌಲ್ಯಗಳನ್ನು ಅಳವಡಿಸಬೇಕೆಂದರೆ ಕಾರ್ಮಿಕ ನಾಯಕರು ಸಂಘಟನೆಯ ತಂತ್ರಗಾರಿಕೆಯನ್ನು ಗ್ರಹಿಸುವುದು ಅಗತ್ಯ ಹಾಗೆಯೇ ಕಾನೂನು ಸಮಸ್ಯೆಗಲ ಗ್ರಹಿಕೆಯೂ ಅಗತ್ಯ. ಕಾರ್ಮಿಕ ಚಳುವಳಿಯಲ್ಲಿ ಶಿಕ್ಷಣ ಮಹತ್ವದ ಪಾತ್ರ ವಹಿಸುತ್ತದೆ. ಹಾಗಾದಲ್ಲಿ ಮಾತ್ರವೇ ಕಾರ್ಮಿಕರು ಸಮಾಜವಾದಿ ರಾಜಕಾರಣವನ್ನು ಗ್ರಹಿಸಿ ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಕಾನೂನು ವಿಚಾರಗಳು, ಕಾರ್ಮಿಕ ಹೋರಾಟದ ತಂತ್ರಗಳು ಮತ್ತು ವರ್ಗ ಸಂಘರ್ಷದ ವಿಭಿನ್ನ ಆಯಾಮಗಳನ್ನು ಕಾರ್ಮಿಕರ ಶಿಕ್ಷಣ ಶಿಬಿರಗಳಲ್ಲಿ ಅಳವಡಿಸುವ ಮೂಲಕ ನಮ್ಮ ಸಂಘಟನೆಯ ಸದಸ್ಯತ್ವವನ್ನು ಹೆಚ್ಚಿಸಬೇಕಿದೆ.

**ಜೆ.** ಕಾರ್ಮಿಕರ ಬೇಡಿಕೆಯ ಸನ್ನದು ಸಿದ್ಧಪಡಿಸಿ ನಮ್ಮ ಧ್ಯೇಯ ಸಾಧನೆಯ ದೃಷ್ಟಿಯಿಂದ ಫೆಬ್ರವರಿ 2018ರಲ್ಲಿ ರಾಜ್ಯ ಮಟ್ಟದ ರ್‍ಯಾಲಿ ಆಯೋಜಿಸಬೇಕು. (2) 2018ರ ಮೂರನೆಯ ತ್ರೈಮಾಸಿಕದಲ್ಲಿ ಎಐಸಿಸಿಟಿಯು ರಾಜ್ಯ ಸಮ್ಮೇಳನ ಹಮ್ಮಿಕೊಳ್ಳಬೇಕು. (3) ರಾಜ್ಯ ಮಟ್ಟದ ಕಾರ್ಯಕರ್ತರ

ಸಭೆಯನ್ನು ಏರ್ಪಡಿಸುವ ಮೂಲಕ ಜನವರಿ 2018ರಲ್ಲಿ ರಾಜ್ಯ ಸಮಿತಿಯನ್ನು ಪುನಾರಚನೆ ಮಾಡಬೇಕು ಮತ್ತು ಪ್ರಚಾರ ಹಾಗೂ ಮೆರವಣಿಗೆಯ ಉಸ್ತುವಾರಿ ರಾಜ್ಯ ಸಮಿತಿಗೆ ನೀಡಬೇಕು.(4) ಫೆಬ್ರವರಿ ಅಥವಾ ಮಾರ್ಚ್ 2018ರಲ್ಲಿ ಕಾರ್ಮಿಕ ಸಂಘಟನೆಯ ಶಿಬಿರವನ್ನು ಏರ್ಪಡಿಸಿ ರಾಜ್ಯ ಸಮಾವೇಶದ ಅಂತಿಮ ತೀರ್ಮಾನ ಕೈಗೊಳ್ಳಬೇಕು. (5) ಎಐಸಿಸಿಟಿಯು ಸಂಘಟನೆಯಲ್ಲಿ ರಾಜ್ಯ ಪಕ್ಷದ ತಂಡಗಳನ್ನು ರಚಿಸಿ, ಪ್ರಮುಖ ಉದ್ದಿಮೆಗಳಲ್ಲಿ, ಸ್ವಚ್ಚತಾ ಕಾರ್ಮಿಕರ ನಡುವೆ, ಜಲಮಂಡಲಿ ಕಾರ್ಮಿಕರ ನಡುವೆ, ಬೀದಿ ವ್ಯಾಪಾರಿಗಳ ನಡುವೆ, ರೆಡಿಮಿಕ್ಸ್ ಮತ್ತು ಗುತ್ತಿಗೆ ಕಾರ್ಮಿಕರ ನಡುವೆ ತಂಡಗಳನ್ನು ರಚಿಸಬೇಕು. ಇದರಿಂದ ಈ ಸಂಘಟನೆಗಳು ರಾಜ್ಯವ್ಯಾಪಿ ವಿಸ್ತರಿಸುವುದು ಸುಲಭವಾಗುತ್ತದೆ. (6) ನಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸುವ ಮೂಲಕ ರೈಲ್ವೆ, ಆಸ್ಪತ್ರೆ, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರ ನಡುವೆ ಸಂಘಟನೆಯನ್ನು ವಿಸ್ತರಿಸಬೇಕು. (7) ಬೃಹತ್ ಸಾರ್ವಜನಿಕ ಉದ್ದಿಮೆಗಳಲ್ಲೂ ಎಐಸಿಸಿಟಿಯು ತಂಡಗಳನ್ನು ರೂಪಿಸುವ ಮೂಲಕ ಕಾರ್ಮಿಕರಲ್ಲಿ ರಾಜಕೀಯ ಪ್ರಜ್ಞೆ ಮೂಡಿಸಿ ನಮ್ಮ ಸಂಘಟನೆಯನ್ನು ಸ್ಥಾಪಿಸಲು ಯತ್ನಿಸಬೇಕು.

**5. ನಗರ ಪ್ರದೇಶಗಳಲ್ಲಿ**

ರಾಷ್ಟ್ರಮಟ್ಟದಲ್ಲಿ ನಮ್ಮ ಪಕ್ಷವನ್ನು ಗ್ರಾಮ ಕೇಂದ್ರಿತ ಪಕ್ಷ ಎಂದೇ ಗುರುತಿಸಲಾಗುತ್ತದೆ. ಬದಲಾದ ಸಂದರ್ಭದಲ್ಲಿ ಹಾಗೂ ಬಂಡವಾಳ ವ್ಯವಸ್ಥೆಯಲ್ಲಿ ಉಂಟಾಗುತ್ತಿರುವ ಬದಲಾವಣೆಗಳ ಹಿನ್ನೆಲೆಯಲ್ಲಿ ನಗರ ಪ್ರದೇಶಗಳಲ್ಲಿ ಪಕ್ಷದ ಚಟುವಟಿಕೆಯು ಮಹತ್ವ ಪಡೆಯುತ್ತದೆ. ನಗರ ಪ್ರದೇಶಗಳಲ್ಲಿನ ಕ್ರಾಂತಿಕಾರಿ ಚಟುವಟಿಕೆಗಳಿಗೆ ನಗರದ ಬಡ ಜನತೆ ಮತ್ತು ಸಾಂಪ್ರದಾಯಿಕ ದುಡಿಯುವ ವರ್ಗಗಳೇ ಉತ್ತೇಜಕರಾಗಿರುತ್ತಾರೆ. ನಗರ ಪ್ರದೇಶಗಳಲ್ಲಿ ನಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಲು ನಾವು ಸ್ಪಷ್ಟ ಯೋಜನೆಯನ್ನು ಹೊಂದಿರಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಮ್ಮ ಪಕ್ಷದ ನೀತಿ ದಸ್ತಾವೇಜು ಉಪಯುಕ್ತವಾಗಿದೆ. ಇತ್ತೀಚಿನ ಮಾರ್ಕ್ಸ್‌ವಾದಿ ಭಾಷೆಯಲ್ಲಿ ಹೇಳುವುದಾದರೆ ಅಂಚಿನಲ್ಲಿರುವ ನಿರ್ಲಕ್ಷಿತ ಕಾರ್ಮಿಕರು ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಮಹತ್ತರ ಪಾತ್ರ ವಹಿಸಬೇಕಿದೆ.

ಎ. ನಗರ ಪ್ರದೇಶಗಳಲ್ಲಿ ದುಡಿಯುವ ವರ್ಗಗಳ ಅನೇಕ ಪ್ರವರ್ಗಗಳು, ನಗರದ ಬಡ ಜನತೆ, ಕೆಳ ಮಧ್ಯಮವರ್ಗ ಕ್ರಾಂತಿಯ ಪ್ರೇರಕ ಶಕ್ತಿಯಾಗುತ್ತಾರೆ. ಈ ವರ್ಗಗಳ ಹೋರಾಟದೊಡನೆ ವಿದ್ಯಾರ್ಥಿ, ಯುವಜನತೆ ಮತ್ತು ಮಹಿಳೆಯರನ್ನು ಸಮೀಕರಿಸಬೇಕಾಗುತ್ತದೆ. ಮಧ್ಯಮ ವರ್ಗಗಳಲ್ಲಿನ ಮಧ್ಯಮ

ಹಂತದ ಜನರು ಮತ್ತು ಮೇಲ್ ಮಧ್ಯಮ ವರ್ಗದ ಕೆಲವರನ್ನು ಕ್ರಾಂತಿಕಾರಿ ಹೋರಾಟಗಳಲ್ಲಿ ತೊಡಗಿಸಿಕೊಳ್ಳಬಹುದು.

ಬಿ. **ಬೇಡಿಕೆಗಳ ಸನ್ನದು:**

1. ಕಾರ್ಪೋರೇಟ್ ಕೇಂದ್ರಿತ, ಜನ ವಿರೋಧಿ ಸುಧಾರಣಾ ಕ್ರಮಗಳನ್ನು ಕೈಬಿಟ್ಟು ಜನಪರ ಸುಧಾರಣೆಗಳನ್ನು ಜಾರಿಗೆ ತನ್ನಿ.
2. ಸರ್ಕಾರದ ಶೇ 70ರಷ್ಟು ವೆಚ್ಚವನ್ನು ನಗರದ ಬಡಜನತೆಗೆ ಮೂಲ ಸೌಕರ್ಯಗಳಿಗಾಗಿ ವ್ಯಯಿಸಿ.
3. ಕೊಳೆಗೇರಿಗಳನ್ನು ಧ್ವಂಸ ಮಾಡುವುದನ್ನು ನಿಲ್ಲಿಸಿ ಐದು ವರ್ಷಕ್ಕೂ ಹೆಚ್ಚು ಕಾಲ ಕೊಳೆಗೇರಿಯಲ್ಲಿ ನೆಲೆಸಿರುವವರಿಗೆ ಖಾಯಂ ವಸತಿ ಕಲ್ಪಿಸಿ.
4. ಎಲ್ಲ ವಸತಿಹೀನರಿಗೆ, ವಲಸೆ ಕಾರ್ಮಿಕರಿಗೆ ವಸತಿ ಸೌಲಭ್ಯ ಕಲ್ಪಿಸಿ.
5. ಬಂಡವಾಳ ಪ್ರೇರಿತ ಮತ್ತು ಉದ್ಯೋಗ ರಹಿತ ಉದ್ಯಮಗಳನ್ನು ಮುನ್ನಡೆಸುವ ಬದಲು ಉದ್ಯೋಗ ಸೃಷ್ಟಿಸುವ, ಕಾರ್ಮಿಕ ಕೇಂದ್ರಿತ ಉದ್ಯಮಗಳನ್ನು ಆರಂಭಿಸಿ. ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಮತ್ತು ಖಾಸಗಿ ಕ್ಷೇತ್ರದಲ್ಲಿರುವ ಗುತ್ತಿಗೆ ಕಾರ್ಮಿಕರಿಗೆ ಖಾಯಂ ನೌಕರಿ ನೀಡಿ
6. ಎಲ್ಲರಿಗೂ ಉಚಿತ ಕುಡಿಯುವ ನೀರು ಮತ್ತು ಕೊಳೆಗೇರಿಗಳಿಗೆ ಉಚಿತ ವಿದ್ಯುತ್ ಸೌಕರ್ಯ ನೀಡಿ.
7. ನಗರದ ಸಮಸ್ತ ಜನತೆಗೆ ಲಭ್ಯವಾಗುವಂತೆ ಖಾಸಗಿ ಮತ್ತು ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಿ.
8. ಅಗ್ಗದ ದರದಲ್ಲಿ ಎಲ್ಲರಿಗೂ ಸಾರಿಗೆ ವ್ಯವಸ್ಥೆ ಕಲ್ಪಿಸಿ.
9. ನಗರಗಳ ಅಭಿವೃದ್ಧಿಯ ಮೇಲೆ ಸ್ಥಳೀಯ ಅಧಿಕಾರ ಕೇಂದ್ರಗಳು ಹೆಚ್ಚಿನ ನಿಯಂತ್ರಣ ಹೊಂದಿರುವ ನಿಟ್ಟಿನಲ್ಲಿ ನಗರ ಪ್ರದೇಶಗಳಲ್ಲಿ ಪ್ರಜಾತಂತ್ರ ಮೌಲ್ಯಗಳಿಗೆ ಹೆಚ್ಚಿನ ಗಮನ ನೀಡಿ. ಸಿಇಓ ನೇತೃತ್ವದ ಅಭಿವೃದ್ಧಿ ಮತ್ತು ವಾಣಿಜ್ಯೀಕರಣವನ್ನು ರದ್ದುಪಡಿಸಿ.
10. ಆಡಳಿತ ವ್ಯವಸ್ಥೆಯ ಖಾಸಗೀಕರಣವನ್ನು ಕೈಬಿಟ್ಟು ಪ್ರಜಾತಂತ್ರ ಮೌಲ್ಯಗಳನ್ನು ರಕ್ಷಿಸಿ.
11. ಎಲ್ಲರಿಗೂ ಕಡ್ಡಾಯ ಉಚಿತ ಶಿಕ್ಷಣ ನೀಡಿ.

12. ಮಹಿಳೆಯರ ಘನತೆಯನ್ನು ರಕ್ಷಿಸುವ ಮೂಲಕ ಉತ್ತಮ ಸೌಹಾರ್ದಯುತ ಕಾರ್ಯಕ್ಷೇತ್ರವನ್ನು ಕಾಪಾಡಿ.
13. ಬಿಪಿಎಲ್ ಪಟ್ಟಿಯಲ್ಲಿ ನಗರದ ಎಲ್ಲ ಬಡ ಜನತೆ ಮತ್ತು ಅಸಂಘಟಿತ ಕಾರ್ಮಿಕರನ್ನು ಸೇರಿಸಿ.
14. ಉದ್ಯೋಗ ಖಾತರಿ ಯೋಜನೆಯ ರೀತಿಯಲ್ಲಿ ಎಲ್ಲರಿಗೂ ಉದ್ಯೋಗ ನೀಡಿ.
15. ವೇತನದ ಗರಿಷ್ಟ ಮಿತಿ ನಿಗದಿಪಡಿಸಿ ಎಲ್ಲರಿಗೂ ಕನಿಷ್ಟ ವೇತನ ನೀಡುವ ನೀತಿ ರೂಪಿಸಿ.
16. ಎಲ್ಲ ವಲಸೆ ಕಾರ್ಮಿಕರಿಗೆ ಮತದಾನದ ಚೀಟಿ ಮತ್ತು ಪಡಿತರ ಚೀಟಿ ನೀಡಿ.
17. ನಗರ ಭೂ ಮಿತಿ ಕಾಯ್ದೆಗೆ ತಿದ್ದುಪಡಿ ಮಾಡಿ ರಿಯಲ್ ಎಸ್ಟೇಟ್ ಮಾಫಿಯಾದ ಅತಿಕ್ರಮಣವನ್ನು ನಿಲ್ಲಿಸಿ. ವಿಶೇಷ ಆರ್ಥಿಕವಲಯದ ರೀತಿಯಲ್ಲಿ ಭೂ ಕಬಳಿಕೆ ಮಾಡುತ್ತಿರುವ ಕಾರ್ಪೋರೇಟ್ ಉದ್ಯಮಿಗಳನ್ನು ನಿಯಂತ್ರಿಸಿ.

## 6. ಮಹಿಳೆಯರ ನಡುವೆ ನಡೆಯುವ ಚಟುವಟಿಕೆಗಳು ಮತ್ತು ಎಐಪಿಡಬ್ಲ್ಯುಎ

ದೀರ್ಘ ಕಾಲ ಮಹಿಳಾ ಚಳುವಳಿಗಳು ಮಧ್ಯಮ ವರ್ಗದ ಮಹಿಳೆಯರಿಗೆ ಸೀಮಿತವಾಗಿದ್ದವು. ಆದರೆ ನಮ್ಮ ಅಂದೋಲನಗಳು ಸದಾ ದುಡಿಯುವ ವರ್ಗಗಳು ಮತ್ತು ಗ್ರಾಮೀಣ ಬಡಜನತೆಯನ್ನೇ ಅವಲಂಬಿಸಿದೆ. ಪಿತೃಪ್ರಧಾನ ವ್ಯವಸ್ಥೆ, ಊಳಿಗಮಾನ್ಯ ಮೌಲ್ಯಗಳು, ಪುರುಷಾಭಿಮಾನ ಮತ್ತು ಪುರುಷಾಧಿಪತ್ಯದ ವಿರುದ್ಧ ಹೋರಾಡುತ್ತಿರುವ ನಮ್ಮ ಪಕ್ಷ ಮಹಿಳೆಯರ ಹಕ್ಕೊತ್ತಾಯಗಳಿಗಾಗಿಯೇ ಶ್ರಮಿಸುತ್ತಿದೆ. ಮಹಿಳೆಯರಿಗೆ ಸಮಾನ ವೇತನ ಮಾತ್ರವೇ ಅಲ್ಲದೆ ಸಮಾನ ಹಕ್ಕುಗಳು ಮತ್ತು ಘನತೆಗಾಗಿಯೂ ಹೋರಾಡುತ್ತಿದ್ದೇವೆ. ಮಹಿಳೆಯರಿಗೆ ಸಮಾನತೆಯನ್ನು ಪ್ರತಿಪಾದಿಸುವ ಸಮಾಜ ನಿರ್ಮಾಣಕ್ಕಾಗಿ ಮಹಿಳಾ ಚಳುವಳಿ ಶ್ರಮಿಸುತ್ತದೆ. ಶಾಸನ ಸಭೆಗಳಲ್ಲಿ ಶೇ 33ರಷ್ಟು ಮೀಸಲಾತಿ, ಮಹಿಳಾ ಆಯೋಗಗಳಲ್ಲಿ ಪ್ರಾತಿನಿಧ್ಯ, ಆಸ್ತಿಯ ಹಕ್ಕು, ಶಿಕ್ಷಣ ಮತ್ತು ಆರೋಗ್ಯದ ಹಕ್ಕು ಇವೆಲ್ಲವೂ ಮಹಿಳಾ ಚಳುವಳಿಗಳ ಆದ್ಯತೆಗಳಾಗಿವೆ. ಬಲಪಂಥೀಯ ಸಂಘಟನೆಗಳು ಪ್ರಬಲವಾಗುತ್ತಿರುವ ಸಂದರ್ಭದಲ್ಲಿ ಭೀತಿ ಇಲ್ಲದ ಸ್ವಾತಂತ್ರ್ಯಕ್ಕಾಗಿ ಆಗ್ರಹ ಹೆಚ್ಚಾಗುತ್ತಿದ್ದು ಜನಪ್ರಿಯವೂ ಆಗುತ್ತಿದೆ. ಸಾಂಸ್ಕೃತಿಕ ಆರಕ್ಷಣೆಯ ವಿರುದ್ಧ, ವಸ್ತ್ರ ಸಂಹಿತೆಯ ವಿರುದ್ಧ, ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣದಿಂದ ವಂಚನೆ, ಸಂಗಾತಿಯನ್ನು ಆಯ್ಕೆ ಮಾಡುವ ಹಕ್ಕುಗಳ ಚ್ಯುತಿ, ತೃತೀಯ ಲಿಂಗಿಗಳಿಗೆ ಸಮಾನ ಅವಕಾಶಗಳು, ಮಹಿಳೆಯರಿಗೆ ಸಮಾನ

ಅವಕಾಶಗಳನ್ನು ನೀಡುವ ಮೂಲಕ ಎಲ್ಲ ಕ್ಷೇತ್ರಗಳಲ್ಲೂ ಸಮಾನತೆಯನ್ನು ಸಾಧಿಸುವ ಅವಕಾಶ ಹೀಗೆ ಹಲವು ಬೇಡಿಕೆಗಳ ನೆಲೆಯಲ್ಲಿ ಮಹಿಳಾ ಚಳುವಳಿ ಮುನ್ನಡೆಯುತ್ತಿದೆ. ಬಲಪಂಥೀಯ ಧೋರಣೆ ಮತ್ತು ಪ್ರವೃತ್ತಿ ಹೆಚ್ಚು ಜನಪ್ರಿಯವಾಗುತ್ತಿರುವ ಸಂದರ್ಭದಲ್ಲಿ ಬೆಂಗಳೂರು , ಮಂಗಳೂರು ಮತ್ತಿತರ ನಗರಗಳಲ್ಲಿ ಒಂದು ಕ್ರಿಯಾಶೀಲ ಮಹಿಳಾ ಸಂಘಟನೆಯ ಅವಶ್ಯಕತೆ ಹೆಚ್ಚಾಗಿದೆ. ಎಐಪಿಡಬ್ಲ್ಯುಎ ಸಂಘಟನೆಯ ಇತಿಮಿತಿಗಳ ನಡುವೆಯೂ ಡಿಸೆಂಬರ್ 2010ರಲ್ಲಿ ನಮ್ಮ ಪಕ್ಷದ ವತಿಯಿಂದ ಕೃಷಿಕ ಮಹಿಳೆಯರ ರಾಜ್ಯ ಸಮ್ಮೇಳನವನ್ನು ಆಯೋಜಿಸಲಾಗಿತ್ತು. ಕವಿತಾ ಕೃಷ್ಣನ್ ಮುಖ್ಯ ಅತಿಥಿಯಾಗಿದ್ದರು. ಶ್ರೀಲತಾ ಸ್ವಾಮಿನಾಥನ್ ಮಧ್ಯಮ ವರ್ಗದ ಮಹಿಳಾ ಕಾರ್ಯಕರ್ತೆಯರನ್ನು ಮತ್ತು ಕೃಷಿ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದ್ದರು.

ಮಹಿಳಾ ಸಂಗಾತಿಗಳ ಮುಂಚೂಣಿ ತಂಡ ಇಲ್ಲದಿರುವುದರಿಂದ ನಮ್ಮ ಪಕ್ಷದ ಮಹಿಳಾ ಸಂಘಟನೆ ಕರ್ನಾಟಕದಲ್ಲಿ ಬೆಳೆಯಲು ಸಾಧ್ಯವಾಗಿಲ್ಲ. ನಮ್ಮ ಕಾರ್ಮಿಕ ಸಂಘಟನೆ ಮತ್ತು ಕೃಷಿ ಕಾರ್ಮಿಕರ ಹೋರಾಟಗಲಲ್ಲಿ ಸಾವಿರಾರು ಮಹಿಳೆಯರು ಭಾಗಿಯಾಗುವುದನ್ನು ನೋಡುತ್ತಿದ್ದೇವೆ. ಆದರೆ ಅವರಲ್ಲಿ ಪಕ್ಷದ ಸದಸ್ಯರನ್ನು ರೂಪಿಸುವಲ್ಲಿ ವಿಫಲರಾಗಿದ್ದೇವೆ. ಮಹಿಳೆಯರ ಹಕ್ಕುಗಳನ್ನು ಕಸಿದುಕೊಳ್ಳುವ ಪುರುಷ ಪ್ರಧಾನ ಸಮಾಜದ ವಿರುದ್ಧ ಮಹಿಳೆಯರಲ್ಲಿ ರಾಜಕೀಯ ಪ್ರಜ್ಞೆ ಬೆಳೆಸಲು ವಿಫಲರಾಗಿದ್ದೇವೆ. ನಮ್ಮ ವಿದ್ಯಾರ್ಥಿ ಸಂಘಟನೆಗಳಲ್ಲಿ ಅನೇಕ ಯುವತಿಯರು ಸಕ್ರಿಯವಾಗಿದ್ದಾರೆ ಆದರೆ ಅವರನ್ನು ಮಹಿಳಾ ಸಂಘಟನೆಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದು ನಮ್ಮ ಮೂಲ ನ್ಯೂನತೆಯಾಗಿದ್ದು ಕರ್ನಾಟಕದಲ್ಲಿ ಎಐಪಿಡಬ್ಲ್ಯುಎ ಸಂಘಟನೆಯ ಮುನ್ನಡೆಗೆ ಬದ್ಧರಾದ ಮಹಿಳಾ ತಂಡಗಳ ಅವಶ್ಯಕತೆ ಹೆಚ್ಚಾಗಿದೆ. ಇಡೀ ಪಕ್ಷವೇ ಈ ಕಾರ್ಯಸೂಚಿಯನ್ನು ಸಾಧಿಸಲು ಶ್ರಮಿಸಬೇಕಿದೆ. ಕರ್ನಾಟಕದಲ್ಲಿ ಪ್ರಬಲ ಕ್ರಿಯಾಶೀಲ ಮಹಿಳಾ ಸಂಘಟನೆಯ ಕೊರತೆಯನ್ನು ನೀಗಿಸಬೇಕಿದೆ. ಇದನ್ನು ಸಾಧಿಸಲು ಪಕ್ಷದಲ್ಲಿ ಸೈದ್ಧಾಂತಿಕ ಸಂಘರ್ಷವೂ ಅಗತ್ಯವಾಗಿದೆ. ಪಕ್ಷದಲ್ಲಿ ಅಂತರಿಕವಾಗಿ ಮಹಿಳೆಯರ ಬಗ್ಗೆ ಇರುವ ಊಳಿಗಮಾನ್ಯ ಧೋರಣೆಯನ್ನು ಬದಲಿಸಲು ಶ್ರಮಿಸಬೇಕಿದೆ.

## 7. ಎಐಎಸ್ಎ ಮತ್ತು ಆರ್‌ವೈಎ ಸಂಘಟನೆಗಳು– ವಿದ್ಯಾರ್ಥಿ ಯುವಜನರ ನಡುವೆ ನಡೆಯುವ ಚಟುವಟಿಕೆಗಳು

ನಮ್ಮ ವಿದ್ಯಾರ್ಥಿ ಸಂಘಟನೆ ಅಖಿಲ ಭಾರತ ವಿದ್ಯಾರ್ಥಿ ಸಂಘಟನೆ (ಐಸಾ) ಉತ್ತಮ ಆರಂಭ ಕಂಡಿದ್ದು ದಾವಣಗೆರೆ, ಕೊಟ್ಟೂರು, ಜಗಳೂರು, ಹರಪನಹಳ್ಳಿ, ಬೆಂಗಳೂರು ಮತ್ತು ಚಿಕ್ಕಬಳ್ಳಾಪುರದಲ್ಲಿ ಉತ್ತಮ ಸ್ಪಂದನೆಯನ್ನೂ

ಗಳಿಸಿದೆ. ಒಂದು ಸಂದರ್ಭದಲ್ಲಿ ದಾವಣಗೆರೆಯಲ್ಲಿ 1000 ವಿದ್ಯಾರ್ಥಿಗಳ ರ‍್ಯಾಲಿ ನಡೆಸಿದ್ದೇವೆ. ನಂತರದಲ್ಲಿ ರಾಜ್ಯಾದ್ಯಂತ ಸಂಘಟನೆಯನ್ನು ವಿಸ್ತರಿಸುವ ಪ್ರಯತ್ನಗಳಿಗೂ ಚಾಲನೆ ದೊರೆತಿತ್ತು. ಆದರೆ ಪಕ್ಷದ ಅಂತರಿಕ ವೈರುಧ್ಯಗಳು ಹಾಗು ದಾವಣಗೆರೆಯಲ್ಲಿ ಉದ್ಭವಿಸಿದ ಕೆಲವು ಕ್ಷುಲ್ಲಕ ಕಾರಣಗಳ ಪರಿಣಾಮ ನಮ್ಮ ಪ್ರಯತ್ನಗಳೆಲ್ಲವೂ ವಿಫಲವಾದವು. ಅವರದೇ ಕಾರಣಗಳಿಗಾಗ ಬದ್ಧತೆ ಪ್ರದರ್ಶಿಸದ ನಮ್ಮ ವಿದ್ಯಾರ್ಥಿ ಸಂಗಾತಿಗಳಲ್ಲಿ ಸ್ಥಿರತೆ ಇಲ್ಲದಿದ್ದುದು ಇದಕ್ಕೆ ಕಾರಣವಾಗಿತ್ತು. ಇನ್ನು ಕೆಲ ಕಾಲ ಯಾವುದೇ ತೊಂದರೆ ಇಲ್ಲದೆ ಮುಂದುವರೆದಿದ್ದರೆ ಈ ವೇಳೆಗೆ ರಾಜ್ಯದಲ್ಲಿ ನಮ್ಮ ವಿದ್ಯಾರ್ಥಿ ಸಂಘಟನೆ ಪ್ರಬಲವಾಗುತ್ತಿತ್ತು. ಆದರೆ ಇದನ್ನು ಮೊಳಕೆಯಲ್ಲೇ ಚಿವುಟಿಹಾಕಲಾಗಿದೆ. ರಾಷ್ಟ್ರಮಟ್ಟದಲ್ಲಿ ನಮ್ಮ ವಿದ್ಯಾರ್ಥಿ ಸಂಘಟನೆ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ಬದ್ಧತೆ ಇರುವ ವಿದ್ಯಾರ್ಥಿಗಳ ತಂಡವನ್ನು ರೂಪಿಸಿದರೆ ನಾವು ಮುನ್ನಡೆ ಸಾಧಿಸಲು ಸಾಧ್ಯ.

ಖಾಸಗಿ ವಿಶ್ವವಿದ್ಯಾಲಯಗಳ ಕಾಯ್ದೆಯ ರದ್ದತಿ, ಪಿಹೆಚ್‌ಡಿವರೆಗು ಉಚಿತ ಶಿಕ್ಷಣ, ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ಹಾಸ್ಟಲ್ ಸೌಲಭ್ಯ, ಪರೀಕ್ಷೆ ಮತ್ತು ಮೌಲ್ಯಮಾಪನ ವಿಧಾನದಲ್ಲಿ ಬದಲಾವಣೆ, ವಿಶ್ವವಿದ್ಯಾಲಯಗಳಲ್ಲಿನ ಭ್ರಷ್ಟಾಚಾರಕ್ಕೆ ಕಡಿವಾಣ, ವೈಜ್ಞಾನಿಕ ನೆಲೆಯ ಶಿಕ್ಷಣ ಮೌಲ್ಯಗಳು, ಇತಿಹಾಸದ ಪುನಾರಚನೆಗೆ ಕಡಿವಾಣ, ನಿಯತಕಾಲಿಕ ವಿದ್ಯಾರ್ಥಿ ಸಂಘಗಳ ಚುನಾವಣೆ, ನಿರ್ಣಾಯಕ ಹಂತಗಳಲ್ಲಿ ವಿದ್ಯಾರ್ಥಿಗಳಿಗೆ ಅವಕಾಶ, ಸಿಂಡಿಕೇಟ್ ಮತ್ತು ಸೆನೇಟ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಸೂಕ್ತ ಪ್ರಾತಿನಿಧ್ಯ, ಎಲ್ಲ ವಿದ್ಯಾರ್ಥಿಗಳಿಗೂ ಉಚಿತ ಬಸ್ ಪಾಸ್, ಸಿಇಟಿ ಸೇರಿದಂತೆ ಎಲ್ಲ ಪ್ರವೇಶ ಪರೀಕ್ಷೆಗಳ ರದ್ದತಿ ಇವೆಲ್ಲವೂ ವಿದ್ಯಾರ್ಥಿ ಚಳುವಳಿಯ ಮುಖ್ಯ ಬೇಡಿಕೆಗಳಾಗಬಹುದು.

ಕ್ರಾಂತಿಕಾರಿ ಯುವ ಸಂಘಟನೆ (ಆರ್‌ವೈಎ) ಕರ್ನಾಟಕದಲ್ಲಿ ಆರಂಭದ ಹೆಜ್ಜೆಯನ್ನೂ ಮೂಡಿಸಲಾಗಿಲ್ಲ. ಈ ಸಂಘಟನೆಯನ್ನು ಬೆಳೆಸುವಲ್ಲಿ ನಾವು ತೊಡಗಿಸಿಕೊಳ್ಳಬೇಕಿದೆ. ಶ್ರಮದ ಮಾರುಕಟ್ಟೆಯನ್ನು ಅಗ್ಗ ಮಾಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಕೌಶಲ್ಯಾಭಿವೃದ್ಧಿಯತ್ತ ಹೆಚ್ಚು ಗಮನಹರಿಸುತ್ತಿರುವುದು ಬೃಹತ್ ಕಾರ್ಪೋರೇಟ್ ಉದ್ಯಮಿಗಳಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ ನೆರವಾಗುತ್ತಿದೆ. ಇದನ್ನು ವಿರೋಧಿಸಲು ಎಲ್ಲರಿಗೂ ಉದ್ಯೋಗ ನೀಡುವುದು, ಉದ್ಯೋಗವನ್ನು ಮೂಲಭೂತ ಹಕ್ಕು ಎಂದು ಪರಿಗಣಿಸುವುದು, ಮಾಸಿಕ 5000 ರೂಗಳ ನಿರುದ್ಯೋಗ ಭತ್ಯೆ ನೀಡುವುದು, ಸಂದರ್ಶನಗಳಿಗೆ ಹೋಗಲು ಉಚಿತ ಸಾರಿಗೆ ಸೌಲಭ್ಯ ನೀಡುವುದು ಮುಂತಾದ ಬೇಡಿಕೆಗಳನ್ನು ಮಂಡಿಸಬಹುದು. ಇದರೊಟ್ಟಿಗೆ

ಕಾರ್ಪೋರೇಟ್ ಸಂಸ್ಕೃತಿಯ ವಿರುದ್ಧ, ಕೋಮುವಾದಿ ಫ್ಯಾಸಿಸಂ ವಿರುದ್ಧ, ನವ ಉದಾರವಾದಿ ಆರ್ಥಿಕ ನೀತಿಗಳ ವಿರುದ್ಧ ಹೋರಾಡಬೇಕಿದೆ. ಪಕ್ಷದ ಜಿಲ್ಲಾ ಸಮಿತಿಗಳು ವಿದ್ಯಾರ್ಥಿ ಯುವಜನತೆಯ ಚಟುವಟಿಕೆಗಳನ್ನು ನಿರ್ವಹಿಸಲು ವಿಶೇಷ ತಂಡಗಳನ್ನು ರಚಿಸಬೇಕಿದೆ. ವಿದ್ಯಾರ್ಥಿ ಯುವ ಜನತೆಯನ್ನು ಸಂಘಟಿಸದೆ ಹೋದರೆ ಕಮ್ಯುನಿಸ್ಟ್ ಪಕ್ಷ ಅಧಿಕಾರಯುತ ಶಕ್ತಿಗಳ ವಿರುದ್ಧ ಪ್ರಬಲ ಶಕ್ತಿಯಾಗಿ ಹೊರಹೊಮ್ಮಲು ಸಾಧ್ಯವಾಗದು.

ಈ ನಿಟ್ಟಿನಲ್ಲಿ ಕೆಲವು ಆಯ್ದ ಸಂಗಾತಿಗಳನ್ನು ಯುವ ಜನತೆಯ ನಡುವೆ ಪಕ್ಷದ ಧ್ಯೇಯಗಳನ್ನು ಹರಡಲು ನಿಯೋಜಿಸಬೇಕಾಗುತ್ತದೆ. ವಿದ್ಯಾರ್ಥಿ ಯುವಜನತೆ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಈ ಸಂಗಾತಿಗಳು ಬೆಳಕು ಚೆಲ್ಲಬೇಕಾಗುತ್ತದೆ. ಇನ್ನು ಆರು ತಿಂಗಳ ಅವಧಿಯಲ್ಲಿ ವಿದ್ಯಾರ್ಥಿ ಯುವಜನತೆಯ ಸಮಸ್ಯೆಗಳನ್ನು ಬಿಂಬಿಸುವ ರಾಜ್ಯಮಟ್ಟದ ಸಮಾವೇಶವನ್ನು ಆಯೋಜಿಸಬೇಕಿದೆ. ಹಾಗೆಯೇ ಪ್ರತಿಭಟನೆಯ ಚಟುವಟಿಕೆಗಳು, ಅಧ್ಯಯನ ಶಿಬಿರಗಳು, ಸಿನಿಮಾ ಪ್ರದರ್ಶನ, ಚರ್ಚೆ, ಸಾಂಸ್ಕೃತಿಕ ತಂಡಗಳು ಮತ್ತು ವಿಚಾರ ಸಂಕಿರಣಗಳನ್ನು ಏರ್ಪಡಿಸಬೇಕಾಗುತ್ತದೆ. ಇದು ವಿದ್ಯಾರ್ಥಿ ಯುವಜನತೆಯ ಸಂಘಟನೆಗೆ ನೆರವಾಗುವ ಅಂಶಗಳು.

**8. ಬುದ್ಧಿಜೀವಿಗಳ ನಡುವೆ**

ಮುಂದಿನ ದಿನಗಳಲ್ಲಿ ಬುದ್ಧಿಜೀವಿಗಳ ನಡುವೆ ನಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸುವುದು ಪಕ್ಷದ ಪ್ರಮುಖ ಆದ್ಯತೆಯಾಗಬೇಕಿದೆ. ಪಕ್ಷದ ಆಂಗ್ಲ ಪತ್ರಿಕೆ ಲಿಬರೇಷನ್ ಇನ್ನೂ ಹೆಚ್ಚಿನ ಜನರನ್ನು ತಲುಪುವಂತೆ ಮಾಡಬೇಕಿದೆ. ಕನ್ನಡ ಲಿಬರೇಷನ್ ಪ್ರೋತ್ಸಾಹಿಸಬೇಕಿದೆ. ಹೆಚ್ಚು ಚಂದಾದಾರರನ್ನು ಗುರುತಿಸಬೇಕಿದೆ. ಹೆಚ್ಚಿನ ಪ್ರಮಾಣದಲ್ಲಿ ಅಧ್ಯಯನ ಶಿಬಿರಗಳನ್ನು ಆಯೋಜಿಸುವ ಮೂಲಕ ಬುದ್ಧಿಜೀವಿಗಳೊಡನೆ ಸಂವಹನ ನಡೆಸಬೇಕಿದೆ. ಸಾಮಾಜಿಕ ತಾಣಗಳನ್ನು ಈ ಸಂದರ್ಭದಲ್ಲಿ ಸಮರ್ಥವಾಗಿ ಬಳಸಿಕೊಳ್ಳಬಹುದು. ಮೈಸೂರಿನ ಐಐಎಂಎಸ್ ಇಂತಹ ಅಧ್ಯಯನ ಶಿಬಿರಗಳನ್ನು ಆಯೋಜಿಸಿದ್ದು, ಮಾರ್ಕ್ಸ್‌ವಾದ ಮತ್ತು ಮಾರ್ಕ್ಸ್‌ವಾದಿ ದೃಷ್ಟಿಕೋನದ ಹಲವು ಸಮಕಾಲೀನ ವಿಷಯಗಳ ಬಗ್ಗೆ ಚರ್ಚೆ ನಡೆಸಲಾಗಿದೆ. ದಾವಣಗೆರೆ ಮತ್ತು ಕೊಪ್ಪಳದಲ್ಲಿ ಹಲವು ಅಧ್ಯಯನ ಶಿಬಿರಗಳನ್ನು ಆಯೋಜಿಸಲಾಗಿತ್ತು. ಈಗ ಅಧ್ಯಯನ ಶಿಬಿರಗಳ ಸಾಂಸ್ಥೀಕರಣ ಪ್ರಕ್ರಿಯೆಗೆ ಚಾಲನೆ ನೀಡಬೇಕಿದೆ. ಆಗ ಹೊಸ ಪೀಳಿಗೆಯ ಮಾರ್ಕ್ಸ್‌ವಾದಿಗಳನ್ನು ಎಡಪಂಥೀಯರನ್ನು ಸೃಷ್ಟಿಸಲು ಸಾಧ್ಯ.

**9. ಸಂಯುಕ್ತ ರಂಗದ ಚಟುವಟಿಕೆಗಳು**

1970ರ ದಶಕದಲ್ಲಿ ಎಲ್ಲ ಎಂಎಲ್ ಗುಂಪುಗಳನ್ನು ಒಗ್ಗೂಡಿಸುವ ಪ್ರಯತ್ನಗಳನ್ನು ನಾವು ಮಾಡಿದ್ದೆವು. ಆದರೆ ಈ ಪ್ರಕ್ರಿಯೆಯಲ್ಲಿ ಭಾಗವಹಿಸಿದ ಎಲ್ಲ ಗುಂಪುಗಳು ಜಂಟಿಸಭೆಯಲ್ಲಿ ಜಂಟಿ ಹೇಳಿಕೆಯನ್ನು ನೀಡಿದ್ದರೂ ನಂತರ ತಮ್ಮದೇ ಆದ ಲೋಕಕ್ಕೆ ಮರಳಿದ್ದವು. ಐಪಿಎಫ್ ಮೂಲಕ ಎಲ್ಲ ಎಡಪಂಥೀಯ ಪ್ರಜಾತಾಂತ್ರಿಕ ಸಂಘಟನೆಗಳನ್ನು ಒಂದು ವೇದಿಕೆ ಮೇಲೆ ತರುವ ಪ್ರಯತ್ನಗಳನ್ನೂ ಮಾಡಲಾಗಿತ್ತು. 1980ರ ದಶಕದ ಆರಂಭದಲ್ಲಿ ಈ ಪ್ರಯತ್ನಕ್ಕೆ ಸಾಕಷ್ಟು ಪ್ರೋತ್ಸಾಹ ದೊರೆತಿತ್ತು. ಆದರೆ ಒಂದು ಕಾಲಘಟ್ಟದಲ್ಲಿ ಈ ಪ್ರಯತ್ನ ವಿಫಲವಾಗಿತ್ತು. ನಂತರ ಜಾಗತೀಕರಣದ ವಿರುದ್ಧ ವೇದಿಕೆ ರೂಪಿಸುವ ಮೂಲಕ ನಡೆಸಿದ ಪ್ರಯತ್ನವೂ ವಿಫಲವಾಗಿತ್ತು. ನಾವು ಹುಟ್ಟುಹಾಕಿದ ರಾಷ್ಟ್ರೀಯ ಪ್ರಜಾ ವೇದಿಕೆಯೂ ಸಹ ಹೀಗೆಯೇ ಅವಸಾನ ಹೊಂದಿತ್ತು. ಈ ನಿಟ್ಟಿನಲ್ಲಿ ನಮ್ಮ ಇತ್ತೀಚಿನ ಪ್ರಯತ್ನ ಎಂದರೆ ಅಖಿಲ ಭಾರತ ಪ್ರಜಾ ವೇದಿಕೆಯ ಸ್ಥಾಪನೆ. 2015ರಲ್ಲಿ ಸ್ಥಾಪಿಸಲಾದ ಎಐಪಿಎಫ್ ಸಂಘಟನೆ ದೇಶದಲ್ಲಿ ಸಕ್ರಿಯವಾಗಿರುವ ಮೋದಿ ಬಿಜೆಪಿ ನೇತೃತ್ವದ ಕಾರ್ಪೋರೇಟ್ ಕೋಮುವಾದಿ ಫ್ಯಾಸಿಸಂ ವಿರುದ್ಧ ಹೋರಾಟ ನಡೆಸುತ್ತಿದೆ. ಅಷ್ಟೇ ಅಲ್ಲದೆ ನಾವು ಜಂಟಿ ಹೋರಾಟಗಳ ಮೂಲಕ ಅಖಿಲ ಭಾರತ ಮಟ್ಟದಲ್ಲಿ ಎಡಪಕ್ಷಗಳೊಡನೆ ಬೆರೆತು ಹೋರಾಡುತ್ತಿದ್ದೇವೆ. ವಿಷಯಾಧಾರಿತ ರಾಜ್ಯಮಟ್ಟದ ಅಂದೋಲನಗಳಲ್ಲಿ ಭಾಗಿಯಾಗಿದ್ದೇವೆ. ದೇಶದಲ್ಲಿ ಆಕ್ರಮಣಶೀಲ ಬಲಪಂಥೀಯ ಸಂಘಟನೆಗಳು ಪ್ರಬಲವಾಗಿರುವ ಹಿನ್ನೆಲೆಯಲ್ಲಿ, ಎಲ್ಲ ಎಡಪಕ್ಷಗಳೊಡನೆ ಸಮಾಲೋಚನೆ ನಡೆಸುವುದು ನಮ್ಮ ಪಕ್ಷದ ನೀತಿಯೇ ಆಗಿದೆ. ಹಾಗಾದಲ್ಲಿ ಮಾತ್ರ ಕಾರ್ಪೋರೇಟ್ ಕೋಮುವಾದಿ ಫ್ಯಾಸಿಸಂ ವಿರುದ್ಧ ಹೋರಾಡಲು ಸಾಧ್ಯ. ಇದೇ ವೇಳೆ ನಮ್ಮದೇ ಆದ ಸ್ವತಂತ್ರ ನಿಲುವನ್ನು ಸಮರ್ಥಿಸಿಕೊಂಡು ಬಲಪಂಥೀಯ ಶಕ್ತಿಗಳಿಗೆ ಪ್ರಬಲ ಪ್ರತಿರೋಧವನ್ನು ಸೃಷ್ಟಿಸಬೇಕಿದೆ.

# III
# ಕರ್ನಾಟಕದಲ್ಲಿ ಪಕ್ಷದ ಬೆಳವಣಿಗೆಯ ಪುನರ್ಮನನ

### ಸಿಪಿಐ(ಎಂಎಲ್) ಲಿಬರೇಷನ್ ಪಕ್ಷದ ಜನನ

ಕರ್ನಾಟಕದಲ್ಲಿ ನಕ್ಸಲ್ಬಾರಿಯ ನಗಾರಿಯ ಸದ್ದು ಕೇಳಿಬಂದರೂ ಸೀಮಿತವಾಗಿತ್ತು ನಮ್ಮ ಪಕ್ಷವು ಅಖಿಲ ಭಾರತ ಮಟ್ಟದಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವ ಮುನ್ನ, ಕರ್ನಾಟಕದಲ್ಲಿ ಪಕ್ಷದ ಹೆಜ್ಜೆಗುರುತುಗಳನ್ನು ಗುರುತಿಸುವ ನಿಟ್ಟಿನಲ್ಲಿ, ನಾವು ರಾಷ್ಟ್ರಮಟ್ಟದಲ್ಲಿ ನಮ್ಮ ಪಕ್ಷ ಹೇಗೆ ರೂಪುಗೊಂಡಿತು ಎಂದು ಅರಿತುಕೊಳ್ಳುವುದು ಒಳಿತು. ಸಿಪಿಐ 1925ರಲ್ಲಿ ಸ್ಥಾಪನೆಯಾಯಿತು. 1964ರಲ್ಲಿ ಪಕ್ಷ ಮೊದಲ ಬಾರಿ ವಿಭಜನೆಯಾದ ಸಂದರ್ಭದಲ್ಲಿ ಸಿಪಿಎಂ ಸ್ಥಾಪನೆಯಾಯಿತು. ಅಂತರ ರಾಷ್ಟ್ರೀಯ ಮಟ್ಟದಲ್ಲಿ  ಚೀನಾದ ಮಾವೋ ಮತ್ತು ರಷ್ಯಾದ ಕ್ರುಶ್ಚೇವ್ ನಡುವೆ ನಡೆದ ಸೈದ್ಧಾಂತಿಕ ವಾಕ್ಸಮರದ ಹಿನ್ನೆಲೆಯಲ್ಲಿ ಸಿಪಿಎಂ ಉದಯಿಸಿತ್ತು. ಬದಲಾಗುತ್ತಿದ್ದ ಸನ್ನಿವೇಶದಲ್ಲಿ ಶಾಂತಿಯುತ ಮನ್ವಂತರದ ಹಾದಿಯನ್ನು ಅನುಸರಿಸಿದ ಸಿಪಿಐ ರಷ್ಯಾದ ಧೋರಣೆಯನ್ನು ಅನುಮೋದಿಸಿತ್ತು. ಈ ಸಂದರ್ಭದಲ್ಲಿ ಸಿಪಿಎಂ ಚೀನಾದ ಪರ ಎಂದೇ ಬಿಂಬಿತವಾಗಿತ್ತು. ಸಿಪಿಐ ಭಾರತದ ಕ್ರಾಂತಿಯನ್ನು ರಾಷ್ಟ್ರೀಯ ಪ್ರಜಾತಾಂತ್ರಿಕ ಕ್ರಾಂತಿ ಎಂದು ಬಣ್ಣಿಸಿತ್ತು. ಈ ಧೋರಣೆಯ ಅನುಸಾರ ಭಾರತಲ್ಲಿ ಸಾಮ್ರಾಜ್ಯಶಾಹಿಯನ್ನು ಮತ್ತು ಏಕಸ್ವಾಮ್ಯವನ್ನು ವಿರೋಧಿಸುವ ಬೂರ್ಷ್ವಾ ವರ್ಗವೊಂದು ಪ್ರಬಲವಾಗಿದ್ದು ಈ ರಾಷ್ಟ್ರೀಯ ಬೂರ್ಷ್ವಾ ವರ್ಗವನ್ನು ನೆಹರೂ ನೇತೃತ್ವದ ಕಾಂಗ್ರೆಸ್ ಪಕ್ಷ ಪ್ರತಿನಿಧಿಸುತ್ತದೆ. ಭಾರತದ ಪ್ರಜಾತಾಂತ್ರಿಕ ಮನ್ವಂತರ ಪ್ರಕ್ರಿಯೆಯಲ್ಲಿ ಈ ರಾಷ್ಟ್ರೀಯ ಬೂರ್ಷ್ವಾಗಳು ಪ್ರಧಾನ ಪಾತ್ರ ವಹಿಸಲಿದ್ದು ಸಿಪಿಐ ಈ ದಿಟ್ಟ ನಿಲುವು ಸಡಿಲಗೊಳ್ಳದಂತೆ ಎಚ್ಚರ ವಹಿಸಿ ಮನ್ವಂತರ ಪ್ರಕ್ರಿಯೆಗೆ ಕಾಯಕಲ್ಪ ಒದಗಿಸುತ್ತದೆ ಎಂದು ಸಿಪಿಐ ಪ್ರತಿಪಾದಿಸಿತ್ತು. ಮತ್ತೊಂದೆಡೆ ಸಿಪಿಎಂ ಭಾರತದ ಕ್ರಾಂತಿಯನ್ನು ಪ್ರಜೆಗಳ ಪ್ರಜಾತಾಂತ್ರಿಕ ಕ್ರಾಂತಿಯ ಮಾರ್ಗದಲ್ಲಿ ಮುನ್ನಡೆಸಲು ನಿರ್ಧರಿಸಿತ್ತು.  ನೆಹರೂ ಕಾಂಗ್ರೆಸ್‌ನೊಡನೆ ಯಾವುದೇ ರೀತಿಯ ಮೈತ್ರಿಯನ್ನು ವಿರೋಧಿಸಿದ್ದ ಸಿಪಿಎಂ ಜನಪರ ಸಮೂಹ ಆಂದೋಲನಗಳನ್ನು ಮತ್ತು ರೈತ ಚಳುವಳಿಗಳನ್ನು ಹುಟ್ಟುಹಾಕಲು ನಿರ್ಧರಿಸಿತ್ತು. ಕ್ರಾಂತಿಯ ಮಾರ್ಗದಲ್ಲಿ ಸಿಪಿಐ ಸಂಸತ್ತಿನಲ್ಲಿ

ಬಹುಮತ ಗಳಿಸುವುದೊಂದೇ ಮಾರ್ಗ ಎಂದು ಭಾವಿಸಿತ್ತು. ಸಿಪಿಎಂ ಕೆಲವು ರಾಜ್ಯಗಳಲ್ಲಿ ಅಧಿಕಾರ ಗಳಿಸುವ ಮೂಲಕ ಸಂಸದೀಯ ಪ್ರಜಾತಂತ್ರಕ್ಕೆ ಸೀಮಿತ ಅವಕಾಶ ನೀಡುವ ನಿಲುವು ತಳೆದಿತ್ತು. ಸಿಪಿಎಂ ಸ್ಥಾಪನೆಯಾಗುವ ಸಂದರ್ಭದಲ್ಲಿ, ಪಕ್ಷ ಚುನಾವಣೆಯ ಮೂಲಕ ಗಳಿಸುವ ಜನತೆಯ ಬೆಂಬಲವನ್ನು ಬೂರ್ಷ್ವಾ ಪ್ರಭುತ್ವ ವ್ಯವಸ್ಥೆಯ ಇತಿಮಿತಿಗಳ ಬಗ್ಗೆ ಜನತೆಯಲ್ಲಿ ಪ್ರಜ್ಞೆ ಮೂಡಿಸಲು ಬಳಸಿಕೊಳ್ಳಲು ನಿರ್ಧರಿಸಿತ್ತು. ಹಾಗೆಯೇ ವರ್ಗ ಸಂಘರ್ಷವನ್ನು ತೀಕ್ಷ್ಣಗೊಳಿಸಲು ನಿರ್ಧರಿಸಿತ್ತು. ಹಾಗಾಗಿ ಎಡಪಂಥೀಯ ಸರ್ಕಾರ ವರ್ಗ ಸಂಘರ್ಷದ ಅಸ್ತ್ರ ಎಂದು ಸಿಪಿಎಂ ಬಣ್ಣಿಸಿತ್ತು. ಈ ಸಂದರ್ಭದಲ್ಲಿ ಕ್ರಾಂತಿಕಾರಿ ಕಮ್ಯುನಿಸ್ಟರು ಸಿಪಿಎಂನ ಭಾಗವಾಗಿದ್ದರು.

ತನ್ನ ಸ್ಥಾಪನೆಯ ಕ್ಷಣದಿಂದಲೂ ಸಿಪಿಎಂ, ಮೂಲ ಪಕ್ಷದ ಇಬ್ಭಾಗಕ್ಕೆ ಕಾರಣವಾದ ಅಂಶಗಳ ಬಗ್ಗೆ ಅಸ್ಪಷ್ಟ ಧೋರಣೆಯನ್ನೇ ಹೊಂದಿತ್ತು. ಹಾಗಾಗಿ ಆರಂಭದಿಂದಲೇ ಪಕ್ಷದಲ್ಲಿ ಅಂತರಿಕ ಕಲಹ ಹೆಚ್ಚಾಗುತ್ತಾ ಹೋಯಿತು. 1965–67ರ ಅವಧಿಯಲ್ಲಿ ಪಕ್ಷದಲ್ಲಿ ನಡೆದ ಅಂತರಿಕ ಸಂಘರ್ಷವನ್ನು ಚಾರು ಮಜುಂದಾರ್ ತಮ್ಮ ಎಂಟು ದಸ್ತಾವೇಜುಗಳಲ್ಲಿ ಸ್ಪಷ್ಟವಾಗಿ ವಿಶ್ಲೇಷಿಸಿದ್ದಾರೆ. 1967ರಲ್ಲಿ ಸಿಪಿಎಂ ಪ್ರಧಾನವಾಗಿದ್ದ ಸಂಯಕ್ತ ರಂಗ ಸರ್ಕಾರವನ್ನು ಕಾಂಗ್ರೆಸ್‌ನ ಭಿನ್ನಮತೀಯರ ಗುಂಪಿನೊಡನೆ ಸೇರಿ ರಚಿಸಲಾಗಿತ್ತು. ಈ ಸಂದರ್ಭದಲ್ಲಿ ದೇಶದೆಲ್ಲೆಡೆ ಕ್ರಾಂತಿಕಾರಿ ಆಶಯಗಳು ಹೆಚ್ಚಾಗತೊಡಗಿದವು. ಪಶ್ಚಿಮ ಬಂಗಾಲದ ವಿವಿಧೆಡೆಗಳಲ್ಲಿ ಭೂ ಹೋರಾಟಗಳು ತೀವ್ರವಾಗುತ್ತಲೇ ಹೋದವು. ವಿಶೇಷವಾಗಿ ನಕ್ಸಲ್‌ಬಾರಿ ಎಂಬ ಗ್ರಾಮದಲ್ಲಿ 1967ರ ಮೇ 25ರಂದು ಈ ಹೋರಾಟ ಉತ್ಕರ್ಷಕ್ಕೇರಿತ್ತು. ರಾಜ್ಯ ಸರ್ಕಾರದ ಆಡಳಿತ ವ್ಯವಸ್ಥೆಯೊಡನೆ ನೇರ ಸಂಘರ್ಷ ಉಂಟಾಯಿತು. ಸಿಪಿಎಂ ನೇತೃತ್ವದ ಸಂಯುಕ್ತ ರಂಗ ಸರ್ಕಾರ ಭೂ ಹೋರಾಟಗಳನ್ನು ಹತ್ತಿಕ್ಕಲು ಕಠಿಣ ಧೋರಣೆಯನ್ನು ತೋರಿತ್ತು. ಸರ್ಕಾರವನ್ನು ಉಳಿಸುವುದು ಸಿಪಿಎಂ ಉದ್ದೇಶವಾಗಿತ್ತು. ಈ ಸಂದರ್ಭದಲ್ಲೇ ಪಕ್ಷದಲ್ಲಿ ಪ್ರತಿರೋಧ ಪರಾಕಾಷ್ಠೆ ತಲುಪಿದ್ದು 1969ರ ಏಪ್ರಿಲ್ 22ರಂದು ಸಿಪಿಐಎಂಎಲ್ ಸ್ಥಾಪನೆಯಾಗಿತ್ತು.

**ಸಿಪಿಐ (ಎಂಎಲ್) ಲಿಬರೇಷನ್ ಪಕ್ಷದ ಅರಂಭದ ದಿನಗಳು:**

ಸಿಪಿಐಎಂಎಲ್ ಪಕ್ಷದ ಪ್ರಥಮ ಅಧಿವೇಶನವನ್ನು 1970ರ ಮೇ ತಿಂಗಳಲ್ಲಿ ಕೊಲ್ಕತ್ತಾದಲ್ಲಿ ಆಯೋಜಿಸಲಾಗಿತ್ತು. ಕಾಂ ಚಾರುಮಜುಂದಾರ್ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದ ಅಧಿವೇಶನದಲ್ಲಿ 21 ಸದಸ್ಯರ ಕೇಂದ್ರ ಸಮಿತಿಯನ್ನು ಸ್ಥಾಪಿಸಲಾಗಿತ್ತು. 1972ರ ಜುಲೈ 28ರಂದು ಚಾರು ಮಜುಂದಾರ್

ಹುತಾತ್ಮರಾದರು. ಎರಡು ವರ್ಷಗಳ ನಂತರ ಕಾಂ ಜೌಹರ್ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಗಿ ಮೂವರು ಸದಸ್ಯರ ಕೇಂದ್ರ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯಲ್ಲಿ ಜೌಹರ್ ಅವರ ಹೊರತಾಗಿ ಕಾಂ ವಿನೋದ್ ಮಿಶ್ರ ಮತ್ತು ಕಾಂ ರಘು (ಸ್ವದೇಶ್ ಭಟ್ಟಾಚಾರ್ಯ) ಇದ್ದರು. 1975ರ ನವಂಬರ್‌ನಲ್ಲಿ ಕಾಂ ಜೌಹರ್ ಹುತಾತ್ಮರಾದರು. ನಂತರ ಕಾಂ ವಿನೋದ್ ಮಿಶ್ರ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಸಿಪಿಐಎಂಎಲ್ ಪಕ್ಷದ ಎರಡನೆ ಮಹಾಧಿವೇಶನ 1976ರ ಫೆಬ್ರವರಿಯಲ್ಲಿ ಏರ್ಪಡಿಸಲಾಗಿತ್ತು. ಈ ಅಧಿವೇಶನದಲ್ಲಿ 11 ಸದಸ್ಯರ ಕೇಂದ್ರ ಸಮಿತಿಯನ್ನು ರಚಿಸಲಾಗಿತ್ತು. ಕಾಂ ವಿನೋದ್ ಮಿಶ್ರ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದರು. ಇಂದಿರಾಗಾಂಧಿ ತುರ್ತುಪರಿಸ್ಥಿತಿಯನ್ನು ಹೇರಿದ ಸಂದರ್ಭದಲ್ಲಿ ಸಿಪಿಐ ಕಾಂಗ್ರೆಸ್ ಪಕ್ಷಕ್ಕೆ ಒತ್ತಾಸೆಯಾಗಿ ನಿಂತಿತ್ತು. ಸಿಪಿಎಂ ಪರಿಣಾಮಕಾರಿಯಾಗಿ ಪ್ರತಿರೋಧ ವ್ಯಕ್ತಪಡಿಸಲಿಲ್ಲ. ಅನೇಕ ಎಂಎಲ್ ಗುಂಪುಗಳು ಅಸ್ತವ್ಯವಸ್ಥವಾಗಿದ್ದವು. ಈ ಸಂದರ್ಭದಲ್ಲಿ ಸಿಪಿಐಎಂಲ್ ಲಿಬರೇಷನ್ ಪಕ್ಷ ಮಾತ್ರವೇ ಕೆಂಬಾವುಟವನ್ನು ಮುಗಿಲೆತ್ತರದಲ್ಲಿ ಹಾರಿಸಿತ್ತು. ಪ್ರಭುತ್ವದ ತೀವ್ರ ದಮನದ ನಡುವೆಯೂ ಪಕ್ಷ ತನ್ನ ಪ್ರತಿರೋಧದ ಹಾದಿಯಲ್ಲಿ ಸಾಗಿತ್ತು. 1977ರಲ್ಲಿ ತುರ್ತುಪರಿಸ್ಥಿತಿಯನ್ನು ತೆರವುಗೊಳಿಸಿದ ನಂತರ ಭೋಜ್‌ಪುರದಲ್ಲಿ ಮೊಳಗಿದ ಕೆಂಪು ನಕ್ಷತ್ರ ಮತ್ತು ಸಿಪಿಐಎಂಎಲ್ ಲಿಬರೇಷನ್ ಎಂಬ ಒಂದು ಸಣ್ಣ ಗುಂಪು ದೇಶಾದ್ಯಂತ ಕ್ರಾಂತಿಕಾರಿಗಳ ಗಮನ ಸೆಳೆದಿತ್ತು. ಆಳುವ ವರ್ಗಗಳನ್ನು ಪ್ರತಿನಿಧಿಸುತ್ತಿದ್ದ ಜಯಪ್ರಕಾಶ್ ನಾರಾಯಣ್ ನೇತೃತ್ವದ ವಿರೋಧ ಪಕ್ಷಗಳ ಒಕ್ಕೂಟಕ್ಕೆ ನಮ್ಮ ಪಕ್ಷ ಮಾತ್ರ ಸಮಾನಂತರವಾಗಿ ನಿಂತ ಎಡಪರ ವಿರೋಧ ಪಕ್ಷವಾಗಿತ್ತು.

**ಕರ್ನಾಟಕದಲ್ಲಿ ಪಕ್ಷದ ಆರಂಭದ ಹಂತ:**

ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ರಾಷ್ಟ್ರಮಟ್ಟದಲ್ಲಿ ವ್ಯಕ್ತವಾಗಿದ್ದ ಭೋಜ್‌ಪುರ ಮಾರ್ಗದ ಪ್ರತಿಧ್ವನಿಯನ್ನು ಕರ್ನಾಟಕದಲ್ಲೂ ಕಾಣಬಹುದಿತ್ತು. ತುರ್ತುಪರಿಸ್ಥಿತಿಗೆ ಮುನ್ನಾ ದಿನಗಳಲ್ಲಿ ಬೆಂಗಳೂರಿನ ಕೆಲವು ಸಂಗಾತಿಗಳು ಪಕ್ಷಕ್ಕೆ ಸೇರ್ಪಡೆಯಾಗಿದ್ದರು. ಬೆಂಗಳೂರಿನ ಸಂಗಾತಿಗಳು ಮೈಸೂರಿನಲ್ಲಿದ್ದ ಕೆಲವು ಸಂಗಾತಿಗಳನ್ನು ಭೇಟಿ ಮಾಡಿ ಮೈಸೂರಿನಲ್ಲೇ ಪಕ್ಷದ ತಂಡವೊಂದನ್ನು ರೂಪಿಸಲಾಯಿತು. ಬಾಗೇಪಲ್ಲಿಯಲ್ಲಿ ನಕ್ಸಲ್‌ಬಾರಿಯಿಂದ ಸ್ಫೂರ್ತಿ ಪಡೆದ ಒಂದು ತಂಡ ರಚನೆಯಾಗಿತ್ತು. ನಕ್ಸಲ್‌ಬಾರಿಯಿಂದ ಪ್ರೇರಿತರಾದ ಸಂಗಾತಿಗಳು ಭೂಗತರಾಗಿ ಪಕ್ಷದ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಬೆಂಗಳೂರು ಮತ್ತು ಮೈಸೂರಿನಲ್ಲಿ ಗ್ರಂಥಾಲಯವೂ ಸಹ ರಹಸ್ಯ ಪ್ರೇರಣೆಯಾಗಿ ರೂಪುಗೊಂಡಿತ್ತು. ಬೆಂಗಳೂರಿನಲ್ಲಿ ಪ್ರಜಾ ಗ್ರಂಥಾಲಯವು ಸಂವಹನ ಮತ್ತು ಸಭೆಗಳಿಗೆ ಪ್ರೇರಣಾ

ಶಕ್ತಿಯಾಗಿತ್ತು. ಮೈಸೂರಿನಲ್ಲಿ ಮಹದೇವಪ್ಪ ಸ್ಮಾರಕ ಮಾರ್ಕ್ಸ್‌ವಾದಿ ಗ್ರಂಥಾಲಯ ಕಾರ್ಯನಿರ್ವಹಿಸುತ್ತಿತ್ತು. ತುರ್ತುಪರಿಸ್ಥಿತಿಯ ಭೀಕರ ಸಂದರ್ಭದಲ್ಲಿ ಈ ಗ್ರಂಥಾಲಯ ಕಠಿಣ ಪರಿಸ್ಥಿತಿಯಲ್ಲಿ ಮಾರ್ಕ್ಸ್‌ವಾದಿ ಚಿಂತನೆಗಳಿಗೆ ಆಧಾರವಾಗಿತ್ತು. ಭೂಗತ ಸನ್ನಿವೇಶದಲ್ಲಿ ಪಕ್ಷದ ದಸ್ತಾವೇಜುಗಳನ್ನು ಕುರಿತು ಸುದೀರ್ಘ ಕಾರ್ಯಾಗಾರಗಳನ್ನು ನಡೆಸಲಾಗುತ್ತಿತ್ತು. ಮೈಸೂರು ತಂಡದ ಸದಸ್ಯರಾಗಿದ್ದ ಹಿರಿಯ ವಿಜ್ಞಾನಿಯೊಬ್ಬರು ಪಕ್ಷದ ಅಂತಾರಾಷ್ಟ್ರೀಯ ವಿಭಾಗವನ್ನೂ ನಂತರದಲ್ಲಿ ಪ್ರತಿನಿಧಿಸಿದ್ದರು. ಚಾರುಮಜುಂದಾರ್ ಅವರ ಲೇಖನಗಳನ್ನು ಕನ್ನಡದಲ್ಲಿ ಪ್ರಕಟಿಸಿ ಕರ್ನಾಟಕದ ವಿವಿಧ ಭಾಗಗಳಲ್ಲಿ ಹಂಚಲಾಯಿತು. ಜನಕಲಾ ರಂಗ ಎಂಬ ತಂಡ ಪ್ರಗತಿಪರ ಹಾಗೂ ರಾಜಕೀಯ ನಾಟಕಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ನಡೆಸುತ್ತಿತ್ತು. ಪಕ್ಷದ ಕಾರ್ಮಿಕ ಪತ್ರಿಕೆ ಲಾಲ್ ಜಂಡಾ ಕನ್ನಡಕ್ಕೆ ತರ್ಜುಮೆಯಾಗಿ ಹಸ್ತಪ್ರತಿಯ ರೂಪದಲ್ಲೇ ವಿತರಣೆಯಾಗುತ್ತಿತ್ತು. ಕಾಂ ಚಾರು ಮಜುಂದಾರ್ ಸ್ಮರಣಾ ದಿನಾಚರಣೆಯ ಹಿನ್ನೆಲೆಯಲ್ಲಿ 1979ರಲ್ಲಿ ಗಾಂಧಿ ಪ್ರತಿಮೆಯ ಮೇಲೆ ದಾಳಿ ನಡೆಸಲು ಯೋಚಿಸಲಾಗಿತ್ತು. 1979ರಲ್ಲಿ ಬೆಂಗಳೂರು ಪೊಲೀಸ್ ಆಯುಕ್ತರ ಬಂಗಲೆಯ ಬಳಿ ನಕ್ಸಲ್‌ಬಾರಿ ಪರಂಪರೆಯನ್ನು ಶ್ಲಾಘಿಸುವ ಪೋಸ್ಟರ್‌ಗಳನ್ನು ಅಂಟಿಸಲಾಗಿತ್ತು. 1982ರಲ್ಲಿ ನೂರು ದಿನಗಳ ಸಾರ್ವಜನಿಕ ಉದ್ದಿಮೆಗಳ ಮುಷ್ಕರದ ಸಂದರ್ಭದಲ್ಲಿ ಐಟಿಐ ಕಾರ್ಖಾನೆಯಲ್ಲಿ ನಮ್ಮ ಸಂಗಾತಿಗಳು ಪ್ರಮುಖ ಪಾತ್ರ ವಹಿಸಿದ್ದರು. ಪ್ರಥಮ ಕಾರ್ಯದರ್ಶಿ ಕಾಂ ಶಂಕರ್ ವಿರುದ್ಧ ಪೊಲೀಸ್ ಮೊಕದ್ದಮೆ ದಾಖಲಾಗಿತ್ತು. ಹಲವು ಸಂಗಾತಿಗಳನ್ನು ಬಂಧಿಸಲಾಗಿತ್ತು. ನಮ್ಮ ಪಕ್ಷದ ಸೀಮಿತ ಸದಸ್ಯತ್ವದ ನಡುವೆಯೇ ಹಲವೆಡೆ ಪ್ರತಿಭಟನೆಗಳನ್ನು ಹಮ್ಮಿಕೊಳ್ಳಲಾಗಿತ್ತು.

**ಮುಕ್ತ ರಾಜಕಾರಣಕ್ಕೆ ಸಿಪಿಐ(ಎಂಎಲ್) ಲಿಬರೇಷನ್ ಪ್ರವೇಶ:**

ಎಂಎಲ್ ಆಂದೋಲನದಲ್ಲಿ ಉಂಟಾದ ಅನೇಕ ಅಸ್ತವ್ಯಸ್ತಗಳು ಮತ್ತು ಹಿನ್ನಡೆಗಳ ಹಿನ್ನೆಲೆಯಲ್ಲಿ ನಮ್ಮ ಸಿಪಿಐಎಂಎಲ್ ಲಿಬರೇಷನ್ ಪಕ್ಷ 1978ರಲ್ಲಿ ತಪ್ಪುಗಳನ್ನು ಸರಿಪಡಿಸಲು ಅಭಿಯಾನ ಹಮ್ಮಿಕೊಂಡಿತ್ತು. ಅನುಭವದಿಂದ ಕಲಿತ ಪಾಠಗಳ ಹಿನ್ನೆಲೆಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿ, ಕಾರ್ಯಶೈಲಿಯಲ್ಲಿ ಬದಲಾವಣೆ ಮೂಡಿಸಲು ಹಾಗೂ ರಾಜಕೀಯ ಧೋರಣೆಯಲ್ಲಿ ಬದಲಾವಣೆ ಮಾಡಲು ನಿರ್ಧರಿಸಲಾಯಿತು. 1979ರಲ್ಲಿ ನಡೆದ ಅಖಿಲ ಭಾರತ ವಿಶೇಷ ಅಧಿವೇಶನದಲ್ಲಿ ಸಮೂಹ ಸಂಘಟನೆಗಳ ಮೂಲಕ ಸಮೂಹ ಹೋರಾಟಗಳಲ್ಲಿ ಸಕ್ರಿಯವಾಗಿರಲು ನಿರ್ಧರಿಸಲಾಯಿತು. ಬೆಂಗಳೂರಿನ ಪ್ರಮುಖ ಸಂಗಾತಿಯೊಬ್ಬರು 1979ರ ವಿಶೇಷ ಅಧಿವೇಶನದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಏಪ್ರಿಲ್ 1982ರಲ್ಲಿ ಪಕ್ಷದ ಸಮೂಹ ಸಂಘಟನೆಯಾದ ಇಂಡಿಯನ್ ಪೀಪಲ್ಸ್ ಫ್ರಂಟ್

(ಐಪಿಎಫ್) ಸ್ಥಾಪನೆಯಾಗಿತ್ತು. ಕರ್ನಾಟಕದ ಹಲವು ಎಡಪಂಥೀಯ ಹಾಗೂ ಪ್ರಜಾತಾಂತ್ರಿಕ ಹೋರಾಟಗಳಿಗೆ ಐಪಿಎಫ್ ಕೇಂದ್ರ ಬಿಂದುವಾಗಿತ್ತು. ಇಂದಿಗೂ ಸಹ ಹಿರಿಯ ಸಂಗಾತಿಗಳು ಐಪಿಎಫ್‌ನ ದಿನಗಳನ್ನು ನೆನಪು ಮಾಡಿಕೊಳ್ಳುತ್ತಾರೆ. ಡಿಸೆಂಬರ್ 1982ರಲ್ಲಿ ಪಕ್ಷದ ಮೂರನೆಯ ಮಹಾಧಿವೇಶನವನ್ನು ಏರ್ಪಡಿಸಲಾಗಿತ್ತು, ಪಕ್ಷ ಚುನಾವಣೆಗಳಲ್ಲಿ ಪಾಲ್ಗೊಳ್ಳಬೇಕು ಎಂಬ ನಿರ್ಣಯಕ್ಕೆ ಈ ಅಧಿವೇಶನದಲ್ಲಿ ಸಮ್ಮತಿ ದೊರೆತಿತ್ತು. ಐಪಿಎಫ್ ಬ್ಯಾನರ್‌ನಲ್ಲಿ ಬಿಹಾರದಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದೆವು. ನಮ್ಮ ಪಕ್ಷದ ಪ್ರಥಮ ಸಂಸದರು ಈ ಚುನಾವಣೆಯಲ್ಲಿ ಆಯ್ಕೆಯಾಗಿದ್ದರು. 1987ರಲ್ಲಿ ನಡೆದ ಪಕ್ಷದ 4ನೆಯ ಅಧಿವೇಶನದಲ್ಲಿ ಪಕ್ಷದ ರಾಜಕೀಯ ಧೋರಣೆಯಲ್ಲಿನ ಬದಲಾವಣೆಗೆ ಮತ್ತಷ್ಟು ಕಾಯಕಲ್ಪ ಒದಗಿತ್ತು. ನಾಲ್ಕನೆಯ ಮಹಾಧಿವೇಶನದಲ್ಲಿ ಇತರ ಎಡಪಂಥೀಯ ಪಕ್ಷಗಳೊಡನೆ ಸಮನ್ವಯ ಸಾಧಿಸುವುದು ಮತ್ತು ಎಡಪಂಥೀಯ ಒಕ್ಕೂಟ ರಚನೆಯ ಬಗ್ಗೆ ಅನುಮೋದನೆ ನೀಡಲಾಯಿತು. ಇದರ ಪರಿಣಾಮ, ಪ್ರವರ್ಧಮಾನಕ್ಕೆ ಬರುತ್ತಿದ್ದ ಎಂಎಲ್ ಗುಂಪುಗಳಲ್ಲಿ ಎರಡು ವಿಭಿನ್ನ ಮಾರ್ಗಗಳು ಸೃಷ್ಟಿಯಾದವು. ಸಿಪಿಐಎಂಎಲ್ ಪೀಪಲ್ಸ್ ವಾರ್ ತನ್ನದೇ ಆದ ಮಾರ್ಗವನ್ನು ಅನುಸರಿಸಿ ನಂತರ ಹಲವು ಸಮಾನ ಮನಸ್ಕ ಪಕ್ಷಗಳಾದ ಎಂಸಿಸಿ ಮತ್ತು ಸಿಪಿಐಎಂಎಲ್ (ಪಕ್ಷ ಐಕ್ಯ) ಗಳ ಜೊತೆ ಸೇರಿ ಸಿಪಿಐ ಮಾವೊವಾದಿ ಎಂಬ ಹೊಸ ಹೆಸರಿನಲ್ಲಿ ಕಾರ್ಯಾಚರಣೆ ಆರಂಭಿಸಿತು. ಬದಲಾದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಂದರ್ಭಗಳ ಹಿನ್ನೆಲೆಯಲ್ಲಿ ಯಾವುದೇ ರೀತಿಯ ಪಾಠ ಕಲಿಯದ ಈ ಗುಂಪುಗಳು ಸಮೂಹ ಹೋರಾಟಗಳಿಗಿಂತಲೂ ಸಶಸ್ತ್ರ ಹೋರಾಟಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದವು. ಮತ್ತೊಂದೆಡೆ ಸಿಪಿಐಎಂಎಲ್ ಲಿಬರೇಷನ್ ಪಕ್ಷವು ತತ್ವ ಮತ್ತು ಕಾರ್ಯಚಟುವಟಿಕೆಗಳಲ್ಲಿ ಇದ್ದಂತಹ ಅರಾಜಕತೆಯ ಸನ್ನಿವೇಶದ ವಿರುದ್ಧ ಸಂಘರ್ಷ ಸಾರುತ್ತಲೇ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ನೆಲೆಯನ್ನು ಪುನರ್‌ಮನನ ಮಾಡುವ ಮೂಲಕ ಕಮ್ಯುನಿಸ್ಟ್ ಪರಂಪರೆಯನ್ನು ಮುಂದುವರೆಸಲು ನಿರ್ಧರಿಸಿದ್ದೇ ಅಲ್ಲದೆ ಕ್ರಾಂತಿಕಾರಿ ಸಮೂಹ ಹೋರಾಟಗಳು ಮತ್ತು ರಾಜಕೀಯ ಚಟುವಟಿಕೆಗಳಿಗೆ ಒತ್ತಾಸೆಯಾಗಿ ನಿಲ್ಲಲು ನಿರ್ಧರಿಸಲಾಯಿತು. ಮತ್ತೊಂದೆಡೆ ಪಕ್ಷ ಆಂತರಿಕವಾಗಿದ್ದ ವಿಭಿನ್ನ ದೋರಣೆಗಳ ವಿರುದ್ಧ ಸೆಣಸಬೇಕಿತ್ತು. ಮಾರ್ಕ್ಸ್‌ವಾದದ ಬಗ್ಗೆ ಭ್ರಮನಿರಸನ ಹೊಂದಿದ ಹಲವು ಸಂಗಾತಿಗಳು ಕಮ್ಯುನಿಸ್ಟ್ ಪಕ್ಷವನ್ನೇ ತೊರೆಯಲು ನಿರ್ಧರಿಸಿದ್ದರು. ಈ ಅವಸಾನವಾದವನ್ನು ನಿಭಾಯಿಸುವುದು ಪಕ್ಷದ ಮುಂದಿದ್ದ ಬೃಹತ್ ಸವಾಲಾಗಿತ್ತು. 1990ರಲ್ಲಿ ಐಪಿಎಫ್ ನೇತೃತ್ವದಲ್ಲಿ ಸಾವಿರಾರು ಬಡ ರೈತರು ಮತ್ತು ಕೃಷಿ ಕಾರ್ಮಿಕರು ದೆಹಲಿಯ ರಸ್ತೆಗಳಲ್ಲಿ ಪ್ರತಿಭಟನೆಯ ರ್‍ಯಾಲಿ ಹಮ್ಮಿಕೊಂಡಾಗ ಅದು ಕ್ರಾಂತಿಕಾರಿ ಎಡಪಂಥೀಯ ಹೋರಾಟದಲ್ಲಿ ಬಡ ಮತ್ತು ದಮನಿತ

ಜನಸಮುದಾಯಗಳ ರಾಜಕೀಯ ಹಕ್ಕೊತ್ತಾಯವಾಗಿ ರೂಪುಗೊಂಡಿತ್ತು. ಆಗ ಮಾಧ್ಯಮಗಳು ಈ ಹೋರಾಟವನ್ನು ಕಡು ಬಡವರ ಹೋರಾಟವೆಂದೂ, ಬಡ ಜನತೆ ರಾಷ್ಟ್ರ ರಾಜಕಾರಣದ ಪ್ರಧಾನ ವೇದಿಕೆಯನ್ನು ಆಕ್ರಮಿಸಿರುವುದಾಗಿಯೂ ಬಣ್ಣಿಸಿದ್ದವು. 1990ರ ಜುಲೈ ತಿಂಗಳಲ್ಲಿ ದೆಹಲಿಯಲ್ಲಿ ನಡೆದ ಪಕ್ಷದ ವಿಶೇಷ ಅಧಿವೇಶನದಲ್ಲಿ 20 ವರ್ಷಗಳ ನಂತರ ಪಕ್ಷ ಮುಕ್ತ ರಾಜಕಾರಣದಲ್ಲಿ ಭಾಗವಹಿಸಲು ಅನುಮೋದನೆ ದೊರೆತಿತ್ತು. ಇದೇ ವೇಳೆ ಎಐಸಿಸಿಟಿಯು ಮತ್ತು ಐಸಾ ಸಂಘಟನೆಗಳನ್ನು ಸ್ಥಾಪಿಸಲಾಗಿತ್ತು. ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದದ ಪತನ ಮತ್ತು ದೇಶದಲ್ಲಿ ನರಸಿಂಹರಾವ್–ಮನಮೋಹನ್ ಸಿಂಗ್ ಜೋಡಿಯ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಯನ್ನು ಅಧಿಕೃತವಾಗಿ ಜಾರಿಗೊಳಿಸಿದ ಹಿನ್ನೆಲೆಯಲ್ಲಿ, ಬಾಬ್ರಿ ಮಸೀದಿಯ ಧ್ವಂಸದ ಹಿನ್ನೆಲೆಯಲ್ಲಿ ಪಕ್ಷ ಮುಕ್ತ ರಾಜಕೀಯ ಪ್ರವೇಶಕ್ಕೆ ಸಜ್ಜಾಯಿತು. 1992ರಲ್ಲಿ ಕೊಲ್ಕತ್ತದಲ್ಲಿ ನಡೆದ 5ನೇ ಮಹಾಧಿವೇಶನ ಇದಕ್ಕೆ ಸಾಕ್ಷಿಯಾಗಿತ್ತು.

**ಕರ್ನಾಟಕದಲ್ಲಿ ಪಕ್ಷದ ಬೆಳವಣಿಗೆಯ ಎರಡನೆಯ ಹಂತ:**

ಮೈಸೂರಿನಲ್ಲಿ ಸಂಗಾತಿಗಳು ಮಾರ್ಕ್ಸ್‌ವಾದಿ ಅಧ್ಯಯನ ಕೇಂದ್ರದ ಚಟುವಟಿಕೆಗಳನ್ನು ಮುಂದುವರೆಸಿದ್ದರು. ನಾಗರಿಕ ಹಕ್ಕು ಹೋರಾಟಗಳ ಮುಖೇನ ಪಕ್ಷದ ಚಟುವಟಿಕೆಗಳು ಮುಂದುವರೆದಿದ್ದವು. ವಿಭಿನ್ನ ದಲಿತ ಸಂಘರ್ಷ ಹೋರಾಟಗಳು ಮತ್ತು ಮಹಿಳಾ ಚಳುವಳಿಗಳೊಡನೆ ಈ ಅಧ್ಯಯನ ಕೇಂದ್ರ ಸಕ್ರಿಯವಾಗುವ ಮೂಲಕ ಸಮನ್ವಯ ಸಾಧಿಸಿತ್ತು. ಇಂದಿರಾಗಾಂಧಿಯ ಹತ್ಯೆಯ ಹಿನ್ನೆಲೆಯಲ್ಲಿ 1984ರಲ್ಲಿ ಐಪಿಎಫ್‌ನ ಎರಡನೆಯ ಮಹಾಧಿವೇಶನವನ್ನು ಏರ್ಪಡಿಸಲಾಗಿತ್ತು. ದಕ್ಷಿಣ ಭಾರತದ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಆದರೆ ದಕ್ಷಿಣ ಭಾರತಕ್ಕಾಗಿಯೇ ನಡೆದ ಪ್ರತ್ಯೇಕ ವಿಶೇಷ ಅಧಿವೇಶನದಲ್ಲಿ ಮೈಸೂರಿನ ಸಂಗಾತಿಗಳು ಪ್ರಮುಖ ಪಾತ್ರ ವಹಿಸಿದ್ದರು. ಅಂದಿನ ಐಪಿಎಫ್ ಅಧ್ಯಕ್ಷ ನಾಗಭೂಷಣ್ ಪಟ್ನಾಯಕ್ 1988ರಲ್ಲಿ ಕರ್ನಾಟಕಕ್ಕೆ ಭೇಟಿ ನೀಡಿ ದಲಿತ ಸಂಘರ್ಷ ಸಮಿತಿಯ ಅಧ್ಯಯನ ಶಿಬಿರದಲ್ಲಿ ಮಾತನಾಡಿದ್ದರು.

ಬೆಂಗಳೂರಿನಲ್ಲಿ ಎಐಸಿಸಿಟಿಯು ಸ್ಥಾಪನೆಯಾಗುವ ಮುನ್ನವೇ ಪೀಣ್ಯಾ ಸಣ್ಣ ಕೈಗಾರಿಕಾ ವಲಯ ಪ್ರದೇಶದ ಕಾರ್ಖಾನೆಗಳಲ್ಲಿ 1987ರಿಂದಲೇ ಕಾರ್ಮಿಕ ಸಂಘಟನೆಗಳನ್ನು ಸ್ಥಾಪಿಸುವ ಚಟುವಟಿಕೆ ಆರಂಭವಾಗಿತ್ತು. ಎಕ್ಸೆಲ್‌ವಾಕ್, ಮೈನಿ, ಸುರ್ ಹೆನ್ನಿಂಗ್ ಮುಂತಾದ ಕಾರ್ಖಾನೆಗಳಲ್ಲಿ ಕಾರ್ಮಿಕ ಸಂಘಟನೆಯ ಚಟುವಟಿಕೆಗಳನ್ನು ಆರಂಭಿಸಿದ್ದೆವು. ಎಡಪಂಥೀಯ ಕಾರ್ಮಿಕ ಸಂಘಟನೆಗಳ ಒಳಗಿನಿಂದಲೇ ಗುಂಪುಗಳ ಮೂಲಕ ಸಕ್ರಿಯವಾಗಿರುವುದು ನಮ್ಮ ಕಾರ್ಯತಂತ್ರವಾಗಿತ್ತು. ಕನಿಷ್ಠ ವೇತನ ನಮ್ಮ ಹೋರಾಟದ ಪ್ರಮುಖ

ವಿಷಯವಾಗಿತ್ತು. ಕ್ರಮೇಣ ಕರ್ನಾಟಕ ಜನರಲ್ ಲೇಬರ್ ಯೂನಿಯನ್ ಸ್ಥಾಪಿಸುವ ಮೂಲಕ ನಮ್ಮದೇ ಆದ ಕಾರ್ಮಿಕ ಸಂಘಟನೆಯನ್ನು ಸ್ಥಾಪಿಸಿದ್ದೆವು. ನಂತರ ಇದು ಎಐಸಿಸಿಟಿಯು ಸಂಘಟನೆಯೊಡನೆ ಸಂಯೋಜಿತವಾಗಿತ್ತು. ಸರ್ಕಾರಿ ನೌಕರರ ಕಾರ್ಮಿಕ ಸಂಘಟನೆಯ ಚಳುವಳಿಗಳಲ್ಲಿ ಅಪಾರ ಅನುಭವ ಹೊಂದಿದ್ದ ಹಿರಿಯ ಸಂಗಾತಿಯೊಬ್ಬರು ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ನಮ್ಮ ಕಾರ್ಮಿಕ ಚಳುವಳಿ ಕಟ್ಟಲು ಸಾಕಷ್ಟು ಸಹಯೋಗ ನೀಡಿದ್ದರು. 1989ರಲ್ಲಿ ಏರ್ಪಡಿಸಿದ್ದ ಕಾರ್ಮಿಕ ಸಮಾವೇಶದಲ್ಲಿ ಐದು ನೂರಕ್ಕೂ ಹೆಚ್ಚು ಕಾರ್ಮಿಕರು ಅತಿ ಉತ್ಸಾಹದಿಂದ ಭಾಗವಹಿಸಿದ್ದರು. ಕಾರ್ಮಿಕರಿಗೆ ರಾಜಕೀಯ ಶಿಕ್ಷಣ ನೀಡುವುದು ಮತ್ತು ಮಾರ್ಕ್ಸ್‌ವಾದಿ ಚಿಂತನೆಯನ್ನು ಪರಿಚಯಿಸುವುದು ನಮ್ಮ ಉದ್ದೇಶವಾಗಿತ್ತು. 1990ರಲ್ಲಿ ಐಪಿಎಫ್ ನೇತೃತ್ವದಲ್ಲಿ ವಿಧಾನಸೌಧದ ಮುಂದೆ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಪ್ರತಿಭಟನೆಯಲ್ಲಿ ಕಾರ್ಮಿಕರೇ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. 1991ರ ಕಾವೇರಿ ಗಲಭೆಗಳ ಸಂದರ್ಭದಲ್ಲಿ ನಮ್ಮ ಸಂಗಾತಿಗಳು ತಮಿಳು ಅಲ್ಪಸಂಖ್ಯಾತ ವರ್ಗಕೆ ಸೇರಿದ ಕಾರ್ಮಿಕರಿಗೆ ರಕ್ಷಣೆ ನೀಡುತ್ತಿದ್ದಾಗ ಅವರಲ್ಲಿದ್ದ ವರ್ಗ ಪ್ರಜ್ಞೆ ಮತ್ತು ರಾಜಕೀಯ ಪ್ರಜ್ಞೆ ನಿಚ್ಚಳವಾಗಿ ಕಾಣುತ್ತಿತ್ತು.

ಜುಲೈ 2001ರಲ್ಲಿ ಭವಿಷ್ಯ ನಿಧಿ ವಿಚಾರವಾಗಿ ಪೀಣ್ಯ ಕೈಗಾರಿಕಾ ಪ್ರದೇಶದ ಕಾರ್ಮಿಕರು ನಡೆಸಿದ ಬೃಹತ್ ಪ್ರತಿಭಟನೆಯನ್ನು ನಿರ್ಲಕ್ಷಿಸಲಾಗುವುದಿಲ್ಲ. ಪೊಲೀಸರ ಭೀಕರ ಅಟ್ಟಹಾಸದ ವಾತಾವರಣದಲ್ಲಿ ಕೇವಲ ಎಐಸಿಸಿಟಿಯು ಕಾರ್ಮಿಕರು ಸಕ್ರಿಯವಾಗಿ ಭಾಗವಹಿಸಿದ್ದರು. ಎಐಸಿಸಿಟಿಯು ವತಿಯಿಂದ ಪ್ರತಿಭಟನೆ ನಡೆಸಲು ಪೊಲೀಸ್ ಅನುಮತಿಗಾಗಿ ಅರ್ಜಿ ಸಲ್ಲಿಸಲಾಗಿತ್ತು. ಆದರೆ ಪೊಲೀಸರು ಅನುಮತಿ ನೀಡಲು ನಿರಾಕರಿಸಿದ್ದೇ ಅಲ್ಲದೆ ನಮ್ಮ ಪಕ್ಷದ ನಾಯಕರನ್ನು ಮತ್ತೊಬ್ಬ ಕಾರ್ಯಕರ್ತನೊಂದಿಗೆ ಬಂಧಿಸಿದ್ದರು. ಪ್ರತಿಭಟನೆಯ ಸ್ಥಳದಲ್ಲಿ, ಪ್ರತಿಭಟನೆ ರದ್ದಾದರೂ ಸಹ, 250ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನು ನೀರಿನ ಗನ್‌ಗಳೊಡನೆ ನಿಯೋಜಿಸಲಾಗಿತ್ತು. ಮುಫ್ತಿಯಲ್ಲಿದ್ದ ಪೊಲೀಸರು ಎಲ್ಲೆಡೆ ಕಾಣುತ್ತಿದ್ದರು. ಪೀಣ್ಯ ಕೈಗಾರಿಕಾ ವಲಯದ ನೂರಾರು ಕಾರ್ಮಿಕರು ಎಐಸಿಸಿಟಿಯು ನೀಡಿದ್ದ ಕರೆಗೆ ಸ್ಪಂದಿಸಿದ್ದರು. ಆದರೆ ಪೊಲೀಸ್ ಸಿಬ್ಬಂದಿಯನ್ನು ಕಂಡು ಹಿಂದಿರುಗಿದ್ದರು. ಇದು ಏಕೈಕ ಪ್ರಕರಣವೇ ಆದರೂ ಎಐಸಿಸಿಟಿಯು ಸಂಘಟನೆಯ ಕ್ರಾಂತಿಕಾರಿ ಲಕ್ಷಣದ ಬಗ್ಗೆ ಕಾರ್ಮಿಕರಲ್ಲಿ ಮತ್ತು ಎಡಪಂಥೀಯ ಪಕ್ಷಗಳಲ್ಲಿ ಸ್ಪಷ್ಟ ಅರಿವು ಮೂಡಲು ಸಹಕಾರಿಯಾಗಿತ್ತು.

ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘಟನೆ ಶುರುವಾಗುವುದಕ್ಕೂ ಮುನ್ನಾವೆ, ಬೆಂಗಳೂರಿನಲ್ಲಿ ಪ್ರಗತಿ ಪರ ಮಹಿಳಾ ಸಂಘಟನೆಯ ಹೆಸರಿನಲ್ಲಿ ಮಹಿಳೆಯರ ಸಂಘಟನೆ ಪ್ರಾರಂಭಮಾಡಿದ್ದೇವು. ಸಣ್ಣ ಗುಂಪು ಆಗಿದ್ದರೂ ಸಹ ಕರ್ನಾಟಕ ಮಹಿಳಾ ಚಳುವಳಿಗಳಲ್ಲಿ ತನ್ನ ಅಸ್ತಿತ್ವವನ್ನು ಸ್ಥಾಪಿಸಿತ್ತು. 1996ರಲ್ಲಿ ಅಂತರಾಷ್ಟ್ರಿಯ ವಿಶ್ವಸುಂದರಿ ಸ್ಪರ್ದೆಗೆ ವಿರುದ್ಧವಾಗಿ ನಡೆದ ಹೋರಾಟದಲ್ಲಿ ಬೇರೆ ಮಹಿಳಾ ಸಂಘಟನೆಗಳ ಜೊತೆಯಲ್ಲಿ ನಾವು ಸಹ ಭಾಗವಹಿಸಿದ್ದೇವು. ನಮ್ಮ ಪಕ್ಷದ ಮಹಿಳಾ ನಾಯಕರು ಆ ಹೋರಾಟದಲ್ಲಿ ಬಂಧನಕ್ಕೊಳಗಾಗಿದ್ದರೂ. ವಿಶೇಷವೇನೆಂದರೇ, ಅದೇ ಹೋರಾಟದಲ್ಲಿ ಬಂಧನಕ್ಕೊಳಗಾಗಿದ್ದ ಇನ್ನೋಂದು ಎಂಎಲ್ ಗುಂಪಿಗೆ ಸೇರಿದ್ದ ಮಹಿಳಾ ಸಂಗಾತಿಯೊಬ್ಬರು ಪ್ರಸ್ತುತ ನಮ್ಮ ಪಕ್ಷಕೆ ಸೇರಿ, ಪಕ್ಷದ ಮುಂಚೂನಿ ನಾಯಕರಾಗಿದ್ದಾರೆ.

1997ರಲ್ಲಿ ದಲಿತ ಸಂಘರ್ಷ ಸಮಿತಿಯ ಕೆಲವು ಯುವ ನಾಯಕರು ಪಕ್ಷವನ್ನು ಸಂಪರ್ಕಿಸಿದ್ದರು. ನಮ್ಮನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಅವರು ಮದ್ಯಪಾನ ವಿರೋಧಿ ಅಂದೋಲನದಲ್ಲಿ ಸಕ್ರಿಯರಾಗಿದ್ದರು. 30 ವರ್ಷದ ನಕ್ಸಲ್‌ಬಾರಿ ಸಂದರ್ಭದಲ್ಲಿ ನಮ್ಮನ್ನು ಸಂಪರ್ಕಿಸುತ್ತಿದ್ದರು. 1998ರಲ್ಲಿ ನಮ್ಮ ಪಕ್ಷ ಮೈಸೂರು ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ 4716 ಮತಗಳನ್ನು ಗಳಿಸಿತ್ತು. ದಕ್ಷಿಣ ಭಾರತದಲ್ಲಿ ಆ ಚುನಾವಣೆಗಳಲ್ಲಿ ನಮ್ಮ ಪಕ್ಷ ಗಳಿಸಿದ ಹೆಚ್ಚಿನ ಮತ ಇದಾಗಿತ್ತು. ಈ ಮತಗಳು ಬಹುತೇಕವಾಗಿ ದಲಿತ ಸಮುದಾಯದ ಬಡ ರೈತರು ಮತ್ತು ಕೃಷಿಕಾರ್ಮಿಕರದ್ದಾಗಿತ್ತು. ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ನಾವು ಮಹಿಳಾ ಕೃಷಿ ಕಾರ್ಮಿಕರನ್ನು ಸಂಘಟಿಸಿ ಉತ್ತಮ ಕೂಲಿಗಾಗಿ ಆಗ್ರಹಿಸಿ, ಬಡ್ಡಿ ರಹಿತ ಸಣ್ಣ ಸಾಲ ಮತ್ತು ಇತರ ಮಹಿಳಾ ಸಮಸ್ಯೆಗಳನ್ನು ಬಗೆಹರಿಸಲು ಆಗ್ರಹಿಸಿ ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಧರಣಿ ಸತ್ಯಾಗ್ರಹ ನಡೆಸಿದ್ದೆವು. ಪ್ರಮುಖ ಸಂಗಾತಿಯೊಬ್ಬರು ಹರಪನಹಳ್ಳಿಗೆ ಹೋಗಿದ್ದರಿಂದ ಅಲ್ಲಿಯೂ ನಮ್ಮ ಕಾರ್ಯಕ್ಷೇತ್ರ ವಿಸ್ತರಿಸಿತ್ತು. ದಾವಣಗೆರೆ ಮತ್ತು ಬಳ್ಳಾರಿ ಜಿಲ್ಲೆಯಲ್ಲಿಯೂ ನಮ್ಮ ಪಕ್ಷದ ಚಟುವಟಿಕೆಗಳು ಚುರುಕುಗೊಂಡವು. ಕೊಪ್ಪಳ ಜಿಲ್ಲೆಯ ಹಿರಿಯ ಸಂಗಾತಿಯೊಬ್ಬರು 2003ರಲ್ಲಿ ನಮ್ಮ ಪಕ್ಷಕ್ಕೆ ಸೇರ್ಪಡೆಯಾಗಿದ್ದರು. ಹರಪನಹಳ್ಳಿಯ ನಮ್ಮ ಸಂಗಾತಿಗಳು ಯಾವುದೋ ಒಂದು ಸುಳ್ಳು ಮೊಕದ್ದಮೆಯಲ್ಲಿ ಜೈಲುಶಿಕ್ಷೆ ಅನುಭವಿಸುತ್ತಿದ್ದಾಗ ಈ ಸಂಗಾತಿಯನ್ನು ಜೈಲಿನಲ್ಲೇ ಭೇಟಿಯಾಗಿದ್ದರು. ಕೊಪ್ಪಳ ಜಿಲ್ಲೆಯಲ್ಲೂ ನಮ್ಮ ಪಕ್ಷದ ಚಟುವಟಿಕೆ ವಿಸ್ತರಿಸಿತ್ತು. ನಮ್ಮ ಪಕ್ಷ ಭೂಮಿ, ಕೂಲಿ, ಸಾಮಾಜಿಕ ಘನತೆಗಾಗಿ ಹೋರಾಡುವ ಪಕ್ಷ ಎಂದು ಜನಜನಿತವಾಯಿತು. ಹಸಿರು ಶಾಲುಗಳ ಬದಲು ಕೃಷಿ ಕಾರ್ಮಿಕರಿಗೆ ಕೆಂಪು ಶಾಲು ಹೊದೆಯಲು ಸೂಚಿಸಿದೆವು. ಕೆಂಪುಶಾಲು ನಮ್ಮ ಕೃಷಿಕಾರ್ಮಿಕ

ಆಂದೋಲನದ ಸಂಕೇತವಾಗಿ ಹೊರಹೊಮ್ಮಿತ್ತು. ಹಾಗೆಯೇ ಶ್ರೀಮಂತ ರೈತರನ್ನು ಪ್ರತಿನಿಧಿಸುವ ಕರ್ನಾಟಕ ರಾಜ್ಯ ರೈತ ಸಂಘಕ್ಕೆ ಪರ್ಯಾಯ ರಾಜಕೀಯ ಶಕ್ತಿಯಾಗಿ ಬೆಳೆಯಿತು. ನಮ್ಮ ಪಕ್ಷ ಸತತವಾಗಿ ಗ್ರಾಮೀಣ ಬಡಜನತೆಯ ಪರವಾಗಿ ಹೋರಾಡುವ ಪಕ್ಷವಾಗಿ ಗುರುತಿಸಿಕೊಂಡಿದೆ. 2004 ಮತ್ತು 2008ರ ಚುನಾವಣೆಗಳಲ್ಲಿ ನಮ್ಮ ಪಕ್ಷ 12 ಸಾವಿರ ಮತಗಳನ್ನು ಗಳಿಸಿತ್ತು. ಅ ಚುನಾವಣೆಗಳಲ್ಲಿ ಒಂದು ಓಟಿನೋಟಿನೆ ಒಂದು ನೋಟು ಕೊಡಿ ಎಂಬ ಚುನಾವಣಾ ಪ್ರಚಾರವು ಜನಜನಿತವಾದ್ದರಿಂದ ಬೇರೆ ಪಕ್ಷಗಳಿಗಿಂತ ಭಿನ್ನಾವಾಗಿ ನಮ್ಮ ಅಭ್ಯರ್ಥಿಗಳು ಬಡಜನರ ಮತ್ತು ತುಳಿತಕ್ಕೊಳಾಗದವರ ಹೋರಾಟಗಳಲ್ಲಿ ಮುಂಚೂಣಿಯಲ್ಲಿರುತ್ತಾರೆ ಎನ್ನುವುದೇ ನಮ್ಮ ಪಕ್ಷದ ಭರವಸೆಯಾಗಿತ್ತು. ಬೆಂಗಳೂರು, ಮೈಸೂರು, ದಾವಣಗೆರೆ, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ನಮ್ಮ ಪಕ್ಷ ಹಲವಾರು ಚುನಾವಣೆಗಳಲ್ಲಿ ಸ್ಪರ್ಧಿಸಿತ್ತು. ಇವುಗಳಲ್ಲಿ ಮುಖ್ಯವಾಗಿ 2008ರಲ್ಲಿ ಕನಕಗಿರಿ ಚುನಾವಣೆಯಲ್ಲಿ ಪಕ್ಷ 6800 ಮತ ಗಳಿಸಿದ್ದು ಉತ್ತಮ ಸಾಧನೆಯಾಗಿತ್ತು.

ಕರ್ನಾಟಕದ ಎಡಪಕ್ಷಗಳ ಅನುಭವವನ್ನು ನೋಡಿದಾಗ ಕೇವಲ ಕಾರ್ಮಿಕ ಸಂಘಟನೆಗಳನ್ನು ಆಧರಿಸಿ ಪಕ್ಷ ಕಟ್ಟುವುದು ಸಾಧ್ಯವಿಲ್ಲ ಎಂದು ಸ್ಪಷ್ಟವಾಗುತ್ತದೆ. ಸರ್ಕಾರದ ಕಾರ್ಪೋರೇಟ್ ಪರ ಆಡಳಿತ ನೀತಿಯ ಪರಿಣಾಮವಾಗಿ ಕಳೆದ ಎರಡು ದಶಕಗಳಲ್ಲಿ ಹೆಚ್ಚಾಗುತ್ತಲೇ ಇರುವ ಕೃಷಿ ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸಿ ಅವರನ್ನು ಕ್ರೋಢೀಕರಿಸುವ ಯಾವುದೇ ಪ್ರಯತ್ನಗಳು ಇತರ ರಾಜಕೀಯ ಪಕ್ಷಗಳಿಂದ ಕಂಡುಬಂದಿರಲಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಮಾತ್ರ ಸಕ್ರಿಯವಾಗಿತ್ತು. ಇದು ದಲಿತರನ್ನು ಮತ್ತು ಇತರ ಕೃಷಿ ಕಾರ್ಮಿಕರನ್ನು ಶೋಷಣೆ ಮಾಡುವ ಶ್ರೀಮಂತ ಮತ್ತು ಮಧ್ಯಮವರ್ಗದ ರೈತರನ್ನು ಮಾತ್ರ ಪ್ರತಿನಿಧಿಸುತ್ತಿತ್ತು. 1970–80ರ ದಶಕದಿಂದಲು ಗ್ರಾಮೀಣ ಪ್ರದೇಶದ ದಲಿತ ದುಡಿಯುವ ವರ್ಗಗಳ ಪರವಾಗಿ ಹೋರಾಡುತ್ತಿರುವ ದಲಿತ ಚಳುವಳಿ ಕ್ರಮೇಣ ನಗರ ಕೇಂದ್ರಿತವಾಗಿ ನಗರಗಳಿಗೆ ಸೀಮಿತವಾಗಿದ್ದವು. ಇಂತಹ ಸನ್ನಿವೇಶದಲ್ಲಿ ನಮ್ಮದೇ ಆದ ಅಧ್ಯಯನ ಮತ್ತು ಶೋಧನೆಯ ಮೂಲಕ , ಕೃಷಿಕಾರ್ಮಿಕರನ್ನು ಒಂದು ರಾಜಕೀಯ ಶಕ್ತಿಯಂತೆ ರೂಪಿಸದೆ ಹೋದರೆ ಯಾವುದೇ ಎಡ ಪಕ್ಷಗಳು ಯಶಸ್ಸು ಕಾಣುವುದಿಲ್ಲ ಎಂಬ ವಾಸ್ತವವನ್ನು ಗ್ರಹಿಸಲು ಸಾಧ್ಯವಾಗಿತ್ತು. ಈ ಸಂದರ್ಭದಲ್ಲಿ ನಾವು ನಮ್ಮ ಕಾರ್ಮಿಕ ಸಂಘಟನೆಗಳಿಗೆ ಹೆಚ್ಚು ಗಮನ ನೀಡದೆ ಕರ್ನಾಟಕದ ಗ್ರಾಮೀಣ ಕೇಂದ್ರಗಳಲ್ಲಿ ಕೃಷಿ ಕಾರ್ಮಿಕರನ್ನು ಸಂಘಟಿಸಲು ತೊಡಗಿದೆವು.

ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ (ಎಐಎಎಲ್ಎ) ದ ಮೂಲಕ ಸಮೂಹ ಹೋರಾಟಗಳನ್ನು ರೂಪಿಸಿದೆವು. ಈ ಸಂಘಟನೆ ಗ್ರಾಮೀಣ ಪ್ರದೇಶಗಳಲ್ಲಿ ನಮ್ಮ ಪಕ್ಷದ ಮುಂಚೂಣಿ ಸಂಘಟನೆಯಾಗಿದೆ. ಹರಪನಹಳ್ಳಿಯಲ್ಲಿ ಬೃಹತ್ ಸಮಾವೇಶವೊಂದನ್ನು ಏರ್ಪಡಿಸಲಾಗಿದ್ದು. ಈ ಸಮಾವೇಶದಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಸಂಗಾತಿ ದೀಪಂಕರ್ ಭಟ್ಟಾಚಾರ್ಯ ಉಪಸ್ಥಿತರಿದ್ದರು. ಉದ್ಯೋಗ ಖಾತರಿ ಯೋಜನೆಯ ಕಾರ್ಮಿಕರಿಗೆ ಹೆಚ್ಚಿನ ಕೂಲಿ ನೀಡಲು ಆಗ್ರಹಿಸಿ, ಭೂರಹಿತರಿಗೆ ಜಮೀನು ಮತ್ತು ವಸತಿರಹಿತರಿಗೆ ಮನೆಯನ್ನು ನೀಡಲು ಆಗ್ರಹಿಸಿ ದಾವಣಗೆರೆ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿತ್ತು. ಮೈಸೂರು ಜಿಲ್ಲೆಯ ಹೆಚ್‌ಡಿ ಕೋಟೆಯ ಎಲ್ಲ ಗ್ರಾಮಗಳಲ್ಲೂ ಪ್ರಚಾರ ನಡೆಸುವ ಮೂಲಕ ನಾವು ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಧರಣಿ ಸತ್ಯಾಗ್ರಹ ಹೂಡಿದ್ದೆವು. ಹೆಚ್‌ಡಿ ಕೋಟೆ ತಹಸೀಲ್ದಾರ್ ಕಚೇರಿಯ ಮುಂದೆ ಬಡ ಕೃಷಿ ಕಾರ್ಮಿಕರಿಗೆ ಭೂಮಿಯನ್ನು ನೀಡುವ ಬೇಡಿಕೆಯೊಂದಿಗೆ ಧರಣಿ ಹೂಡಿದ್ದೆವು. ಈ ಹೋರಾಟಗಳಲ್ಲಿ ಐನೂರಕ್ಕು ಹೆಚ್ಚು ದಲಿತ ಮಹಿಳೆಯರು ಮತ್ತು ಕೃಷಿ ಕಾರ್ಮಿಕರು ಪಾಲ್ಗೊಂಡಿದ್ದು ಮಹತ್ವದ ವಿಚಾರ. ಲಿಬರ್ಹಾನ್ ವರದಿ ಮಂಡಿಸಿದ ನಂತರ ಗಂಗಾವತಿಯಲ್ಲಿ ನಡೆದ ಪಕ್ಷದ ಬೃಹತ್ ರ‍್ಯಾಲಿಯಲ್ಲಿ ಅನೇಕ ಮುಸ್ಲಿಮರನ್ನೂ ಒಳಗೊಂಡಂತೆ 2000ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಬಾಬ್ರಿ ಮಸೀದಿ ಧ್ವಂಸದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅಡ್ವಾಣಿ, ಜೋಷಿ, ಸಿಂಘಲ್ ಮತ್ತಿತರ ಬಿಜೆಪಿ ಆರೆಸ್ಸೆಸ್ ನಾಯಕರನ್ನು ಬಂಧಿಸಲು ಈ ಪ್ರತಿಭಟನೆಯಲ್ಲಿ ಆಗ್ರಹಿಸಲಾಗಿತ್ತು.

**ಪುನಃ ನಗರ ಪ್ರದೇಶಗಳಿಗೆ ಪ್ರವೇಶ:**

ಸಿಪಿಐ ಎಂಎಲ್ ಕೆಲವು ದಿನಗಳ ವಿರಾಮದ ನಂತರ ಅಂದರೆ 2007ರ ನಂತರ ಪುನಃ ನಗರ ಪ್ರದೇಶಗಳ ಕಡೆಗೆ ನಡೆದಿತ್ತು. ಆರ್‌ಎಂಸಿ ರೆಡಿಮಿಕ್ಸ್ ಕಾಂಕ್ರೀಟ್ ಕಾರ್ಖಾನೆಯ ಕಾರ್ಮಿಕರಿಂದ ಆರಂಭವಾದ ನಮ್ಮ ಸಂಘಟನೆಯ ಪಯಣ ಬೆಂಗಳೂರಿನ ಆರ್‌ಡಿಸಿ ಮತ್ತು ಲಫಾರ್ಜ್ , ಚೆನ್ನೈನಲ್ಲಿರುವ ಆರ್‌ಎಂಸಿ, ಮಂಗಳೂರು, ಹೈದರಾಬಾದ್‌ಗೂ ವಿಸ್ತರಿಸಿತ್ತು. ಬೆಂಗಳೂರಿನಲ್ಲಿ ರೆಡಿಮಿಕ್ಸ್ ಕಾರ್ಮಿಕರು ನಮ್ಮ ಪಕ್ಷದ ಬೆನ್ನೆಲುಬಾದರು. ಬೆಂಗಳುರು ಮತ್ತು ತುಮಕೂರಿನಲ್ಲಿರುವ ವಿನಾಯಕ ಸಿಎನ್‌ಸಿ ಹಾಗೂ ಯೂನಿಮಿಕ್ಸ್ ಕಾರ್ಖಾನೆಯಲ್ಲೂ ನಾವು ಸಕ್ರಿಯರಾದೆವು. ನಮ್ಮ ಕಾರ್ಮಿಕ ಸಂಘಟನೆಗೆ ಸಾವಿರಕ್ಕೂ ಹೆಚ್ಚು ಕಟ್ಟಡ ಕಾರ್ಮಿಕರನ್ನು ಸೇರಿಸಿಕೊಂಡೆವು. ಇಲ್ಲಿಯೂ ಸಹ ರೆಡಿಮಿಕ್ಸ್ ಕಾರ್ಮಿಕರೇ ಮುಂಚೂಣಿಯಲ್ಲಿದ್ದರು. ಕ್ರಮೇಣ ನಮ್ಮ ಕಾರ್ಮಿಕ ಸಂಘಟನೆ ಕೇಂದ್ರ ಸರ್ಕಾರದ ಆಸ್ಪತ್ರೆ ನೌಕರರು ಇರುವ ಸಿಜಿಹೆಚ್‌ಎಸ್, ಎನ್‌ಟಿಐ

ಮತ್ತು ನಿಮ್ಹಾನ್ಸ್‌ನಲ್ಲಿ ವಿಸ್ತಾರವಾಗಿತ್ತು. ನಮ್ಮ ಕಾರ್ಮಿಕ ಸಂಘಟನೆಯ ತಳಹದಿಯ ಮೇಲೆ ರಾಜಕೀಯ ಬೆಳವಣಿಗೆಗಳಲ್ಲೂ ನಾವು ಹಸ್ತಕ್ಷೇಪ ಮಾಡುವುದು ಸಾಧ್ಯವಾಯಿತು. ಜನಸಾಮಾನ್ಯರಿಗೆ ಸಂಬಂಧಿಸಿದ ಹಲವಾರು ಸಮಸ್ಯೆಗಳ ಪರಿಹಾರಕ್ಕಾಗಿ ಅನೇಕ ರಾಜಕೀಯ ವಿಚಾರಗಳ ನೆಲೆಯಲ್ಲಿ ಹಲವು ಪ್ರತಿಭಟನೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಇವುಗಳಲ್ಲಿ ಪ್ರಮುಖವಾಗಿ 2012ರಲ್ಲಿ ವಿಧಾನಸೌಧ ಚಲೋ ಕಾರ್ಯಕ್ರಮದಲ್ಲಿ 500ಕ್ಕೂ ಹೆಚ್ಚು ಕಾರ್ಮಿಕರು ಅತ್ಯಂತ ಉತ್ಸಾಹದಿಂದ ಪಾಲ್ಗೊಂಡಿದ್ದರು.

ನಮ್ಮ ಕೆಲವು ಹಿರಿಯ ಸಂಗಾತಿಗಳು ಪಕ್ಷಕ್ಕೆ ಸೇರ್ಪಡೆಯಾಗುವುದರೊಂದಿಗೆ ನಮ್ಮ ಕಾರ್ಮಿಕ ಸಂಘಟನೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗುತ್ತಿಗೆ ಪೌರ ಕಾರ್ಮಿಕರು, ಬೆಂಗಳೂರು ಒಳಚರಂಡಿ ಮತ್ತು ಜಲಮಂಡಲಿಯ ಕಾರ್ಮಿಕರು, ಹೆಚ್ಎಎಲ್, ಬಿಇಎಂಎಲ್, ರೇಸ್ ಕೋರ್ಸ್, ಮೈಕೋ ಬೋಷ್, ಕೆನ್ನಾಮೆಟಲ್ ಮುಂತಾದ ಬೃಹತ್ ಉದ್ದಿಮೆಗಳ ಕಾರ್ಮಿಕರು ಮತ್ತು ಬೀದಿ ಬದಿ ವ್ಯಾಪಾರಿಗಳನ್ನು ಒಳಗೊಂಡು ಬೃಹತ್ ಕಾರ್ಮಿಕ ಸಂಘಟನೆಯಾಗಿ ಬೆಳೆದಿದೆ. ಬಡ ಹಾಗು ದಮನಿತ ಜನತೆಯ ಸಬಲೀಕರಣಕ್ಕಾಗಿ ಶ್ರಮಿಸುವ ಬದ್ಧತೆ ಇರುವ ವಕೀಲರು ಮತ್ತು ಕಾರ್ಯಕರ್ತರ ಒಂದು ತಂಡ ನಮ್ಮ ಬಳಿ ಇದೆ. ಇಂತಹ ಒಂದು ಮಹತ್ತರ ಹೋರಾಟಗಳಲ್ಲಿ ಪ್ರಮುಖವಾದದ್ದೆಂದರೆ ಎಐಸಿಸಿಟಿಯು ಸಂಘಟನೆಗೆ ಸಂಯೋಜಿತವಾಗಿರುವ ಬಿಬಿಎಂಪಿ ಗುತ್ತಿಗೆ ಪೌರಕಾರ್ಮಿಕ ಸಂಘದ ನಿರ್ಣಾಯಕ ಹೋರಾಟ. ಪೌರಕಾರ್ಮಿಕರ ಈ ದಿಟ್ಟ ಹೋರಾಟದ ಪರಿಣಾಮವಾಗಿ ಮಾಸಿಕ 14 ಸಾವಿರ ರೂ ವೇತನ ನಿಗದಿಪಡಿಸಲಾಗಿದೆ. ಇದು ಗುತ್ತಿಗೆ ಕಾರ್ಮಿಕರಿಗೆ ನೀಡಲಾಗುತ್ತಿರುವ ಅತಿ ಹೆಚ್ಚಿನ ವೇತನವಾಗಿದೆ. ಈ ಹೋರಾಟ ಇತರ ದುಡಿಯುವ ವರ್ಗಗಳಿಗೆ, ಸಂಗಾತಿಗಳಿಗೆ ಮಾದರಿಯಾಗಿದೆ.

ಎರಡು ಬಾರಿ ನಾವು ವಿಧಾನಸೌಧ ಚಲೋ ಹೋರಾಟ ಹಮ್ಮಿಕೊಂಡಿದ್ದೆವು. ಒಮ್ಮೆ ಜನರ ಜ್ವಲಂತ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಇನ್ನೊಮ್ಮೆ ಕಾಂಗ್ರೆಸ್ ಸರ್ಕಾರದ ರಾಜೀನಾಮೆಗೆ ಆಗ್ರಹಿಸಿ ಜಾಥಾ ಹಮ್ಮಿಕೊಳ್ಳಲಾಗಿತ್ತು. ಪ್ರಥಮ ಬಾರಿಗೆ ಮೈಸೂರಿನಲ್ಲಿ ಪಕ್ಷದ ಕೇಂದ್ರ ಸಮಿತಿ ಸಭೆಯನ್ನು ಆಯೋಜಿಸಲಾಗಿತ್ತು. ಬೆಂಗಳೂರಿನಲ್ಲಿ ಪಕ್ಷದ ಪ್ರಥಮ ಗುತ್ತಿಗೆ ಕಾರ್ಮಿಕರ ಅಖಿಲ ಭಾರತ ಸಮಾವೇಶವನ್ನೂ ಏರ್ಪಡಿಸಿದ್ದೆವು. ಈ ಮೂಲಕ ದೇಶಾದ್ಯಂತ ಗುತ್ತಿಗೆ ಕಾರ್ಮಿಕರನ್ನು ಸಂಘಟಿಸುವ ಪ್ರಯತ್ನಕ್ಕೆ ಒಂದು ಸ್ಪಷ್ಟ ಆಯಾಮವನ್ನು ನೀಡಿದ್ದೆವು. ಈ ಸಮಾವೇಶದಲ್ಲಿ ಅಖಿಲ ಭಾರತ ಗುತ್ತಿಗೆ ಕಾರ್ಮಿಕರ ಒಕ್ಕೂಟವನ್ನೂ ಸ್ಥಾಪಿಸಲಾಗಿತ್ತು. ಕಾರ್ಪೋರೇಟ್ ಕೋಮುವಾದಿ

ಫ್ಯಾಸಿಸಂ ವಿರುದ್ಧ ಎಡಪಕ್ಷಗಳು ಆಯೋಜಿಸಿದ್ದ ಪ್ರತಿಭಟನಾ ರ್‍ಯಾಲಿಯಲ್ಲಿ ಭಾಗವಹಿಸಿದ್ದೆವು. ಈ ರ್‍ಯಾಲಿಯಲ್ಲಿ ಕಾಂ ಸ್ವಪನ್ ಮುಖರ್ಜಿ, ಸಿಪಿಐ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ ಜಿ ಎಸ್ ಸುಧಾಕರ್, ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯಚೂರಿ ಮತ್ತು ಎಸ್‌ಯುಸಿಐ ನಾಯಕರು ಮಾತನಾಡಿದ್ದರು. ಕಾಶ್ಮೀರದಲ್ಲಿ ಪ್ರಭುತ್ವದಿಂದ ನಡೆಯುತ್ತಿರುವ ದಮನಕಾರಿ ಚಟುವಟಿಕೆಗಳ ವಿರುದ್ಧ ಬೆಂಗಳೂರಿನಲ್ಲಿ ನಮ್ಮ ಪ್ರತಿಭಟನೆ ಮಹತ್ವದ ಹೆಜ್ಜೆಯಾಗಿತ್ತು. ಏಕೆಂದರೆ ಈ ಪ್ರತಿಭಟನೆಯಲ್ಲಿ ನಮ್ಮ ಪಕ್ಷ ಮಾತ್ರವೇ, ಪೊಲೀಸರ ಅನುಮತಿ ಇಲ್ಲದೆ ಹೋದರೂ, ಭಾಗವಹಿಸಿತ್ತು. ಕಾಶ್ಮೀರದ ವಿಚಾರದಲ್ಲಿ ಪ್ರತಿಭಟನಾಕಾರರು ಮತ್ತು  ಕೋಮುವಾದಿಗಳ ನಡುವೆ ಸಂಘರ್ಷವಾಗುತ್ತದೆ ಎಂದು ಪೊಲೀಸರು ಭಾವಿಸಿದ್ದರು. ನಾವು ಈ ಸವಾಲನ್ನು ಸ್ವೀಕರಿಸಿ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದೆವು. ಜನ ವಿರೋಧಿ, ದೇಶ ವಿರೋಧಿ ನೋಟು ಅಮಾನ್ಯೀಕರಣದ ವಿರುದ್ಧ ಹೋರಾಟದಲ್ಲಿ ಆರ್‌ಬಿಐ ಆಕ್ರಮಿಸಿ ಎಂಬ ಹೋರಾಟವನ್ನು ಆರಂಭಿಸುವ ನಮ್ಮ ಪ್ರಯತ್ನಕ್ಕೆ ಪೊಲೀಸರಿಂದ ತೀವ್ರ ಪ್ರತಿರೋಧ ಎದುರಿಸಬೇಕಾಯಿತು. ನಮ್ಮ ಪಕ್ಷದ ಹಿರಿಯ ನಾಯಕರನ್ನು, ಇತರ ಸಂಘಟನೆಗಳ ಕಾರ್ಯಕರ್ತರೊಂದಿಗೆ ಬಂಧಿಸಲಾಯಿತು. ಗೋ ಹತ್ಯೆ ವಿರುದ್ಧ ಸರ್ಕಾರ ಮಂಡಿಸಿದ ಜನವಿರೋಧಿ ಶಾಸನವನ್ನು ವಿರೋಧಿಸಿ ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆಯನ್ನು ಏರ್ಪಡಿಸಲಾಗಿತ್ತು.  ಈ ಪ್ರತಿಭಟನೆಯ ವಿರುದ್ಧ ರಾಜ್ಯ ಸರ್ಕಾರ ಪೊಲೀಸ್ ಶಕ್ತಿಯನ್ನು ಪ್ರದರ್ಶಿಸಿತ್ತು. ನಮ್ಮ ಹಿರಿಯ ನಾಯಕರನ್ನು ಬಂಧಿಸಲಾಯಿತು.

ಕನ್ನಡ ಲಿಬರೇಷನ್ ಪತ್ರಿಕೆಯ ಮೂಲಕ, ಇತರ ಮಾರ್ಕ್ಸ್‌ವಾದಿಗಳು ಮತ್ತು ಪ್ರಗತಿಪರ ಬುದ್ಧಿಜೀವಿಗಳ ಸಹಾಯದಿಂದ ನಾವು ಮಾರ್ಕ್ಸ್‌ವಾದಿ ಚಿಂತನೆಯನ್ನು ಹರಡಲು ಶ್ರಮಿಸುತ್ತಿದ್ದೇವೆ. ತನ್ಮೂಲಕ ಕಮ್ಯುನಿಸ್ಟ್ ಸಿದ್ಧಾಂತದಲ್ಲಿ ಶಿಕ್ಷಣ ಮತ್ತು  ಪ್ರಕಟಣೆಗಳನ್ನು ಹೊರತರಲಾಗುತ್ತಿದೆ. ಇವತ್ತಿನವರೆಗೆ ಐಐಎಂಎಸ್ ಸಂಸ್ಥೆಯ ಚಟುವಟಿಕೆಗಳು ಸಕ್ರಿಯವಾಗಿರುವುದು ಕರ್ನಾಟಕದಲ್ಲಿ ಮಾತ್ರ. ಐಐಎಂಎಸ್ ಆಶ್ರಯದಲ್ಲಿ ನಾವು ರಾಜ್ಯದಲ್ಲಿ ಮಾರ್ಕ್ಸ್‌ವಾದಿ ಸಾಹಿತ್ಯದ ಅಧ್ಯಯನವನ್ನು ನಿರಂತರವಾಗಿ ಮಾಡುತ್ತಿದ್ದೇವೆ. ಅಂಬೇಡ್ಕರ್ ಕುರಿತಂತೆ ಮತ್ತು ಎಡಪಂಥೀಯ ಚಳುವಳಿಯ ಬಗ್ಗೆ ಸಮಕಾಲೀನ ಸಾಹಿತ್ಯ ಕೃತಿಗಳ ಅಧ್ಯಯನ ನಡೆಸಲಾಗುತ್ತಿದೆ. ಎಡಪಂಥೀಯ ಚಳುವಳಿಗಳ ಇತರ ವಾಹಿನಿಗಳಿಂದ ಹಲವಾರು ಗೆಳೆಯರು ಇಂತಹ ಚರ್ಚೆಗಳಲ್ಲಿ ಭಾಗಿಯಾಗುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ.

**ಕರ್ನಾಟಕದಲ್ಲಿ ಪಕ್ಷದ ರಾಜಕೀಯ ಧೋರಣೆಯ ಉನ್ನತಿ**

ರಾಜಕೀಯ ಮತ್ತು ಸೈದ್ಧಾಂತಿಕ ನೆಲೆಯಲ್ಲಿ ನಮ್ಮ ಪಕ್ಷದ ಧೋರಣೆಯನ್ನು ಕರ್ನಾಟಕದ ಸಂದರ್ಭದಲ್ಲಿ ನಮ್ಮ ಕಾರ್ಯಾಚರಣೆಯ ಮೂಲಕವೇ ಸಾಬೀತುಪಡಿಸಲಾಗಿದೆ. ಅನೇಕ ಎಂಎಲ್ ಪಕ್ಷಗಳ ಪೈಕಿ ನಮ್ಮ ಪಕ್ಷಕ್ಕೆ ಅಖಿಲ ಭಾರತ ಮಟ್ಟದ ಕೆಲವು ಲಕ್ಷಣಗಳಿದ್ದು ರಾಜಕೀಯವಾಗಿ ಸಕ್ರಿಯವಾಗಿದೆ. ಹಾಗೆಯೇ ಬೂರ್ಷ್ವಾ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳಿಗೆ ಸಂಬಂಧಿಸಿದಂತೆ ತನ್ನದೇ ಆದ ಸ್ವತಂತ್ರ ನಿಲುವನ್ನು ಪ್ರತಿಪಾದಿಸಿದೆ. ಸಣ್ಣ ಮಟ್ಟದಲ್ಲಾದರೂ ನಿರ್ಣಾಯಕ ರೀತಿಯಲ್ಲಿ ನಮ್ಮ ಪಕ್ಷ ವರ್ಗ ಸಂಘರ್ಷವನ್ನು ಹುಟ್ಟುಹಾಕುವುದರಲ್ಲಿ ಯಶಸ್ವಿಯಾಗಿದ್ದು ಗ್ರಾಮೀಣ ಪ್ರದೇಶಗಳಲ್ಲಿ ಕೆಂಪುಶಾಲುಗಳ ಮೂಲಕ, ಕೃಷಿಕಾರ್ಮಿಕರನ್ನು ಪ್ರತಿನಿಧಿಸುವುದರ ಮೂಲಕ ಶ್ರೀಮಂತ ರೈತರನ್ನು ಪ್ರತಿನಿಧಿಸುವ ಹಸಿರು ಶಾಲುವಿಗೆ ಪರ್ಯಾಯ ನೆಲೆಯನ್ನು ಸೃಷ್ಟಿಸಿದೆ. ಕೆಲವು ಎಂಎಲ್ ಗುಂಪುಗಳು ವರ್ಗ ಆಧಾರಿತ ವಿಚಾರಗಳಿಂದ ವಿಮುಖವಾಗಿರುವ ಸಂದರ್ಭದಲ್ಲಿ ನಾವು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಬಡ ಜನತೆಯನ್ನು ಸಂಘಟಿಸುತ್ತಿದ್ದೇವೆ. ಕಾರ್ಮಿಕ ಸಂಘಟನೆಗಳನ್ನು ಸ್ಥಾಪಿಸುವಾಗಲೂ ನಾವು ದುಡಿಯುವ ವರ್ಗಗಳಲ್ಲಿ ರಾಜಕೀಯ ಪ್ರಜ್ಞೆ ಮೂಡಿಸುವುದು ಮತ್ತು ಕಾರ್ಮಿಕ ಸಂಘಟನೆಗಳಲ್ಲಿ ಪ್ರಜಾತಂತ್ರ ಮೌಲ್ಯಗಳನ್ನು ಕಾಪಾಡುವುದರ ಬಗ್ಗೆ ಹೆಚ್ಚಿನ ಗಮನ ನೀಡುತ್ತಿದ್ದೇವೆ. ಚುನಾವಣಾ ಕ್ಷೇತ್ರದಲ್ಲಿ ನಮ್ಮ ಭಾಗವಹಿಸುವಿಕೆ ಸೀಮಿತವಾಗಿದ್ದರೂ ಸ್ವತಂತ್ರ ಎಡಪಂಥೀಯ ನಿಲುವು ಹೊಂದಿರುವ ಏಕೈಕ ಪಕ್ಷವಾಗಿ ರೂಪುಗೊಂಡಿದ್ದೇವೆ. ವಿಭಿನ್ನ ವಲಯಗಳಲ್ಲಿ ನಮ್ಮ ಬೇರುಗಳು ಗಟ್ಟಿಯಾಗುತ್ತಿದ್ದು ನಮ್ಮ ಪಕ್ಷದ ಬಾಹುಗಳು ಚಾಚುತ್ತಿವೆ. ಆರಂಭದ ಹಂತದಲ್ಲಿ ಕರ್ನಾಟಕದಲ್ಲಿ ಪಕ್ಷವನ್ನು ಬೆಳೆಸಲು ತಮಿಳುನಾಡು ಮತ್ತು ಆಂಧ್ರ ಪ್ರದೇಶದ ಸಂಗಾತಿಗಳು ನೆರವಾಗುತ್ತಿದ್ದರು. ಆ ಹಂತದಿಂದ ನಾವು ನಮ್ಮದೇ ಆದ ಕಾರ್ಯಕರ್ತರ ಪಡೆಯನ್ನು ರೂಪಿಸಿಕೊಂಡು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಶಕ್ತರಾಗಿದ್ದೇವೆ. ಶ್ರಮಜೀವಿಗಳ ಪಕ್ಷವನ್ನು ಕಟ್ಟಿ ಬೆಳೆಸುವ ನಿಟ್ಟಿನಲ್ಲಿ ನಾವು ವಿಭಿನ್ನ ಪ್ರಜಾತಾಂತ್ರಿಕ ಸಂಘಟನೆಗಳೊಡನೆ, ದಲಿತರು, ಮಹಿಳೆಯರು, ಶೈಕ್ಷಣಿಕ ಕ್ಷೇತ್ರದ ಬುದ್ಧಿಜೀವಿಗಳೊಡನೆ ಸಮನ್ವಯ ಸಾಧಿಸಿದ್ದೇವೆ. ಮುಂಬರುವ ದಿನಗಳಲ್ಲಿ ಕರ್ನಾಟಕದಲ್ಲಿ ನಮ್ಮ ಪಕ್ಷವನ್ನು ಒಂದು ಪ್ರಬಲ ಎಡಪಕ್ಷವನ್ನಾಗಿ ರೂಪಿಸಿ ಮುನ್ನಡೆಸಲು ಇದು ಸಕಾಲ.





AICCTU
Bhagat Singh
(Libration)
ಸ್ಥಳ: ಗಂಗಾವತಿ




AICCTU
08.13.2018




PEREIRA
AICCTU
ALL INDIA CENTRAL COUNCIL OF TRADE UNIONS
ರ್‍ಯಾಲಿ ಮತ್ತು ಬಹಿರಂಗ ಸಭೆ




CPI(ML)
ಸಂವಿಧಾನವನ್ನು ಸುಟ್ಟ ಮನುವಾದಿಗಳ ವಿರುದ್ಧ ಮತ್ತು
ಕವಿ ವರವರರಾವ್ ಮತ್ತು ಇತರೆ ಸಾಮಾಜಿಕ ಹೋರಾಟಗಾರರ
ಬಂಧನವನ್ನು ಖಂಡಿಸಿ
CPIML
ಪಕ್ಷದಿಂದ ಪ್ರತಿಭಟನಾ ಮೆರವಣಿಗೆ



Anti-Modi Rally at Bangalore by
CPIML Liberation
AICCTU
(Liberation)
PhotoCollage




I THINK
I QUESTION
I PROTEST
I SEEK ANSWERS
IT IS FORBIDDEN TO FORBID
We will THINK
ARREST LYNCHERS NOT PROFESSORS
Arrest Mob Lynchers And Not Professors !!
I READ MARX AND I AM NOT A TERRORIST
Defeat Modi Emergency!
DEFEND OUR DEMOCRACY
انقلاب
All India Progressive Women's Association
ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘ